# ಯುಗದರ್ಶಿ

ಮುಹಮ್ಮದ್ ಪೈಗಂಬರರ ಸ್ವಭಾವ ಚಿತ್ರ

ಇಸ್ಲಾಂ ಧರ್ಮತತ್ವಗಳ ಸರಳತೆ

ಡಾ| ಕೋವೂರರ ಮತದ್ವೇಷ-ವಿಜ್ಞಾನದ ನಿರಾಕರಣೆ

ಪುರುಷ ಸಂಪರ್ಕ ಇಲ್ಲದೆ ಕನ್ಯೆ ಗರ್ಭಿಣಿ ಆಗುವಳೇ?

ಬಸವಾಪಟ್ಟಣದ ಭಾರತೀಯ ಧರ್ಮ ಸಮ್ಮೇಳನದಲ್ಲಿ

ಯೇಸುಕ್ರಿಸ್ತರು ಮೃತರಾದುದು ಎಲ್ಲಿ?


ತ್ರೈಮಾಸಿಕ

ಮಾರ್ಚ್ 1977

ಅನಾನ್ 1356

ಬೆಲೆ: ರೂ. 1–00


ಎಲೈ ವಿಶ್ವಾಸಿಗಳೇ, ನೀವು ಅಲ್ಲಾಹನಿಗೂ ಅವನ ದೂತನಿಗೂ ನಿಮ್ಮ ಮೇಲಿನ ಅಧಿಕಾರಸ್ಥರಿಗೂ ವಿಧೇಯರಾಗಿರಿ.

—ಪವಿತ್ರ ಖುರ್‌ಆನ್ (4:60)

# ಯುಗರಶ್ಮಿ

ತ್ರೈಮಾಸಿಕ

23/1008, ಅನ್ಸಾರಿ ರೋಡ್,

ಬಂದರ್, ಮಂಗಳೂರು-575001.

ಸಂಪುಟ: 2

ಸಂಚಿಕೆ: 4

ಜನವರಿ — ಮಾರ್ಚ್ 1977 / ಸುಲ್ಹ್-ಅಮಾನ್ 1356

ಸಂಪಾದಕ: ಮುಹಮ್ಮದ್ ಯೂಸುಫ್

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ: ನಾಲ್ಕು ರೂಪಾಯಿಗಳು

## ವಿಷಯ ಸೂಚಿಕೆ:

ಮುಹಮ್ಮದ್ ಪೈಗಂಬರರು

ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

ಮುಹಮ್ಮದ್ ಪೈಗಂಬರರ ಸ್ವಭಾವ ಚಿತ್ರ

ಇಸ್ಲಾಂ ಧರ್ಮತತ್ವಗಳ ಸರಳತೆ

ಡಾ। ಕೋವೂರರ ಮತದ್ವೇಷ – ವಿಜ್ಞಾನದ ನಿರಾಕರಣೆ.

ಪುರುಷ ಸಂಪರ್ಕ ಇಲ್ಲದೇ ಕನ್ಯೆ ಗರ್ಭಿಣಿ ಆಗುವಳೇ ?

ಬಸವಾಪಟ್ಟಣದ ಭಾರತೀಯ ಧರ್ಮಸಮ್ಮೇಳನದಲ್ಲಿ

ರಾಘವೇಂದ್ರ ಗುರೂಜಿಯವರಿಗೆ ಪತ್ರ

ಅರಬ್ ರಾಜ್ಯದ (ಯು. ಎ. ಇ.) ಪತ್ರಿಕೆಯಲ್ಲಿ ಅಹ್ಮದಿಯಾ ಖಲೀಫರ ಭಾವಚಿತ್ರ.

ಅಹ್ಮದಿಯಾ ಸಂಕ್ಷಿಪ್ತ ವಾರ್ತೆಗಳು

ಪುಸ್ತಕ ವಿಭಾಗ – ಯೇಸುಕ್ರಿಸ್ತರು ಮೃತರಾದಂದು ಎಲ್ಲಿ ?

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ


| ಸಂಪುಟ: 2 | ಜನವರಿ – ಮಾರ್ಚ್ 1977 / ಸುಲ್ಹ್–ಅಮಾನ್ 1356 | ಸಂಚಿಕೆ: 4 |
|---|---|---|


## ಮುಹಮ್ಮದ್ ಪೈಗಂಬರರು



ಅಹ್ಮದಿಯಾ ಸಂಘಟನೆಯ ಸ್ಥಾಪಕ
**ಹಜ್ರತ್ ಮಿರ್ಜಾ**
**ಗುಲಾಮ್ ಅಹ್ಮದ್.**

ಓರ್ವನ ಜೀವನದಲ್ಲಿ ಅರಿಷ್ಟತೆಯು ಮತ್ತು ಕಷ್ಟತೆಯು ಕಾಲದ ಹಾಗೆಯೇ ಅಧಿಕಾರ ಶಕ್ತಿಯು ಮತ್ತು ಐಶ್ವರ್ಯದ ಕಾಲ ಸಹ ಬಾರದ ಹೊರತು ಅವನ ಯಥಾರ್ಥ ಸದ್ಗುಣಗಳು ವ್ಯಕ್ತಗೊಳ್ಳಲಾರವು. ಆದರೆ ಪ್ರತೀಕಾರ ಮಾಡಲು ಸಂದರ್ಭ ಲಭಿಸದೆ ಸದಾ ಪರಪೀಡನೆಗೆ ಗುರಿಯಾದವನ ಸಹನೆ ಮತ್ತು ಶತ್ರುವನ್ನು ಎದುರಿಸದೆ ಇರುವಿಕೆ ಯಥಾರ್ಥ ಕ್ಷಮಾಗುಣವಾಗಿ ಗಣಿಸಲ್ಪಡುವುದಿಲ್ಲ. ಕಾರಣವೇನೆಂದರೆ, ಪ್ರತೀಕಾರ ಮಾಡಲು ಸಂದರ್ಭ ಸಿಕ್ಕುವಾಗ ಅವನು ಶತ್ರುವಿನೊಡನೆ ಹೇಗೆಲ್ಲಾ ವರ್ತಿಸುವನೆಂದು ಊಹಿಸಲು ಸಾಧ್ಯವಿಲ್ಲ. ಇದೇ ರೀತಿಯಲ್ಲಿ, ಒಬ್ಬನು ಅಶಕ್ತನೂ ಅಧಿಕಾರವಿಲ್ಲದವನೂ ಬಡವನೂ ಆಗಿರುವ ಸ್ಥಿತಿಯಲ್ಲಿ ಅನ್ಯರ ಮರ್ದನೆಗಳನ್ನು ಸಹಿಸಿಕೊಂಡು ಹಾಗೂ ಅಧಿಕಾರ ಶಕ್ತಿಯು ಮತ್ತು ಐಶ್ಚರ್ಯದ ಅನುಭೋಗಗಳನ್ನು ಪಡೆಯದಿದ್ದರೆ ಅವನ ನೈತಿಕ ಗುಣಗಳನ್ನು ನಿರ್ಣಯಿಸಲು ಸಾಧ್ಯವಿಲ್ಲ. ಅವನು ಒಮ್ಮೆಯಾದರೂ ಯುದ್ಧರಂಗಕ್ಕೆ ಇಳಿಯದಿದ್ದರೆ ಅವನ ಧೀರತೆಯಾಗಲೀ, ಭೀರುತ್ವವಾಗಲೀ, ವ್ಯಕ್ತಪಡಲಾರದು. ಹೀಗೆ ವಿವಿಧ ಅವಸ್ಥೆಗಳು ಓರ್ವನ ಜೀವನದಲ್ಲಿ ಉಂಟಾಗುವ ವರೆಗೆ ಅವನ ಸದ್ಗುಣಗಳ ಕುರಿತು

ಅಭಿಪ್ರಾಯವನ್ನು ಹೇಳುವರೆ ಅಸಾಧ್ಯ. ಅವನು ಎದುರಾಳಿಗಳನ್ನು ಜಯಿಸಿ ಅವರ ಜೀವದ ಅಧಿಕಾರಿಯಾಗಿ ಮಾರ್ಪಟ್ಟರೆ ಅವರೊಡನೆ ಹೇಗೆ ವರ್ತಿಸುವನೆಂದೂ, ಧನಿಕನಾಗಿ ಮಾರ್ಪಟ್ಟರೆ ಬಡವರಿಗೂ ನಿರ್ಗತಿಕರಿಗೂ ದಾನಧರ್ಮ ಮಾಡುವನೋ ಅಥವಾ ಗನವನ್ನೆಲ್ಲಾ ಬಚ್ಚಿಡುತ್ತಾನೋ ಎಂದೂ, ಯುದ್ಧರಂಗಕ್ಕೆ ಇಳಿಯಬೇಕಾಗಿ ಬಂದರೆ ಬೆನ್ನು ತಿರುಗಿಸಿ ಓಡಿ ಹೋಗುವನೋ ಅಥವಾ ಧೀರೋದಾತ್ತನ ಹಾಗೆ ನಿರ್ಭಯವಾಗಿ ಹೋರಾಡುವನೋ ಎಂಬುದನ್ನೂ ಪ್ರಸ್ತುತ ಅವಸ್ಥಾಭೇದಗಳ ಅಭಾವದಿಂದಾಗಿ ನಮಗೆ ನಿರ್ಣಯಿಸಲು ಸಾಧ್ಯವಿಲ್ಲ. ಆದರೆ ಪರಮಾತ್ಮನ ಪ್ರತ್ಯೇಕವಾದ ಕರುಣಾ ಕಟಾಕ್ಷದಿಂದ ನಬಿವರ್ಯರಾದ ಮುಹಮ್ಮದ್ ಪೈಗಂಬರರಿಗೆ ಸಕಲ ನೈತಿಕ ಗುಣಗಳನ್ನು ತನ್ನ ಜೀವನದಲ್ಲಿ ತೋರಿಸಲು ಸೌಭಾಗ್ಯ ಸಿದ್ಧಿಸಿತ್ತು. ಲೋಕ ಚರಿತ್ರೆಯ ಪುಟಗಳನ್ನು ತಿರುವಿ ಹಾಕಿದರೆ ಕಾಣಲಸಾಧ್ಯವಾದ ರೀತಿಯ ಅತುಲ ಪ್ರಭಾವದಿಂದ ಕೂಡಿದ ಔದಾರ್ಯ, ಧೀರತೆ, ಸಹನೆ, ಕ್ಷಮಾಗುಣ, ನೀತಿನಿಷ್ಠೆ ಎಂಬೀ ಗುಣಗಳೆಲ್ಲಾ ಪೈಗಂಬರರ ಜೀವನದಲ್ಲಿ ಪ್ರತಿಫಲಿಸಿದುದನ್ನು ಕಾಣಬಹುದು. ಅಶಕ್ತತೆಯ ಮತ್ತು ಶಕ್ತಿಪ್ರತಾಪದ, ದಾರಿದ್ರ್ಯದ ಮತ್ತು ಐಶ್ವರ್ಯದ ಅವಸ್ಥಾಭೇದ ಘಟ್ಟಗಳೆಲ್ಲೆಲ್ಲಾ ತಾನು ಉತ್ಕೃಷ್ಟಗಳಾದ ಸಕಲ ಸದ್ಗುಣಗಳ ತುಂಬಿದ ಪಾತ್ರೆಯೆಂದು ಪೈಗಂಬರರು ಲೋಕಕ್ಕೆ ತೋರಿಸಿ ಕೊಟ್ಟಿರುವರು. ಅವರ ಶೋಭಾಯಮಾನವಾದ ಜೀವನದಲ್ಲಿ ಪ್ರತಿಫಲಿಸಿ ಕಾಣದ ಲೋಕದ ಯಾವುದೇ ಮಾನುಷಿಕಪೂರ್ಣತೆಯೂ ಮಹನೀಯ ಗುಣವೂ ಇಲ್ಲವೆಂದೇ ಹೇಳಬಹುದು.

—ಹಶ್ಮತ್ ಕಶ್ ಅಹ್ಮದ್.


ಉಚಿತ! ಉಚಿತ!

ಇಸ್ಲಾಂ ಧರ್ಮದಲ್ಲಿ ಯಾಕೆ ವಿಶ್ವಾಸವುಳ್ಳವರಾಗಿದ್ದೀರಿ ಎಂಬ ಪ್ರಶ್ನೆಗೆ ಉತ್ತರವಾಗಿ ಅಹ್ಮದಿಯಾ ಜಮಾತಿನ ಎರಡನೆಯ ಖಲೀಫರಾದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮುಹಮೂದ್ ಅಹ್ಮದ್ ಅವರು ಬೊಂಬಾಯಿ ರೇಡಿಯೋ ಮೂಲಕ ಬಿತ್ತರಿಸಿದ ಒಂದು ಕಿರು ಭಾಷಣದ ಕನ್ನಡಾನುವಾದ—

## ನಾನೇಕೆ ಇಸ್ಲಾಂ ಧರ್ಮದಲ್ಲಿ ವಿಶ್ವಾಸವುಳ್ಳವನಾಗಿದ್ದೇನೆ?

ಉಚಿತವಾಗಿ ಕಳುಹಿಸಲಾಗುವುದು. ಬರೆಯಿರಿ:

**M. P. Ibrahim**
Secretary Tabligue
Anjuman Ahmadiya
P. O. Kunjathur
Via-MANJESHWAR-670323.

# ಮುಹಮ್ಮದ್ ಪೈಗಂಬರರ ನುಡಿ ಮುತ್ತುಗಳು

1. ಪರಮಾತ್ಮನಿಗೆ ಅವಿಧೇಯನಾಗುವ ಆಜ್ಞೆಯು ಹೊರತು ಒಬ್ಬ ಮುಸ್ಲಿಮನು ತನ್ನ ಆಡಳಿತಾಧಿಕಾರಿಗೆ ಎಲ್ಲಾ ರೀತಿಯಲ್ಲೂ ವಿಧೇಯನಾಗಬೇಕಾಗಿದೆ–ಪರಮಾತ್ಮನಿಗೆ ಅವಿಧೇಯನಾಗಲು ಅವನು ಆಜ್ಞಾಪಿಸಲ್ಪಟ್ಟರೆ, ಅದನ್ನು ಅನುಸರಿಸುವುದು ಅವನ ಕರ್ತವ್ಯವಲ್ಲ.

2. ಬಲಹೀನರ ಹಕ್ಕುಗಳನ್ನು ರಕ್ಷಿಸದ ಜನತೆಯನ್ನು ದೇವರು ಹರಸಲಿಕ್ಕಿಲ್ಲ.

3. ನೀತಿವಂತನಾದ ಆಡಳಿತಾಧಿಕಾರಿಯು ದೇವರ ಸಂತೃಪ್ತಿಯನ್ನೂ ಸಾಮಿಪ್ಯವನ್ನೂ ಪಡೆಯುವನು; ನೀತಿವಂತನಲ್ಲದ ಆಡಳಿತಾಧಿಕಾರಿ ದೇವರ ಕೋಪಕ್ಕೆ ಗುರಿಯಾಗಿ, ದೇವರಿಂದ ವಿದೂರನಾಗುವನು.

4. ನನ್ನ ಜನತೆಗೆ ದುರ್ಬೋಧನೆಯನ್ನು ನೀಡುವ ನಾಯಕರ ಕುರಿತು ನಾನು ಹೆದರಿಕೆಯುಳ್ಳವನಾಗಿದ್ದೇನೆ.

5. ಸಂಶಯಕ್ಕೆ ಒಳಗಾಗಿ ವರ್ತಿಸುವ ಆಡಳಿತಾಧಿಕಾರಿ ಜನರನ್ನು ಸಂಕಷ್ಟಕ್ಕೆ ಗುರಿಪಡಿಸುವನು.

6. ಜನರ ಹೊರೆಯನ್ನು ಹೆಚ್ಚಿಸಬೇಡಿರಿ; ಕಮ್ಮಿಮಾಡಿರಿ. ಅವರನ್ನು ರೇಗಿಸಬೇಡಿರಿ; ಆಶ್ವಾಸನೆಯನ್ನು ನೀಡಿರಿ. ವೈಮನಸ್ಯಕ್ಕಾಗಿ ಅಲ್ಲ; ಐಕ್ಯಕ್ಕಾಗಿ ದುಡಿಯಿರಿ.

7. ಒಬ್ಬ ಆಡಳಿತಾಧಿಕಾರಿ ಸಿಡುಕು ಸ್ವಭಾವದವನಾಗಿದ್ದರೆ ಸೈತಾನನು ಅವನ ನಿಯಂತ್ರಣವನ್ನು ಪಡೆಯುತ್ತಾನೆ.

8. ಓರ್ವ ಸಾರ್ವಜನಿಕ ಸೇವಕನ ಒಳಿತನ್ನು ಪರಮಾತ್ಮನು ಬಯಸುವನಾದರೆ, ಅವನು ಮರೆತು ಹೋದ ಕರ್ತವ್ಯದ ಕುರಿತು ನೆನಪು ಹುಟ್ಟಿಸುವ ಮತ್ತು ಆ ಕರ್ತವ್ಯವನ್ನು ನಿರ್ವಹಿಸುವರೆ ಸಹಾಯಕರಾಗಿರುವ ಸಲಹೆಗಾರರನ್ನು ಒದಗಿಸುತ್ತಾನೆ. ಆದರೆ ಪರಮಾತ್ಮನು ಅವನ ಕೆಡುಕನ್ನು ಬಯಸಿದರೆ, ಅವನು ಮರೆತು ಹೋದ ಕರ್ತವ್ಯದ ಕುರಿತು ನೆನಪು ಹುಟ್ಟಿಸದ ಮತ್ತು ಅವನ ನೆನಪಿನಲ್ಲಿದ್ದ ಕರ್ತವ್ಯವನ್ನು ನಿರ್ವಹಿಸುವರೆ ಸಹಕರಿಸದ ದುಷ್ಟ ಸಲಹೆಗಾರರನ್ನು ಒದಗಿಸುತ್ತಾನೆ.

9. ನಿಮ್ಮಲ್ಲಿ ಅಧಿಕಾರ ಸ್ಥಾನದಲ್ಲಿರುವವರು ತಮ್ಮ ಅಧೀನದಲ್ಲಿರುವವರೊಡನೆ ದಯಾಪರತೆಯಿಂದಲೂ ತಾಳ್ಮೆಯಿಂದಲೂ ವರ್ತಿಸಬೇಕು.

10. ಒಂದು ಜನಾಂಗದ ಒಳಿತನ್ನು ದೇವರು ಬಯಸಿದರೆ, ಬುದ್ಧಿಶಾಲಿಯಾದ ಆಡಳಿತಾಧಿಕಾರಿಗಳನ್ನು ಅವರಿಗಾಗಿ ನಿಯಮಿಸುತ್ತಾನೆ ಮತ್ತು ಅವರ ಪೈಕಿ ಉದಾರಿಗಳಾದವರಿಗೆ ಸಂಪತ್ತನ್ನು ನೀಡುತ್ತಾನೆ. ಒಂದು ಜನಾಂಗದ ಕೆಡುಕನ್ನು ದೇವರು ಬಯಸಿದರೆ, ಅವರಿಗಾಗಿ ಬುದ್ಧಿಹೀನನಾದ ಆಡಳಿತಾಧಿಕಾರಿಗಳನ್ನು ನಿಯಮಿಸುತ್ತಾನೆ ಮತ್ತು ಅವರ ಪೈಕಿ ಲೋಭಿಗಳಾದವರಿಗೆ ಸಂಪತ್ತನ್ನು ನೀಡುತ್ತಾನೆ.

(ಸರ್ ಮುಹಮ್ಮದ್ ಝಫ್ರುಲ್ಲಾ ಖಾನರು ಬರೆದ Wisdom of the Holy Prophet ನಿಂದ ಆಯ್ದುದು.)

—o—o—o—

# ಮುಹಮ್ಮದ್ ಪೈಗಂಬರರ ಸ್ವಭಾವಚಿತ್ರ

—ಎ. ಎ. ರವೂಫ್

ಮುಹಮ್ಮದ್ ಪೈಗಂಬರರ ಮಾತು ಅತ್ಯಂತ ನಿರ್ಮಲವಾಗಿದ್ದಿತ್ತೆಂದೂ ಆಣೆ ಹಾಕುವುದು ಪೈಗಂಬರರ ಸ್ವಭಾವವಾಗಿರಲಿಲ್ಲವೆಂದೂ ನಿವೇದನವಿದೆ (ತಿರ್ಮದಿ). ಇದು ಇತರ ಅರಬಿಗಳಿಂದ ಸಂಪೂರ್ಣ ಭಿನ್ನವಾದ ಒಂದು ಸ್ವಭಾವವಾಗಿದೆ. ತಾವು ಮಾತನಾಡುವಾಗ ಧಾರಾಳವಾಗಿ ಆಣೆ ಹಾಕುವುದು ಪೈಗಂಬರರ ಕಾಲದ ಅರಬಿಗಳ ಕೆಟ್ಟ ಸಂಪ್ರದಾಯವಾಗಿತ್ತು. ಅತ್ಯಂತ ಅಗತ್ಯದ ಸಂದರ್ಭಗಳಲ್ಲಿ ಹೊರತು ದೇವರ ಹೆಸರಿನಲ್ಲಿ ಆಣೆಹಾಕಲು ತಯಾರಿಲ್ಲದೆ, ಪೈಗಂಬರರು ದೈವನಾಮವನ್ನು ಅಷ್ಟು ಗೌರವದಿಂದ ಕಾಣುತ್ತಿದ್ದರು.

ಶಾರೀರಿಕ ಶುಚಿತ್ವವನ್ನು ಸಂಬಂಧಿಸಿ, ಪೈಗಂಬರರು ಬಹಳ ನಿಷ್ಕರ್ಷೆ ಮತ್ತು ನಿಷ್ಠೆಯುಳ್ಳವರಾಗಿದ್ದರು. ದಿನಾಲೂ ಹಲವು ಸಾರಿ ಬ್ರಶ್‌ನಿಂದ ಹಲ್ಲುಜ್ಜುವುದು ಅವರ ಶೀಲವಾಗಿತ್ತು. ಕ್ಲೇಶಕರವಾಗಬಹುದೆಂಬ ಹೆದರಿಕೆಯಿಲ್ಲವಾಗಿದ್ದರೆ, ದಿನಂಪ್ರತಿಯುಳ್ಳ ಐದು ಸಲ ಪ್ರಾರ್ಥನೆಗಳಲ್ಲಿ ಪ್ರತಿಯೊಂದಕ್ಕೆ ಮುಂಚಿತವಾಗಿ ಹಲ್ಲುಜ್ಜುವುದು ಪ್ರತಿಯೋರ್ವ ಮುಸ್ಲಿಮನಿಗೆ ಕಡ್ಡಾಯವಾಗಿ ಮಾಡುತ್ತಿದ್ದೆ ಎಂದು ಸಹ ಪೈಗಂಬರರು ನುಡಿದಿರುವರು. ಆಹಾರ ಸೇವನೆಗೆ ಮೊದಲು ಮತ್ತು ನಂತರ ಕೈಗಳನ್ನು ಶುಚಿಯಾಗಿ ತೊಳೆಯುವುದು ಮತ್ತು ಪಾಕ ಮಾಡಿದ ಏನನ್ನೇ ಭಕ್ಷಿಸಿದರೂ ನೀರಿನಿಂದ ಬಾಯಿ ಮುಕ್ಕಳಿಸಿ ಶುಚಿಮಾಡುವುದು ಪೈಗಂಬರ ಅಭ್ಯಾಸವಾಗಿತ್ತು. ಪಾಕಮಾಡಿದ ಆಹಾರವೇನ್ನೇನಾದರೂ ಸೇವಿಸಿದರೆ ಪ್ರಾರ್ಥನೆ ಮಾಡುವುದಕ್ಕೆ ಮುಂಚಿತವಾಗಿ ಬಾಯಿಯನ್ನು ಶುಚಿಮಾಡುವುದು ಉತ್ತಮ ಸ್ವಭಾವವೆಂದು ಪೈಗಂಬರರು ನಂಬಿದ್ದರು. (ಬುಖಾರಿ)

ಇಸ್ಲಾಮಿಕ ಸಾಮೂಹಿಕ ವ್ಯವಸ್ಥೆಯಲ್ಲಿ ಎಲ್ಲಾ ಮುಸ್ಲಿಮರು ಸಮ್ಮೇಳಿಸುವ ಒಂದು ಸಂಕೇತ ಸ್ಥಳವು ಮಸೀದಿಯಾಗಿದೆ. ಮಸೀದಿಗಳನ್ನು ಸದಾ ಶುಚಿಯಾಗಿಡಬೇಕೆಂದು, ಮುಖ್ಯವಾಗಿ ಜನರು ಒಟ್ಟುಗೂಡುವ ಸಂದರ್ಭಗಳಲ್ಲಿ, ಪೈಗಂಬರರು ಒತ್ತಿ ಹೇಳುತ್ತಿದ್ದರು. ಅಂತಹ ಸಂದರ್ಭಗಳಲ್ಲಿ ಅಲ್ಲಿಯ ವಾತಾವರಣವನ್ನು ಸುಗಂಧಮಯವಾಗಿ ಮಾಡಿದರೆ ಒಳ್ಳೆಯದೆಂದು ಪೈಗಂಬರರು ನುಡಿದಿರುವರು (ಅಬೂದಾವೂದ್). ಮಲಿನೋಚ್ಛ್ವಾಸಕ್ಕೆ ಎಡೆಕೊಡುವ ಸಾಧನಗಳನ್ನು ಉಪಯೋಗಿಸಿದ ನಂತರ ಮಸೀದಿಗಳ ಕೂಟಗಳಲ್ಲಿ ಭಾಗವಹಿಸಬಾರದೆಂದು ಪೈಗಂಬರರು ತಡೆದಿದ್ದಾರೆ (ಬುಖಾರಿ).

ರಸ್ತೆಗಳನ್ನು ಯಾವಾಗಲೂ ಶುಚಿಯಾಗಿಯೂ ನಿರ್ಮಲವಾಗಿಯೂ ಇರಿಸಬೇಕೆಂದು ಪೈಗಂಬರರು ಆಜ್ಞಾಪಿಸಿದ್ದಾರೆ. ದಾರಿಯನ್ನು ತಡೆಯುವ ರೀತಿಯಲ್ಲಿ ಮತ್ತು ಅಸಹ್ಯವಾದ ರೀತಿಯಲ್ಲಿ ಕಸಕಡ್ಡಿ ಮೊದಲಾದುವುಗಳನ್ನು ಕಂಡರೆ ಅವನ್ನು ನೀಗಿಸಲು ಪೈಗಂಬರರು ನಿಷ್ಕರ್ಷಿಸಿದ್ದರು. ದಾರಿಮಧ್ಯೆ ಅಂತಹದೇನನ್ನಾಗಲಿ ಕಂಡರೆ ಅವನ್ನು ಪೈಗಂಬರರು ಸ್ವತಃ ನೀಗಿಸಲು ಉದ್ಯುಕ್ತರಾಗುತ್ತಿದ್ದರು. ಸಾಮಾನ್ಯ ದಾರಿಗಳನ್ನೂ ಸಾರ್ವಜನಿಕ ರಸ್ತೆಗಳನ್ನೂ ಶುಚಿಯಾಗಿಯೂ ನಿರ್ಮಲವಾಗಿಯೂ ಇಡಲು ಸಹಕರಿಸುವವನು ದೇವರ ದೃಷ್ಟಿಯಲ್ಲಿ ಅನುಗ್ರಹಕ್ಕೆ ಪಾತ್ರನಾಗುವನೆಂದು ಪೈಗಂಬರರು ಹೇಳುತ್ತಿದ್ದರು. ರಸ್ತೆಗಳಲ್ಲಿ ಸಾರ್ವಜನಿಕರಿಗೆ ಉಪದ್ರವವನ್ನು ಸೃಷ್ಟಿಸುವುದನ್ನೂ ಕೊಳಕಲ್ಮಷಗಳನ್ನು ಬಿಸಾಡಿ ಕೆಡಿಸುವುದನ್ನೂ ತಡೆದು ಇಂತಹ ವರ್ತನೆಗಳೆಲ್ಲಾ ದೇವರಿಗೆ ಕೋಪವನ್ನುಂಟು ಮಾಡುವುದೆಂದು ಪೈಗಂಬರರು ನುಡಿದಿರುವರು. ಮನುಷ್ಯರ ಉಪಯೋಗಕ್ಕಿರುವ ನೀರು ಸರಬರಾಜು ಏರ್ಪಾಡುಗಳಲ್ಲಿ ಶುಚಿಯನ್ನು ಪಾಲಿಸುವ ಕಾರ್ಯದಲ್ಲಿ ಪೈಗಂಬರರು ಪ್ರತ್ಯೇಕವಾಗಿ ನಿಷ್ಕರ್ಷಿಸಿದ್ದರು. ಕೊಳ-ಕೆರೆಗಳನ್ನು ಅಶುದ್ಧ ಮಾಡುವುದನ್ನೂ ಶೇಖರಿಸಿಡುವ ನೀರನ್ನು ದುರುಪಯೋಗಪಡಿಸುವುದನ್ನೂ ಪೈಗಂಬರರು ಶಕ್ತಿಯುತವಾಗಿ ವಿರೋಧಿಸಿದ್ದಾರೆ. (ಬುಖಾರಿ, ಮುಸ್ಲಿಂ-ಕಿತಾಬುಲ್ ಬಿರ್ರ್ ವಲ್‌ಸಿಲಾ).

ಆಹಾರ ಪಾನೀಯಾದಿಗಳಲ್ಲಿ ಪೈಗಂಬರರು ಅತ್ಯಂತ ಸರಳತೆಯನ್ನು ಪಾಲಿಸಿದ್ದರು. ಪಾಕದೋಷಕರವಾದ ಅಥವಾ ರುಚಿ ಕಮ್ಮಿಯಾಗಿ ತಯಾರಿಸಲಾದ ಆಹಾರದ ಕುರಿತು ಅವರು ಒಮ್ಮೆಯೂ ಅತೃಪ್ತಿಯನ್ನು ತೋರ್ಪಡಿಸಲಿಲ್ಲ. ಅಂತಹ ಆಹಾರವನ್ನು ತನ್ನ ಮುಂದಿಟ್ಟರೆ, ಅದನ್ನು ತಯಾರಿಸಿದವರಿಗೆ ಬೇಸರವನ್ನು ಮಾಡದಿರಲಿಕ್ಕಾಗಿ ಅದನ್ನು ಸೇವಿಸುವರೆ ತಯಾರಾಗುತ್ತಿದ್ದರು. ತಿನ್ನಲು ಅಯೋಗ್ಯವಾದ ಆಹಾರವಾಗಿದ್ದರೆ ಹಾಗೆಯೇ ಬಿಡುತ್ತಿದ್ದರು ಹೊರತು ಒಮ್ಮೆಯೂ ಅತೃಪ್ತಿಯನ್ನು ತೋರಿಸುತ್ತಿರಲಿಲ್ಲ. ಅವರು ಆಹಾರವನ್ನು ಸೇವಿಸಲು ಕುಳಿತರೆ ತನ್ನ ಮುಂದಿಟ್ಟದ್ದನ್ನು ಮಾತ್ರ ಗಮನಿಸುತ್ತಿದ್ದರು. ಆಹಾರ ವಸ್ತುಗಳನ್ನು ಪೈಗಂಬರರ ಮುಂದೆ ತಂದಿಟ್ಟರೆ ಅದನ್ನು ಅವರು ತನ್ನೊಂದಿಗೆ ಇರುವವರಿಗೆ ಹಂಚಿಕೊಡುವರು. ಒಮ್ಮೆ ಪೈಗಂಬರರಿಗೆ ಯಾರೋ ಖರ್ಜೂರಗಳನ್ನು ತಂದುಕೊಟ್ಟರು. ಸುತ್ತಲೂ ಕಣ್ಣು ಹರಿಸಿದ ನಂತರ ಜನರನ್ನು ಲೆಕ್ಕಮಾಡಿ ಒಬ್ಬೊಬ್ಬರಿಗೆ ಏಳು ಖರ್ಜೂರಗಳು ಸಿಗುವಂತೆ ಪೈಗಂಬರರು ಅದನ್ನು ಹಂಚಿದರು. ಒಮ್ಮೆಯಾದರೂ ಪೈಗಂಬರರು ಹೊಟ್ಟೆ ತುಂಬಾ ತಿಂದಿಲ್ಲವೆಂದು ಹಝ್‌ರತ್ ಅಬೂಹುರೈರ ಹೇಳಿರುವರು.

ಒಮ್ಮೆ ಪೈಗಂಬರರು ಹೋಗುತ್ತಿರುವಾಗ ದಾರಿಯಲ್ಲಿ ಒಂದು ಕಡೆ ಕೆಲವರು ಸುತ್ತಲೂ ಕುಳಿತು ಹುರಿದ ಆಡಿನ ಮಾಂಸವನ್ನು ತಿನ್ನಲು ತೊಡಗುವುದನ್ನು ಕಂಡರು. ಪೈಗಂಬರರನ್ನು ಕಂಡಾಗ ತಮ್ಮೊಡನೆ ಪಾಲುಗೊಳ್ಳಲು ಅವರು ಕರೆದರೂ ಪೈಗಂಬರರು ಅದಕ್ಕೆ ಒಪ್ಪಲಿಲ್ಲ. ಹುರಿದ ಮಾಂಸವನ್ನು ತಾನು ಇಷ್ಟಪಡದಿದ್ದುದರಿಂದಲ್ಲ ಅವರು ಒಪ್ಪದೆ ಇದ್ದುದು. ಸಾಕಷ್ಟು ಆಹಾರ ಸಿಕ್ಕದೆ ಕಷ್ಟಪಡುವ ಬಡವರಿಗೆ ಸಹ ಕಾಣುವ ರೀತಿಯಲ್ಲಿ ತೆರೆದ ಸ್ಥಳದಲ್ಲಿ ಒಟ್ಟು ಸೇರಿ ಹಾಗೆ ಒಂದು ಭೋಜನ ಕೂಟವನ್ನು ನಡೆಸುವುದನ್ನು ತಾನು ಇಷ್ಟಪಡದ ಕಾರಣದಿಂದ ಮಾತ್ರವಾಗಿತ್ತು.

ಆಮಂತ್ರಿಸದೆ ಅನ್ಯರ ಮನೆಗೆ ಭೋಜನಕೂಟಕ್ಕೆ ಹೋಗಬಾರದೆಂದು ಪೈಗಂಬರರು ನುಡಿದಿರುವರು. ಒಮ್ಮೆ ಪೈಗಂಬರರನ್ನು ಓರ್ವರು ಭೋಜನ ಕೂಟಕ್ಕೆ ಆಮಂತ್ರಿಸಿ ಇತರ ನಾಲ್ವರನ್ನು ಸಹ ಕರೆದುಕೊಂಡು ಬರಲು ಕೇಳಿಕೊಂಡರು. ಆತಿಥೇಯನ ಮನೆಯ ಹತ್ತಿರಕ್ಕೆ ತಲಪುವಾಗ ಆರನೆಯ ಒಂದು ವ್ಯಕ್ತಿ ಸಹ ತಮ್ಮೊಂದಿಗೆ ಸೇರಿರುವನೆಂದು ಪೈಗಂಬರರಿಗೆ ತಿಳಿಯಿತು. ಪೈಗಂಬರರನ್ನೂ ಅನುಚರರನ್ನೂ ಸ್ವಾಗತಿಸಲು ಆತಿಥೇಯನು ತನ್ನ ಮನೆಯ ಅಂಗಳಕ್ಕೆ ಬಂದಾಗ ತಾವು ಆರು ಮಂದಿ ಇದ್ದೇವೆಂದು ಪೈಗಂಬರರು ಆತಿಥೇಯನಿಗೆ ತಿಳಿಸಿ, ಆರನೆಯವನನ್ನು ಸಹ ಕರೆತರಬಹುದೋ ಅಥವಾ ಆ ವ್ಯಕ್ತಿ ಹಿಂತಿರುಗಿ ಹೋಗಲೋ ಎಂದು ವಿಚಾರಿಸಿದರು. ಆತಿಥೇಯನು ಕೂಡಲೇ ಆರನೆಯವನನ್ನು ಸಹ ಸ್ನೇಹದಿಂದ ಉಪಚರಿಸಿದನು (ಬುಖಾರಿ–ಕಿತಾಬುಲ್ ಅತ್ಇಮ:)

*******


Phone: 73196 | Phone Branch: 75894

ಉತ್ತಮ ತರದ ಮರಗೆಣಸಿನ ಚಿಪ್ಸ್ ಮತ್ತು ಹಿಟ್ಟಿನ ರಖಂ ವ್ಯಾಪಾರಸ್ಥರು

KESSEE TRADING CORPORATION

Dealers in: **Tapioca** Chips & Flour

**9 / 135, Gunny Street, CALICUT - 1.**

ಇಸ್ಲಾಮ್–ನವೀನ ಪಾಶ್ಚಾತ್ಯರ ನೋಟದಲ್ಲಿ

# ಇಸ್ಲಾಮ್ ಧರ್ಮತತ್ವಗಳ ಸರಳತೆ

—ಡಾಕ್ಟರ್ (ಮಿಸ್ಸೆಸ್) ಲೋರಾ ವಿ. ವಾಗ್ಲಿಯೇರಿ.

ಇಸ್ಲಾಮ್ ಧರ್ಮವು ಒಬ್ಬ ವ್ಯಕ್ತಿಯನ್ನು ಇಬ್ಬಗೆಯ ಆಹ್ವಾನದೊಂದಿಗೆ ಸಮೀಪಿಸುತ್ತದೆ. ದೇವರು ಒಬ್ಬನೆಂದೂ ಮುಹಮ್ಮದ್ ಪೈಗಂಬರ್ ದೇವರಿಂದ ಕಳುಹಿಸಲ್ಪಟ್ಟವರೆಂದೂ ನಂಬುವುದೇ ಈ ಆಹ್ವಾನವಾಗಿದೆ.

ಅರೇಬಿಯದ ಪೈಗಂಬರರು, ತಾವು ದೇವರೊಡನೆ ಸ್ಥಾಪಿಸಿದ ನಿಕಟ ಸಂಬಂಧದಿಂದ ಸ್ಫೂರ್ತಿಗೊಂಡು ಅತ್ಯಂತ ಪರಿಶುದ್ಧವಾದ ಏಕೇಶ್ವರ ವಾದವನ್ನು ವಸ್ತು ಪೂಜಕರಿಗೂ ಭ್ರಷ್ಟಗೊಂಡ ಕ್ರೈಸ್ತ ಯಹೂದಿ ಧರ್ಮಗಳ ಅನುಯಾಯಿಗಳಿಗೂ ಉಪದೇಶಿಸಿದರು. ಸೃಷ್ಟಿಕರ್ತನ ಜೊತೆಯಲ್ಲಿ ಇತರರನ್ನು ಪಾಲುಗೊಳ್ಳುವಂತೆ ಮಾಡುವ ಪ್ರಗತಿ ವಿರೋಧಿ ಮಾನವ ಶಕ್ತಿಗಳೆದುರಲ್ಲಿ ಬಹಿರಂಗ ಹೋರಾಟಕ್ಕೆ ಅವರು ಸನ್ನದ್ಧರಾಗಿ ನಿಂತರು. ಖುರ್‌ಆನಿನಲ್ಲಿ ದೇವರು ಈರೀತಿ ಆಜ್ಞಾಪಿಸುತ್ತಾನೆ:–

"ಹೇಳು: ದೇವರು ಒಬ್ಬನೇ,
ದೇವರು ಎಲ್ಲರಿಗೂ ಆಶ್ರಯದಾತನು
ಆತನು ಯಾರ ಜನಕನೂ ಅಲ್ಲ;
ಆತನು ಯಾರಿಂದಲೂ ಜನ್ಮವೆತ್ತಿಲ್ಲ.
ಆತನಿಗೆ ಸಮಾನರು ಯಾರೂ ಇಲ್ಲ."
(ಸೂರ 112 ವಚನ 2–5).

ಏಕದೈವ ವಿಶ್ವಾಸವನ್ನು ಜನರು ಅವಲಂಬಿಸುವಂತೆ ಮಾಡಲಿಕ್ಕಾಗಿ ಅವರನ್ನು ಪೈಗಂಬರರು ತಥಾಕಥಿತ "ಪವಾಡ"ಗಳೆಂಬ ಪ್ರಕೃತಿ ವಿರುದ್ಧ ಸಂಭವಗಳ ಕಥೆಗಳಿಂದ ಮರಳುಗೊಳಿಸಲೆತ್ನಿಸಲಿಲ್ಲ. ದೈವಿಕ ಎಚ್ಚರಿಕೆಗಳ ಮೂಲಕ ಜನರು ಮೌನಧಾರಣೆ ಮಾಡುವಂತೆ ನಿರ್ಬಂಧಿತರನ್ನಾಗಿ ಮಾಡಿ ಅವರ ಚಿಂತಾಶಕ್ತಿಯನ್ನು ಕ್ಷೀಣಗೊಳಿಸಲೂ ಯತ್ನಿಸಲಿಲ್ಲ. ಅವರು ಜನರನ್ನು ಯಥಾರ್ಥ ಪ್ರಪಂಚದಿಂದ ಹೊರಹೋಗುವಂತೆ ಹೇಳದೆ ಜಗತ್ತನ್ನೂ ಅದರ ನಿಯಮಗಳನ್ನೂ ಪರಿಶೋಧಿಸುವಂತೆ ಕರೆಯಿತ್ತರು. ಏಕಮಾತ್ರನಾದ ದೇವರಲ್ಲಿ ಪರಿಪೂರ್ಣ ವಿಶ್ವಾಸವನ್ನು ದೃಢವಾಗಿ ಹೊಂದಿದ ಅವರು ಜನರನ್ನು ಜೀವನ ಗ್ರಂಥದ ಅಧ್ಯಯನಕ್ಕೆ ಪ್ರೇರೇಪಿಸಿದರು. ಮನುಷ್ಯನ ಮನಸ್ಸಾಕ್ಷಿ ಮತ್ತು ಮನಸ್ಸಿನ ತೀರ್ಮಾನಗಳಿಗೆ ತಮ್ಮ ವಾದಗಳ ಸತ್ಯತೆಯ ಅರಿಕೆಯನ್ನು ಮಾಡುವುದರಲ್ಲಿ ಪೈಗಂಬರರು ತೃಪ್ತರಾಗಿದ್ದರೆಂದು ಮುಹಮ್ಮದ್ ಅಬ್ದುಹು* ಮತ್ತು ಅಮೀರ್ ಅಲಿ* ಹೇಳುತ್ತಾರೆ. ಪವಿತ್ರ ಖುರ್‌ಆನ್ ಈರೀತಿ ಹೇಳುತ್ತದೆ:

"ನಿನ್ನ ದೇವರು ಏಕದೇವರು. ಆತನಲ್ಲದೆ ಬೇರೆ ಯಾವ ದೇವರೂ ಇಲ್ಲ. ಆತನು ಪರಮ ದಯಾಳುವೂ ಕೃಪಾನಿಧಿಯೂ ಆಗಿರುವನು. ಆಕಾಶಭೂಮಿಗಳ ಸೃಷ್ಟಿಯಲ್ಲಿಯೂ ರಾತ್ರಿ ಹಗಲುಗಳ ವ್ಯತ್ಯಾಸಗಳಲ್ಲಿಯೂ ಜನರಿಗೆ ಲಾಭಕರವಾದ ಸಾಧನೆಗಳನ್ನು ತುಂಬಿಕೊಂಡು ಸಮುದ್ರಗಳಲ್ಲಿ ಸಂಚರಿಸುವ ಹಡಗುಗಳಲ್ಲಿಯೂ, ದೇವರು ಆಕಾಶದಿಂದ ಸುರಿಸಿ ಸತ್ತಭೂಮಿಯನ್ನು ಚಿಗುರಿಸುವ ನೀರಿನಲ್ಲಿಯೂ, ಆತನು ಭೂಮಿಯಲ್ಲಿ ಸಕಲ ವಿಧದ ಪ್ರಾಣಿಗಳನ್ನು ಹರಡಿದುದರಲ್ಲಿಯೂ, ಗಾಳಿಯು ಬೀಸುವಿಕೆಯಲ್ಲಿಯೂ, ಆಕಾಶ ಭೂಮಿಗಳ ಮಧ್ಯದಲ್ಲಿ ಸೇವಾ ನಿರತವಾಗಿರುವ ಮೋಡಗಳಲ್ಲಿಯೂ ಬುದ್ಧಿಯುಳ್ಳವರಿಗೆ ಚಿಹ್ನೆಗಳಿವೆ.

ಆದರೆ)ಕೆಲವರು ಏಕದೇವರನ್ನಲ್ಲದೆ ಇತರರನ್ನೂ ಪೂಜಿಸುವವರಾಗಿದ್ದಾರೆ. ಅವರು ದೇವರನ್ನು ಪ್ರೀತಿಸಬೇಕಾದ ರೀತಿಯಲ್ಲಿ ಇತರ ವಸ್ತುಗಳನ್ನು ಪ್ರೀತಿಸುತ್ತಾರೆ. (ಸೂರ 2 ವಚನ 164–166)

---

* ಮುಹಮ್ಮದ್ ಅಬ್ದುಹು ಈಜಿಪ್ಟಿನ ಮಹಾ ಪಂಡಿತರಾಗಿದ್ದರು. ಅಮೀರ್ ಅಲಿ "ಸ್ಪಿರಿಟ್ ಆಫ್ ಇಸ್ಲಾಮ್" ಎಂಬ ಗ್ರಂಥದ ಭಾರತೀಯ ಲೇಖಕರು.

—ಅನುವಾದಕ.

ಪ್ರಕೃತಿಯು ನೀಡುವ ಸಾಕ್ಷ್ಯಗಳನ್ನು ಪರಿಗಣಿಸಲು ಆಹ್ವಾನಿಸುವ ಸೂಕ್ತಗಳು ಪವಿತ್ರ ಖುರ್‌ಆನಿನಲ್ಲಿ ಹಲವಾರು ಇವೆ. ನಾನು ಖುರ್‌ಆನಿನ "ಪರಮ ದಯಾಳು" ಎಂಬ ಅಧ್ಯಾಯದ ಕೆಲವು ವಚನಗಳನ್ನು ಉದ್ಧರಿಸಲು ಇಚ್ಛಿಸುತ್ತೇನೆ:—

"ದೇವರು ಭೂಮಿಯನ್ನು ಎಲ್ಲಾ ಸೃಷ್ಟಿಗಳ ಉಪಯೋಗಕ್ಕಾಗಿ ಉಂಟುಮಾಡಿರುವನು.

ಅದರಲ್ಲಿ ಎಲ್ಲಾ ವಿಧದ ಫಲಗಳೂ ಕೋಶದೊಳಗೆ ಹಣ್ಣು ಹೊಂದಿರುವ ಖರ್ಜೂರದ ಮರಗಳೂ ಹೊರಾವರಣ ಹೊಂದಿರುವ ಧಾನ್ಯಗಳೂ, ಸುವಾಸನೆ ಹೊಂದಿದ ಪುಷ್ಪಗಳೂ ಇವೆ.

ನೀವಿಬ್ಬರು ದೇವರ ಯಾವ ಅನುಗ್ರಹಗಳನ್ನು ನಿರಾಕರಿಸುವಿರಿ ?" (ಖುರ್ ಆನ್ ಅಧ್ಯಾಯ 55: ವಚನ 11-14)

"ದೇವರು ಎರಡು ಪಶ್ಚಿಮಗಳ ಮತ್ತು ಎರಡು ಪೂರ್ವಗಳ ಪಾಲಕ, ನೀವಿಬ್ಬರು ದೇವರ ಯಾವ ಅನುಗ್ರಹಗಳನ್ನು ನಿರಾಕರಿಸುವಿರಿ ?

ಆತನು ಮುಂದೆ ಒಂದು ಕಾಲದಲ್ಲಿ ಒಂದುಗೂಡುವಂತಹ ಎರಡು ಸಮುದ್ರಗಳನ್ನು ಸೃಷ್ಟಿಸಿರುವನು. ಈಗ ಅವುಗಳ ಮಧ್ಯದಲ್ಲಿ ಒಂದು ತಡೆಯಿದ್ದು ಅವುಗಳು ಒಂದನ್ನೊಂದು ಅತಿಕ್ರಮಿಸಲಾರವು.

ನೀವಿಬ್ಬರು ದೇವರ ಯಾವ ಅನುಗ್ರಹಗಳನ್ನು ನಿರಾಕರಿಸುವಿರಿ ?

ಆ ಸಮುದ್ರಗಳಿಂದ ಮುತ್ತು ಮತ್ತು ಹವಳಗಳೂ ದೊರೆಯುವುವು.

ನೀವಿಬ್ಬರು ದೇವರ ಯಾವ ಅನುಗ್ರಹಗಳನ್ನು ನಿರಾಕರಿಸುವಿರಿ ?

ಸಮುದ್ರದಲ್ಲಿ ಪರ್ವತಗಳಂತೆ ಸಂಚರಿಸುವ ಹಡಗುಗಳೂ ಆತನಿಗಿವೆ.

ನೀವಿಬ್ಬರು ದೇವರ ಯಾವ ಅನುಗ್ರಹಗಳನ್ನು ನಿರಾಕರಿಸುವಿರಿ?''

(ಖುರ್‌ಆನ್ ಅಧ್ಯಾಯ 55:ವಚನ 18-26).

ಮೂರ್ತಿ ಪೂಜೆಯು ಅದರ ವಿಭಿನ್ನ ರೂಪಗಳಲ್ಲಿ ಸೋಲಿಸಲ್ಪಟ್ಟದಕ್ಕೆ ನಾವು ಇಸ್ಲಾಮ್ ಧರ್ಮಕ್ಕೆ ಕೃತಜ್ಞರಾಗಬೇಕಾಗಿದೆ. ಪ್ರಪಂಚದ ಬಗೆಗಿರುವ ಅಭಿಪ್ರಾಯವೂ ಮತಧರ್ಮಗಳ ಆಚರಣೆಯೂ ಸಾಮಾಜಿಕ ಜೀವನದ ಆಚಾರಗಳೂ, ಅವುಗಳನ್ನೆಲ್ಲಾ ಅಧಃಪತನಗೊಳಿಸಿದ ಕರಾಳತೆಯಿಂದ ಮುಕ್ತಗೊಳಿಸಲ್ಪಟ್ಟು ಮಾನವರ ಮನಸ್ಸು ದುರಭಿಪ್ರಾಯಗಳಿಂದ ಸ್ವತಂತ್ರವಾಯಿತು. ಮಾನವನಿಗೆ ತನ್ನ ಸ್ಥಾನದ ಮಹಿಮೆ ತಿಳಿಯಿತು. ಅತನು ಸಕಲ ಮಾನವರ ಸೃಷ್ಟಿಕರ್ತನ ಮುಂದೆ ವಿನೀತನಾದನು. ಆತನು ಇಬ್ರಾಹಿಂ ಪ್ರವಾದಿಯ ಹಾಗೆ ಈರೀತಿ ಹೇಳಲೇ ಬೇಕಾಯಿತು:—

"ನಾನು ಎಲ್ಲಾ ದುರ್ಮಾರ್ಗಗಳನ್ನು ತೊರೆದು ನನ್ನ ಮುಖವನ್ನು ಆಕಾಶ ಭೂಮಿಗಳ ಕರ್ತೃವಿನ ಕಡೆಗೆ ತಿರುಗಿಸಿರುವೆನು. ನಾನು ದೇವರೊಂದಿಗೆ ಇತರರನ್ನು ಸೇರಿಸುವವರ ಜೊತೆ ಸೇರಲಾರೆ''. (ಖುರ್‌ಆನ್ 6:80). ಮತ್ತು

ಮುಹಮ್ಮದ್ ಪೈಗಂಬರ್ ನುಡಿದಂತೆ ಈರೀತಿ ಸಹ ಹೇಳಬೇಕಾಯಿತು:—

''ನನ್ನ ಪ್ರಾರ್ಥನೆಯೂ ನನ್ನ ಬಲಿದಾನಗಳೂ, ನನ್ನ ಜೀವನವೂ ನನ್ನ ಮರಣವೂ ಸರ್ವ ಲೋಕ ಪರಿಪಾಲಕನಾದ ದೇವರಿಗಾಗಿ ಮಾತ್ರವಾಗಿವೆ. ಆತನಿಗೆ ಪಾಲುದಾರರಿಲ್ಲ. ಈರೀತಿ ನಾನು ಆಜ್ಞಾಪಿಸಲ್ಪಟ್ಟಿದ್ದೇನೆ. ನಾನು ವಿಶ್ವಾಸಿಗಳಲ್ಲಿ ಪ್ರಥಮನಾಗಿದ್ದೇನೆ''. (ಖುರ್‌ಆನ್ 6:163-164).

ಮನುಷ್ಯನ ಆತ್ಮವು ದ್ವೇಷದಿಂದ ಮುಕ್ತವಾಯಿತು. ಮನುಷ್ಯನ ನಿರ್ಧಾರ ಶಕ್ತಿಯು ಅದನ್ನು ಕಟ್ಟಿಹಾಕಿದ್ದ ಇತರ ಮನುಷ್ಯರ ನಿರ್ಧಾರಗಳಿಂದ ಅಥವಾ ತಥಾಕಥಿತ ಗುಪ್ತ ಶಕ್ತಿಗಳಿಂದ ಬಿಡುಗಡೆ ಹೊಂದಿತು. ಪುರೋಹಿತರು, ಗುಪ್ತಶಕ್ತಿಗಳ ಹುಸಿಭಂಟರು, ಮೋಕ್ಷದ ದಲ್ಲಾಳಿಗಳು ಮತ್ತು ದೇವ ಮಾನವರ ಸಂಬಂಧ ಕುದುರಿಸುವ ಮಧ್ಯಸ್ಥಗಾರರೆಂದು ನಟಿಸಿ ಜನರ ನಿರ್ಧಾರ ಶಕ್ತಿಗಳ ಮೇಲೆ ಅಧಿಕಾರವನ್ನು ಹೊಂದಿದ ಇತರರು ತಮ್ಮ ಉನ್ನತ ಸ್ಥಾನದಿಂದ ಕೆಳಗೆಬಿದ್ದರು. ಮನುಷ್ಯನು ದೇವರ ದಾಸನಾಗಿ ಮಾತ್ರ ಪರಿವರ್ತಿತನಾದನು. ಆತನಿಗೆ ಒಬ್ಬ ಸ್ವತಂತ್ರ ಮನುಷ್ಯನಿಗೆ ಇನ್ನೊಬ್ಬ ಸ್ವತಂತ್ರ ಮನುಷ್ಯನ ಮೇಲೆ ಇರುವಷ್ಟು ಕರ್ತವ್ಯಗಳು ಇದ್ದುವು. ಹಿಂದಿನ ಕಾಲದಲ್ಲಿ ಮನುಷ್ಯರು ಸಾಮಾಜಿಕ ಸ್ಥಾನ ವೈಪರೀತ್ಯದಿಂದುಂಟಾದ ಅನ್ಯಾಯಗಳಿಗೆ ಪಾತ್ರರಾಗಿದ್ದರು. ಆದರೆ ಇಸ್ಲಾಮ್ ಧರ್ಮವು ಮನುಷ್ಯರ ಸಮಾನತೆಯನ್ನು ಘೋಷಿಸಿತು. ಒಬ್ಬ ಮುಸ್ಲಿಮನು

ಇತರ ಮುಸ್ಲಿಮರಿಗಿಂತ ಪ್ರತ್ಯೇಕವಾಗಿ ಗುರುತಿಸಲ್ಪಡುವುದು ಆತನ ಜನನ ಅಥವಾ ಇನ್ನಾವುದೇ ವ್ಯಕ್ತಿತ್ವಕ್ಕೆ ಸಂಬಂಧಿಸಿದ ಕಾರಣದಿಂದಾಗಿರಲಿಲ್ಲ. ಆತನ ವಿಶಿಷ್ಟತೆಯು ಆತನ ದೈವಭಕ್ತಿ, ಆತನ ಸತ್ಕರ್ಮಗಳು, ನೈತಿಕ ಮತ್ತು ಬುದ್ಧಿ ಶಕ್ತಿಯನ್ನು ಅವಲಂಬಿಸಿದ್ದಿತು. ಖುರ್ ಆನ್ ಈ ರೀತಿ ಹೇಳುತ್ತದೆ:—

"ಮನುಷ್ಯರೇ ನಾವು ನಿಮ್ಮನ್ನು ಗಂಡು ಮತ್ತು ಹೆಣ್ಣುಗಳಿಂದ ಸೃಷ್ಟಿಸಿರುತ್ತೇವೆ. ನಾವು ನಿಮ್ಮನ್ನು ಗೋತ್ರಗಳಾಗಿಯೂ ಗುಂಪುಗಳಾಗಿಯೂ ನೀವು ಪರಸ್ಪರ ಗುರುತಿಸುವಂತೆ ವಿಂಗಡಿಸಿರುತ್ತೇವೆ. ನಿಮ್ಮ ಪೈಕಿ ಅತ್ಯಂತ ನೀತಿವಂತನು ದೇವರ ದೃಷ್ಟಿಯಲ್ಲಿ ಅತ್ಯುತ್ತಮನು.'' (ಖುರ್‌ಆನ್ 49:14)

ಪೈಗಂಬರರ ಒಂದು ವಚನ ಈ ಕೆಳಗಿನಂತಿದೆ:—

"ಬಹು ದೈವಾರಾಧಕರ ಗುಣಗಳಾದ ಅಹಂಕಾರವೂ ಪಿತೃ ಪಿತಾಮಹರ ಮಹತ್ವವರ್ಣನೆಯೂ ಇಸ್ಲಾಮಿನ ಆಗಮನದ ನಂತರ ದೇವರು ಕೊನೆಗೊಳ್ಳುವಂತೆ ಮಾಡಿರುವನು. ಮನುಷ್ಯನು ಆದಮನಿಂದ ಸೃಷ್ಟಿಸಲ್ಪಟ್ಟಿರುವನು. ಆದಮನು ಮಣ್ಣಿನಿಂದ ಸೃಷ್ಟಿಸಲ್ಪಟ್ಟಿರುವನು. ದೇವರನ್ನು ಅತ್ಯಂತ ಭಯ ಭಕ್ತಿಯಿಂದ ಕಾಣುವವನು ಮನುಷ್ಯರಲ್ಲಿ ಅತ್ಯುತ್ತಮನು.''

ಪವಿತ್ರ ಗ್ರಂಥಗಳ ಅಧ್ಯಯನವನ್ನು ಆವರಿಸಿದ್ದ ರಹಸ್ಯವನ್ನು ಇಸ್ಲಾಮ್ ಧರ್ಮವು ಭೇದಿಸಿ, ಬರೇ ಶಬ್ದೋಚ್ಚಾರ ಮಾಡಲರಿತವರನ್ನು ನಿಂದಿಸಿ, ವೇದ ಗ್ರಂಥಗಳನ್ನರಿತವರೆಂದು ಅಹಂಕರಿಸುತ್ತಿದ್ದವರನ್ನು ಗ್ರಂಥಗಳನ್ನು ಹೊತ್ತ ಕತ್ತೆಗೆ ಹೋಲಿಸಿತು. ಧಾರ್ಮಿಕ ಪ್ರಜ್ಞೆಯಿರುವ ಎಲ್ಲಾ ಮನುಷ್ಯರು ದೇವರ ನುಡಿಗಳನ್ನು ತಿಳಿಯಲು ಬೇಕಾದ ವಿದ್ಯೆಯನ್ನು ಗಳಿಸಬೇಕೆಂದು ಅದು ಆಹ್ವಾನಿಸಿತು. ಮುಸ್ಲಿಮರು ತಮ್ಮ ವಿಶ್ವಾಸಗಳನ್ನು ನೆಲೆನಿಲ್ಲಿಸಲು ಆಧಾರವಾಗಿತಕ್ಕಂತಹ ಯಾವುದೇ ಅಧಿಕೃತ ಖುರ್‌ಆನ್ ವ್ಯಾಖ್ಯಾನ ಗ್ರಂಥ ಇಸ್ಲಾಮಿನಲ್ಲಿಲ್ಲ. ಯಾವುದೇ ಧಾರ್ಮಿಕ ಸಂಘ ಅಥವಾ ಸಮಿತಿ ಏರ್ಪಡಿಸಿ ಅದರ ಸದಸ್ಯರು ಪರಸ್ಪರ ವಾದಿಸಿ ಧರ್ಮನುಷ್ಠಾನ ನಿಯಮಗಳನ್ನು ನಿರ್ಣಯಿಸುವಂತಹ ಏರ್ಪಾಡು ಇಸ್ಲಾಮಿನಲ್ಲಿರಲಿಲ್ಲ. ಒಬ್ಬ ಮುಸ್ಲಿಮನು ಇನ್ನೊಬ್ಬ ಮುಸ್ಲಿಮನ ವಿಶ್ವಾಸದ ಕುರಿತು ತೀರ್ಪನ್ನೀಯಲು ಇಸ್ಲಾಮ್ ಧರ್ಮವು ಯಾವುದೇ ಅಧಿಕಾರ ಕೊಟ್ಟಿಲ್ಲ. ಖುರ್‌ಆನ್ ಈರೀತಿ ಹೇಳುತ್ತದೆ:—

"ಸತ್ಯ ವಿಶ್ವಾಸಿಗಳೇ, ಒಂದು ಜನರಗುಂಪು ಇನ್ನೊಂದನ್ನು ಅಪಹಾಸ್ಯ ಮಾಡದಿರಲಿ; ಪ್ರಾಯಶಃ ಅಪಹಾಸ್ಯಕ್ಕೆ ಗುರಿಯಾದ ಗುಂಪು ಮೊದಲಿನದಕ್ಕಿಂತ ಉತ್ತಮವಾಗಿರಲೂಬಹುದು. (ಖುರ್‌ಆನ್ 49:12)

ಒಬ್ಬ ಭಕ್ತನ ವಿಶ್ವಾಸ ಮತ್ತು ಸತ್ಕರ್ಮಗಳನ್ನು ಸ್ವೀಕರಿಸುವ ಏಕಮಾತ್ರ ಅಧಿಕಾರ ದೇವರಿಗೆ ಮಾತ್ರವೆಂದೂ ಒಬ್ಬ ಭಕ್ತ ಇನ್ನೊಬ್ಬನ ಭಕ್ತಿಯ ಕುರಿತು ಸಮ್ಮತಿಯನ್ನಾಗಲೀ, ತಿರಸ್ಕಾರವನ್ನಾಗಲೀ ವ್ಯಕ್ತಗೊಳಿಸುವ ಅಧಿಕಾರ ದೇವರಿಂದ ಆತನಿಗೆ ನಿರಾಕರಿಸಲ್ಪಟ್ಟಿದೆಯೆಂದೂ ಪೈಗಂಬರರ ವಚನಗಳು ದೃಢೀಕರಿಸಿವೆ. ಕಾಲಕ್ರಮೇಣ ಧಾರ್ಮಿಕ ಅಧ್ಯಯನಗಳು ವಿದ್ವಾಂಸರ ಸೂಕ್ಷ್ಮ ತರ್ಕಗಳಾಗಿ ನಿಕೃಷ್ಟ ಸ್ಥಿತಿಯನ್ನು ಪಡೆದಾಗ ವಿವಿಧ ಪಂಥದ ಅನುಯಾಯಿಗಳು ಒಬ್ಬರನ್ನೊಬ್ಬರು ಧರ್ಮಬಾಹಿರರನ್ನಾಗಿ ಘೋಷಿಸಿ ಸರಕಾರಗಳು ಆ ಧರ್ಮಭ್ರಷ್ಟರಿಗೆ ಯೋಗ್ಯ ಶಿಕ್ಷೆಗಳನ್ನು ವಿಧಿಸುವಂತೆ ಪ್ರೇರೇಪಿಸಿದರು. ಹಿಜರಿ ಐದನೆಯ ಶತಮಾನದಲ್ಲಿ ಇಸ್ಲಾಮಿನ ಮಹಾ ದಾರ್ಶನಿಕರಾದ ಅಲ್ ಘಜ್ಜಾಲಿಯವರು "ಇಸ್ಲಾಮಿನ ಪ್ರಮುಖ ತತ್ವಗಳಲ್ಲಿ ವಿಶ್ವಾಸ'' ಮಾತ್ರ ಒಬ್ಬನು ಸತ್ಯವಿಶ್ವಾಸಿ ಹೌದೋ ಅಲ್ಲವೋ ಎಂಬುದನ್ನು ನಿಶ್ಚಯಿಸಲು ಮೂಲಾಧಾರವಾಗಿರಬೇಕೆಂದೂ ಬೇರೆ ಆಚಾರ ವಿಧಿಗಳು ಭಿನ್ನವಾಗಿದ್ದರೂ ಅವುಗಳು ಒಬ್ಬನನ್ನು ''ಅವಿಶ್ವಾಸಿ'' ಎಂದು ನಿರ್ಣಯಿಸಲು ತಳಹದಿಯಾಗಲಾರದೆಂದೂ ಘೋಷಿಸಿದರು.

''ಪ್ರಾರ್ಥನೆ ಮಾಡುವಾಗ ಮಕ್ಕಾಕ್ಕೆ ಅಭಿಮುಖವಾಗಿ ನಿಲ್ಲುವವರನ್ನು ನಿಂದಿಸಬಾರದು'' ಎಂಬ ಸೂತ್ರವನ್ನು ಆ ಮಹಾಜ್ಞಾನಿ ನಿಶ್ಚಯಿಸಿದರು. ಅದು ಧಾರ್ಮಿಕ ವಿಧಿಗಳ ಡಂಭಾಚಾರಗಳನ್ನು ವ್ಯರ್ಥಗೊಳಿಸಿತು. ಮೋಕ್ಷವು ದೊರಕಬಹುದಾದ ಕಾರ್ಯವಿಧಾನಗಳೆಂದು ತಪ್ಪಾಗಿ ಆಚರಿಸಲ್ಪಡುವ ಎಲ್ಲಾ ಧಾರ್ಮಿಕ ಆಚಾರಗಳನ್ನು ಅದು ನಿರರ್ಥಕಗೊಳಿಸಿತು. ಇಸ್ಲಾಮಿನ ಪ್ರಾರಂಭದ ಕಾಲದ ಮುಸ್ಲಿಮರ ಗುಣಗಳಲ್ಲೊಂದಾದ ಬಿಚ್ಚು ಮನಸ್ಸಿನ ಸಹಿಷ್ಣುತೆಯು ಕಾಲಕ್ರಮೇಣ ಧಾರ್ಮಿಕ ತತ್ವಗಳ ತಪ್ಪು ವ್ಯಾಖ್ಯಾನದಿಂದಾಗಿ ಅದೃಶ್ಯಗೊಳ್ಳುವ ಅಪಾಯದಲ್ಲಿದ್ದಾಗ ಈ ತತ್ವಜ್ಞಾನವು

ಮುಸ್ಲಿಮ್ ಸಮಾಜವು ತನ್ನ ಹಿಂದಿನ ಸಹಿಷ್ಣುತಾಭಾವವನ್ನು ಪುನಃ ಗಳಿಸುವಂತೆ ಮಾಡಿತು.

ಇಸ್ಲಾಮ್ ಧರ್ಮವು ಸೂಚಿಸುವ ದೇವರು ತನ್ನ ಅಸ್ತಿತ್ವದಲ್ಲಿಯೂ, ಗುಣಗಳಲ್ಲಿಯೂ, ಕೃತ್ಯಗಳಲ್ಲಿಯೂ ತನ್ನ ಏಕತ್ವವನ್ನು ಸಾರುವವನೂ ಸಕಲ ಲೋಕಗಳ ನ್ಯಾಯಾಧೀಶನೂ, ಕೊನೆಯ ತೀರ್ಮಾನದ ದಿನದ ಯಜಮಾನನೂ ಆಗಿರುವನು. ದೇವರ ಕರೆಯನ್ನು ಅಪಹಾಸ್ಯ ಮಾಡದೆ ಹಂಗಿಸದೆ ಸ್ವೀಕರಿಸಿ ತಮ್ಮ ಸುಖ ಸೌಕರ್ಯಗಳನ್ನು ತ್ಯಜಿಸಿ ಸೃಷ್ಟಿಕರ್ತನ ಭರವಸೆಯಲ್ಲಿ ಎದ್ದು ನಿಂತವರನ್ನು ದೇವರು ತನ್ನ ಸಮೀಪ ಕರೆಯುವನು. ಖುರ್‌ಆನಿನ ಆರಂಭದ ಅಧ್ಯಾಯಗಳಲ್ಲಿ ದೇವರ ನುಡಿಯು ಮರಣಾ ನಂತರದ ಅವಸ್ಥೆಯ ಕುರಿತು ಹೆಚ್ಚು ವಿವರಿಸುತ್ತದೆ. ಪಶ್ಚಾತ್ತಾಪಗೊಳ್ಳದವರಿಗೂ ದೇವರಿಗೆ ಶರಣುಹೋಗದವರಿಗೂ ವಿನಾಶ ಕಾದಿದೆಯೆಂದೂ ಅತ್ಯಂತ ನೋವನ್ನುಂಟುಮಾಡುವ ಭಯಂಕರ ಶಿಕ್ಷೆಗಳು ಅವರಿಗೆ ಕಾದಿವೆಯೆಂದೂ ಖುರ್‌ಆನ್ ವಿವರಿಸುತ್ತದೆ. ದೇವರ ಪ್ರವಾದಿಗಳನ್ನು ವಿರೋಧಿಸಿ ನಿಂದಿಸುವವರಿಗೂ ವಿನಾಶವು ಸಂಭವಿಸಲಿದೆಯೆಂದೂ ಅವರು ದೇವರಿಂದ ನಿರ್ನಾಮಗೊಳಿಸಲ್ಪಡುವರೆಂದೂ ಖುರ್‌ಆನ್ ಹೇಳುತ್ತದೆ. ದೇವರಿಗೆ ಎಲ್ಲವೂ ತಿಳಿದಿದೆ. ಆತನು ಎಲ್ಲವನ್ನೂ ಕಾಣುತ್ತಿದ್ದಾನೆ; ಕೇಳುತ್ತಿದ್ದಾನೆ. ಆತನೇ ಆಕಾಶ ಭೂಮಿಗಳನ್ನೂ ಜೀವನಮಾಣಗಳನ್ನೂ ಸೃಷ್ಟಿಸಿರುವನು. ಆತನು ಸ್ವರ್ಗ ಸಿಂಹಾಸನದ ಅಧಿಪತಿಯು. ಆತನ ಜ್ಞಾನ ಪರಿಪೂರ್ಣ. ಆತನ ನಿರ್ಧಾರ ಅನಿಷೇಧ್ಯ. ಆತನ ಶಕ್ತಿ ಅಭೇದ್ಯ. ಆತನ ಕೃತ್ಯಗಳೇ ಆತನ ಈ ಗುಣಗಳನ್ನು ಸೂಚಿಸುತ್ತವೆ. ಪ್ರತಿಯೊಂದು ವಸ್ತುವಿಗೂ ಆತನು ಅಗತ್ಯ. ಆದರೆ ಆತನು ತಾನು ಸೃಷ್ಟಿಸಿದ ವಸ್ತುಗಳನ್ನು ಮಾತ್ರ ಉಪಯೋಗಿಸುತ್ತಾನೆ. ಆತನಿಂದ ಸೃಷ್ಟಿಸಲ್ಪಟ್ಟ ಯಾವುದೇ ಜೀವಿಯನ್ನು ಆತನು ಹೋಲುವುದಿಲ್ಲ. ಆತನಿಗೂ ಜೀವಿಗಳಿಗೂ ಇರುವ ಸಂಬಂಧವೇನೆಂದರೆ ಆತನು ಜೀವಿಗಳನ್ನೆಲ್ಲಾ ಸೃಷ್ಟಿಸಿರುವನು. ಅವುಗಳು ಆತನ ಅಧೀನಕ್ಕೊಳಪಟ್ಟಿವೆ ಮತ್ತು ಅವುಗಳು ಆತನ ಕಡೆಗೆಯೇ ಹಿಂದಿರುಗುವುವು. ಆದರೆ ಈ ಮಹಾ ಶಕ್ತಿಶಾಲಿ ದೇವರು ನ್ಯಾಯವಂತನಾದ ದೇವರಾಗಿರುವನು. ಅನ್ಯಾಯಗಾರನಾದ ದೇವರನ್ನು ಗ್ರಹಿಸಲು ಸಹ ಸಾಧ್ಯವಿಲ್ಲ. ಒಬ್ಬ ವ್ಯಕ್ತಿ ಮಾಡಿರುವಂತಹ ಬಹಳ ಸಣ್ಣ ಸತ್ಕರ್ಮಕ್ಕೂ ದೇವರು ಉತ್ತಮ ಪ್ರತಿಫಲ ನೀಡದೆ ಬಿಡಲಾರನು. ಆತನು ಅತ್ಯಲ್ಪ ಅನ್ಯಾಯವನ್ನು ಮಾಡಲಾರನು. ಒಂದು ಖರ್ಜೂರದ ಬೀಜದ ಗೀರನ್ನು ಮುಚ್ಚಿರುವ ನಾರಿನಷ್ಟು ಅನ್ಯಾಯವನ್ನು ಸಹ ಆತನು ಮಾಡಲಾರನು. (ಪವಿತ್ರ ಖುರ್‌ಆನ್ 4:54 ನೋಡಿರಿ)

ಮುಸ್ಲಿಮ್ ಮತ್ತು ಕ್ರೈಸ್ತ ಮತ ವಿದ್ವಾಂಸರು ಮನುಷ್ಯನ "ಸ್ವಯಂ ನಿರ್ಧಾರ ಸ್ವಾತಂತ್ರ್ಯ"ದ ಪ್ರಶ್ನೆಯನ್ನು ಹೇಗೆ ಉತ್ತರಿಸುವುದೆಂದು ತಮ್ಮನ್ನೇ ಪ್ರಶ್ನಿಸಿರುವರು. ವಿದ್ವಾಂಸರು ತಾವು ಯಾವ ಪಂಥಕ್ಕೆ ಸೇರಿರುವರೋ ಆ ಪಂಥದ ವಿಶ್ವಾಸಗಳಿಗೆ ಅನುಸಾರವಾಗಿ ಉತ್ತರಿಸಿರುವರು. ಆದರೆ ಎಲ್ಲರ ಉತ್ತರಗಳು ದೇವರ ನ್ಯಾಯಪರತೆ ಮತ್ತು ಮಾನವರ ಕೃತ್ಯಗಳು ಕೆಟ್ಟದ್ದಾಗಲೀ ಒಳ್ಳೆಯದಾಗಲೀ ಅವರ ಪೂರ್ಣ ಸ್ವಾತಂತ್ರ್ಯದ ಪ್ರತಿಫಲಗಳಾಗಿವೆಯೆಂಬ ಖುರ್‌ಆನಿನ ವಚನಗಳನ್ನಾಧರಿಸಿವೆ. ಮನುಷ್ಯನ ಸ್ವಯಂ ನಿರ್ಧಾರ ಸ್ವಾತಂತ್ರ್ಯವನ್ನು ಅಲ್ಲಗಳೆದು ಮನುಷ್ಯನ ಸದ್ಗುಣಗಳೂ, ದುರ್ಗುಣಗಳೂ, ಅಪರಾಧಗಳೂ ಶಿಕ್ಷೆಗಳೂ ದೇವರ ಚಿತ್ತವನ್ನು ಅನುಸರಿಸಿ ಉಂಟಾಗುತ್ತವೆಯೆಂಬ ಒಂದು ಭಾವನೆಯು ಮುಸ್ಲಿಮರಲ್ಲಿ ಬಹಳ ಹಿಂದೆಯೇ ತಲೆದೋರಿತ್ತೆಂದು ಮುಹಮ್ಮದ್ ಅಬ್ದುಹು ಹೇಳುತ್ತಾರೆ. ಆದರೆ ಇಂದಿನ ಕಾಲದಲ್ಲಿ ಮುಸ್ಲಿಮರಲ್ಲಿ ಹೆಚ್ಚಿನವರು (ಕೆಲವು ಅಗಣ್ಯ ಗುಂಪುಗಳ ಹೊರತು) ಮನುಷ್ಯನ ಕೃತಿಗಳ ಜವಾಬ್ದಾರಿಯನ್ನು ಆತನ ಸ್ವತಂತ್ರ ನಿರ್ಧಾರ ಶಕ್ತಿಯ ಮೇಲೆ ಹೊರಿಸುವ ಅಭಿಪ್ರಾಯಕ್ಕೆ ಹಿಂದಿರುಗಿರುವರು.

ದೇವರು ತನ್ನ ಕಡೆಗೆ ಬರುವ ಮಾರ್ಗವನ್ನು ಯಾರಿಗೂ ತಡೆದಿಲ್ಲ. ಪಾಪಿಗಳಿಗೂ ಇದನ್ನು ನಿರಾಕರಿಸಿಲ್ಲ. ಆತನು ಸತ್ಕೃತ್ಯಗಳನ್ನು ಮಾಡುವ ಶಕ್ತಿಸಾಮರ್ಥ್ಯಗಳನ್ನು ಎಲ್ಲರಿಗೂ ಕೊಟ್ಟಿರುವನು. ಈ ಅಭಿಪ್ರಾಯವನ್ನು ನಿಷೇಧಿಸುವಂತೆ ತೋರುವ ಖುರ್‌ಆನಿನ ಕೆಲವು ಪದಪ್ರಯೋಗಗಳನ್ನು ಅವುಗಳ ನಿಜವಾದ ಅರ್ಥ ನಾವು ಗ್ರಹಿಸಿದರೆ ವಿವರಿಸಲು ಸಾಧ್ಯವಿದೆ. ಮನುಷ್ಯ ಮತ್ತು ದೇವರ ಸಂಬಂಧವನ್ನು ಮರುಭೂಮಿಯಲ್ಲಿ ಸರಿಯಾದ ದಾರಿಯನ್ನು ಗುರುತಿಸಿ ಗುರಿ ತಲಪುವ ದಾರಿಯಲ್ಲಿ ಕೆಲವು ತಪ್ಪುಗಳನ್ನು ಮಾಡುವ ಪ್ರಯಾಣಿಕನಿಗೂ ಆತನ ಉದ್ದೇಶ ಸ್ಥಾನಕ್ಕೂ ಹೋಲಿಸಬಹುದು. ಸತ್ಯವಿಶ್ವಾಸಿಯಾಗಿ ಸತ್ಕರ್ಮಗೈಯುವವನಿಗೆ ದೇವರ ದಯೆಯೂ, ಆಶೀರ್ವಾದಗಳೂ ದೊರಕಿ ಆತನು ಸನ್ಮಾ

ಗ್ರದಾನದಿಂದ ಸಮ್ಮಾನಿತನಾಗುವನು. ಆದರೆ ದುಷ್ಕರ್ಮಿಯನ್ನು ದೇವರು ಹಾಗೆಯೇ ಬಿಟ್ಟುಬಿಡುವನು. ದೇವರು ಆತನಿಗೆ ಅಭಯಹಸ್ತನೀಡಲಾರನು. ಆದರೆ ಆತನು ದುರ್ಮಾರ್ಗಿಯಾಗುವಂತೆ ಮಾಡುವವನು ದೇವರಲ್ಲ.

ಸರ್ವಶಕ್ತನಾದ ದೇವರು ಶಿಕ್ಷಿಸಲು ಸದಾಸನ್ನದ್ಧನಾಗಿದ್ದರೂ ಪರಮ ದಯಾಮಯನಾಗಿರುವನು. ಆತನು ತನ್ನ ಸೇವಕರ ಮೇಲ್ನೋಟಗಾರನೂ ಅನಾಥರ ಸಂರಕ್ಷಕನೂ, ಪಾಪಿಗಳಿಗೆ ಸರಿದಾರಿ ತೋರುವವನೂ, ನೋವಿನ ಬಾಧೆಯಿಂದ ಮುಕ್ತಿನೀಡುವವನೂ, ಬಡವರ ಸ್ನೇಹಿತನೂ, ದಾನಶೀಲನೂ, ಕ್ಷಮೆ ನೀಡುವ ಯಾಜಮಾನನೂ ಆಗಿರುವನು. ಆತನು ಆಲಿಸುತ್ತಾನೆ. ಆತನು ಅನುಗ್ರಹ ನೀಡುತ್ತಾನೆ. ಎಲ್ಲಾ ಅನುಗ್ರಹಗಳೂ ಆತನ ಕೈಯಲ್ಲಿವೆ

ದೇವರ ದಯೆ ಖುರ್‌ಆನಿನಲ್ಲಿ ಅನೇಕ ಸಾರಿ ಆವರ್ತಿಸಿ ವಿವರಿಸಲ್ಪಟ್ಟ ವಿಷಯವಾಗಿದೆ. ಖುರ್‌ಆನಿನ ಪ್ರತಿ ಅಧ್ಯಾಯ ದೇವರ ಗುಣಗಳಾದ "ಅಪರಿಮಿತ ದಯೆ'' ಮತ್ತು "ಕೃಪೆ''ಯಿಂದ ಪ್ರಾರಂಭಿಸಲ್ಪಡುವುದರಿಂದ ಈ ಗುಣಗಳು ಪೂರ್ಣ ಗ್ರಂಥದ ಮುಖ್ಯ ವಿಷಯಗಳನ್ನು ಸೂಚಿಸುತ್ತವೆ.

ಪಾಪಕ್ಕಾಗಿ ಪಶ್ಚಾತ್ತಾಪಗೊಂಡು ತನ್ನ ನಡತೆಯನ್ನು ಸರಿಪಡಿಸುವ ಪಾಪಿಗೆ ಕ್ಷಮೆಯ ಭರವಸೆ ನೀಡಲಾಗಿದೆ. ದೇವರು ಅಪರಾಧಗೈದವರನ್ನೆಲ್ಲಾ ಶಿಕ್ಷಿಸಲು ಸಮರ್ಥನಾದರೂ ಆತನ ದಯೆ ಎಲ್ಲವನ್ನೂ ಆವರಿಸಿರುವುದರಿಂದಲೂ, ದಯೆದೋರುವುದು ಅನುಲ್ಲಂಘನೀಯ ನಿಯಮವಾಗಿ ಆತನಿಂದ ಮಾಡಲ್ಪಟ್ಟಿರುವುದರಿಂದಲೂ, ಅಪರಾಧ ಗೈದವರು ಸಹ ಇದಕ್ಕಾಗಿ ಆಶಿಸಬಹುದು. (ಇದಕ್ಕೆ ಸಂಬಂಧಿಸಿದ ವಚನ ಖುರ್‌ಆನ್ 7:157ರಲ್ಲಿ ಕಾಣಬಹುದು.)

ಪೈಗಂಬರರ ಈ ಕೆಳಗಿನ ನುಡಿಗಳನ್ನು ಇದು ಸಮರ್ಥಿಸುತ್ತದೆ:—

"ದೇವರು ತನ್ನ ಸೃಷ್ಟಿಯನ್ನು ಪೂರ್ತಿಗೊಳಿಸಿದ ನಂತರ ತನ್ನ ಬಳಿಯಿರಿಸಿದ್ದ ಪುಸ್ತಕದಲ್ಲಿ ಈ ರೀತಿ ಬರೆದನು: ನನ್ನ ದಯೆಯು ನನ್ನ ಕೋಪವನ್ನು ಜಯಿಸುತ್ತದೆ."

''ದೇವರು ದಯೆಯನ್ನು ನೂರು ಭಾಗಗಳನ್ನಾಗಿ ಮಾಡಿದನು. ಆತನು ತೊಂಭತ್ತೊಂಭತ್ತು ಭಾಗಗಳನ್ನು ತನಗಾಗಿ ಕಾದಿರಿಸಿ ಒಂದು ಭಾಗವನ್ನು ಮಾತ್ರ ಲೋಕಕ್ಕೆ ಬಿಡುಗಡೆಗೊಳಿಸಿದನು. ಇಷ್ಟು ಮಾತ್ರದಿಂದ ಮಾನವರು ಅನುಭವಿಸುವ ಅನುಗ್ರಹಗಳು ಉದ್ಭವಿಸುತ್ತವೆ."

ದೇವರ ಗುಣಗಳಲ್ಲಿ ಒಂದು "ಪ್ರೀತಿ"ಯಾಗಿದೆ. ಅದರ ಕುರಿತು ಖುರ್‌ಆನ್ ಈ ರೀತಿ ಹೇಳುತ್ತದೆ:

"(ಮುಹಮ್ಮದ್ ನೀನು ಹೇಳು: ನೀವು ದೇವರನ್ನು ಪ್ರೀತಿಸುವಿರಾದರೆ ನನ್ನನ್ನು ಅನುಸರಿಸಿರಿ; ದೇವರು ನಿಮ್ಮನ್ನು ಪ್ರೀತಿಸುವನು ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುವನು. ಮತ್ತು ದೇವರು ಅತ್ಯಂತ ಕ್ಷಮಾದಾನ ನೀಡುವವನೂ ಪರಮ ದಯಾಳುವೂ ಆಗಿರುವನು.'' ಖುರ್‌ಆನ್ (3:32).

ಇಷ್ಟು ಮಾತ್ರಕ್ಕೆ ಸಾಕಾಗಲಿಲ್ಲ. ಪ್ರವಾದಿಗಳ ನಲ್ವತ್ತು ಪ್ರಧಾನ ವಚನಗಳ ಸಂಗ್ರಹದಲ್ಲಿ ಈ ಕೆಳಗಿನಂತೆ ದೈವ ವಾಣಿ ಉಲ್ಲೇಖಿತವಾಗಿದೆ:

''ಧರ್ಮ ಕಾರ್ಯಗಳನ್ನು ಧಾರಾಳವಾಗಿ ಪ್ರೋತ್ಸಾಹಿಸುತ್ತಾ ನನ್ನ ದಾಸನು ನನ್ನನ್ನು ಹೆಚ್ಚು ಹೆಚ್ಚಾಗಿ ಸಮೀಪಿಸುವಾಗ ನಾನು ಆತನನ್ನು ಪ್ರೀತಿಸುವೆನು. ಆಗ ನಾನು ಆತನ ಕಣ್ಣು, ಕಿವಿ, ನಾಲಗೆ, ಕೈ ಆಗುವೆನು. ಆತನ ನೋಟ, ಕೇಳುವಿಕೆ, ಮಾತು ಮತ್ತು ನಡೆ ನನ್ನದೇ ಆಗುವುದು.''

ಸರ್ವ ಸುಗುಣಗಳಿಂದಲೂ ತುಂಬಿ ದುರ್ಗುಣಗಳಿಂದ ಪರಿಶುದ್ಧನಾದ ದೇವರ ಈ ಕಲ್ಪನೆಯು ಎಲ್ಲರಿಗೂ ಶ್ರೇಷ್ಠವೂ ಉನ್ನತವೂ ಆಗಿ ತೋರಬಹುದೆಂಬುದು ಸಂಶಯಕರವಾಗಿದೆ. ದೇವರ ಕುರಿತು ಮೇಲೆಲ್ಲಾ ವಿವರಿಸಲಾದ ಭಾವನೆಗಳು ಇಸ್ಲಾಮ್ ಧರ್ಮ ಮೊದಲ ಬಾರಿಗೆ ಉಪದೇಶಿಸಿದವುಗಳಲ್ಲವೆಂದೂ ಅವು ಯಹೂದಿ ಮತ್ತು ಕ್ರೈಸ್ತ ಧರ್ಮಗಳ ತತ್ವಗಳಿಗೆ ಸಮವಾಗಿವೆಯೆಂದೂ ಇಸ್ಲಾಮ್ ಧರ್ಮವು ದೇವರ ಮತ್ತು ಮಾನವನ ಸಂಬಂಧವನ್ನು ವರ್ಣಿಸಲು ಯಾವುದನ್ನಾಗಲೀ ಹೊಸದಾಗಿ ಹೇಳಲಿಲ್ಲವೆಂದೂ ಖಂಡಿತವಾಗಿ ವಿಮರ್ಶಾ ರೂಪದಲ್ಲಿ ಹೇಳಬಹುದು. ಆದರೆ ಮುಹಮ್ಮದ್ ಪೈಗಂಬರರು ಸ್ವತ: ತಾನು ಯಾವುದೇ ಹೊಸ ಧರ್ಮವನ್ನು ತಂದಿಲ್ಲವೆಂದೂ ಇಬ್ರಾಹಿಮ್ ಪ್ರವಾದಿಯು ಸ್ಥಾಪಿಸಿದ ನಂತರ ಇತರರಿಂದ ಭ್ರಷ್ಟಗೊಳಿಸಲ್ಪಟ್ಟ ಧರ್ಮವನ್ನು ಪುನ: ಸ್ಥಾಪಿಸಲು ದೇವರು ತನ್ನನ್ನು ಕಳುಹಿಸಿರುವನೆಂದೂ ಹಿಂದಿನ ಪ್ರವಾದಿಗಳಾದ

ಮೂಸಾ (Moses) ಯೆಶಾಯ (Isaiah) ಮತ್ತು ಯೇಸುಕ್ರಿಸ್ತರಿಗೆ ಅವತೀರ್ಣಗೊಳಿಸಿದವುಗಳನ್ನು ದೃಢೀಕರಿಸಲು ಬಂದಿರುವುದಾಗಿಯೂ ಹೇಳಿರುವುದರಿಂದ ಇವರ ಈ ವಿಮರ್ಶೆಗೆ ಯಾವುದೇ ಬೆಲೆಯಿಲ್ಲ. ಅವರು ನ್ಯಾಯ ಪ್ರಮಾಣಗಳನ್ನು ತಂದ ಪ್ರವಾದಿಗಳಲ್ಲಿ ಅಂತಿಮನಾಗಿದ್ದಾರೆ.

ಇಸ್ಲಾಮ್ ಧರ್ಮವು ಸ್ಥಾಪಿತವಾಗುವ ಸಂದರ್ಭದಲ್ಲಿ ಜನರೆಲ್ಲರೂ ವಿವಿಧ ಧಾರ್ಮಿಕ ಪಂಗಡಗಳಾಗಿ ವಿಂಗಡಿಸಲ್ಪಟ್ಟವರಾಗಿ ಪರಸ್ಪರ ಜಗಳವಾಡುತ್ತಲೂ ಶಪಿಸುತ್ತಲೂ ಇದ್ದರೂ ಪ್ರತಿಯೊಂದು ಪಂಗಡಕ್ಕೆ ಸೇರಿದವರು ತಾವು ಮಾತ್ರ ದೇವರವಾಣಿಯ ಸಂರಕ್ಷಕರೆಂದು ವಿಶ್ವಾಸಗೊಂಡು ಜಗಳವಾಡುವುದು ಮತ್ತು ಸ್ವಮತಭ್ರಾಂತಿ ತೋರುವುದು ಧಾರ್ಮಿಕ ಜೀವನದ ಅವಿಭಾಜ್ಯ ಅಂಗವೆಂದು ಭಾವಿಸುತ್ತಿದ್ದರು. ಎಲ್ಲಾ ಕಾಲಗಳಲ್ಲಿಯೂ ಎಲ್ಲಾ ಪ್ರವಾದಿಗಳ ಉಪದೇಶಗಳು ಒಂದೇ ಆಗಿವೆಯೆಂದೂ ಎಲ್ಲಾ ಧರ್ಮಗಳೂ ಮುಖ್ಯವಾಗಿ ಯಾವಾಗಲೂ ಒಂದೇ ವಿಧದ ಉಪದೇಶವನ್ನಿತ್ತಿದ್ದವೆಂದೂ ಇಸ್ಲಾಮ್‌ಧರ್ಮವು ಘೋಷಿಸಿತು. ದೇವರು ಸರ್ವಶಕ್ತನೆಂದೂ ಸರ್ವರೂ ಆತನಿಗೆ ಶರಣುಹೋಗಬೇಕೆಂದೂ ಆತನ ಆಜ್ಞೆಗಳನ್ನು ಪಾಲಿಸಬೇಕೆಂದೂ ಒಳ್ಳೆಯ ಕೆಲಸ ಮಾಡುತ್ತಾ ಕೆಟ್ಟ ಕೆಲಸಗಳನ್ನು ತೊರೆಯಬೇಕೆಂದೂ—ಇದೇ ಧರ್ಮದ ತಿರುಳೆಂದೂ ಇಸ್ಲಾಮ್ ಬೋಧಿಸಿತು. ವಿವಿಧ ಮತಧರ್ಮಗಳು ಅನುಸರಿಸುವ ವಿವಿಧ ಧಾರ್ಮಿಕಾಚಾರಗಳು ದೇವರ ದಯಾಗುಣದಿಂದ ಉತ್ಪನ್ನವಾದುವುಗಳೆಂದೂ ದೇವರು ವಿವಿಧ ಕಾಲಗಳಲ್ಲಿ ವಿವಿಧ ಜನರ ಆವಶ್ಯಕತೆಗಳಿಗನುಸಾರವಾಗಿ ಮನುಷ್ಯರ ಬುದ್ಧಿಯ ಬೆಳವಣಿಗೆಯೊಂದಿಗೆ ಅಭಿವೃದ್ಧಿ ಹೊಂದಬಲ್ಲಂತಹ ಧರ್ಮನಿಯಮಗಳನ್ನು ಅವತೀರ್ಣಗೊಳಿಸಿದನೆಂದೂ ಕೊನೆಗೆ ವಿವಿಧ ಘಟನೆಗಳಿಂದ ಮಾನವರು ಅತ್ಯುತ್ತಮ ಬೌದ್ಧಿಕ ಬೆಳವಣಿಗೆಯನ್ನು ಪ್ರಾಪಿಸಿ ಭಾವೋದ್ವೇಗಗಳಿಗೆ ಮಾತ್ರವಲ್ಲ ಬುದ್ಧಿಗೂ ಆಕರ್ಷಕವಾದ ದೈವಿಕ ಉನ್ನತ ತತ್ವಗಳನ್ನು ತಿಳಿದುಕೊಳ್ಳಲು ಸಮರ್ಥರಾದಾಗ ಮುಹಮ್ಮದ್ ಪೈಗಂಬರರು ಜನ್ಮವೆತ್ತಿ ಎಲ್ಲಾ ವಿಧದ ಮತಧರ್ಮಗಳನ್ನು ಮಾನವರ ಏಳಿಗೆಗಾಗಿ ಸಮನ್ವಯಗೊಳಿಸಿ "ಗ್ರಂಥಸ್ಥರಾದ" ಯಹೂದಿ ಮತ್ತು ಕ್ರೈಸ್ತರ ಅಭಿಪ್ರಾಯ ಭಿನ್ನತೆಗಳನ್ನು ನಿವಾರಿಸಿ ಮನುಷ್ಯರನ್ನು ಈ ಜೀವನದಲ್ಲಿಯೂ ಮುಂದಿನ ಜೀವನದಲ್ಲಿಯೂ ಸುಖ ಶಾಂತಿ ಗಳಿಸುವಂತೆ ಮಾಡಲು ಮಾರ್ಗ ನಿರ್ದೇಶ ಮಾಡಿದರು.

ದೇವರ ಮೇಲಿನ ವಿಶ್ವಾಸವು ಪ್ರವಾದಿಗಳ ಮೇಲಿನ ವಿಶ್ವಾಸದಿಂದ ಬರುತ್ತದೆಯೆಂದು ಎಲ್ಲಾ ಮುಸ್ಲಿಮರು ನಂಬುತ್ತಾರೆ. ಆದರೆ ಪ್ರವಾದಿಗಳನ್ನು ಅಥವಾ ಅವತೀರ್ಣಗೊಳಿಸಲ್ಪಟ್ಟ ವೇದಗ್ರಂಥಗಳನ್ನು ನಂಬಬೇಕಾದರೆ ದೇವರ ಅಸ್ತಿತ್ವದ ಕುರಿತು ಮನುಷ್ಯರ ಆತ್ಮದಲ್ಲಿ ಮೊದಲೇ ವಿಶ್ವಾಸ ನೆಲೆಗೊಳ್ಳುವುದೂ ಮತ್ತು ದೇವರು ಪ್ರವಾದಿಗಳನ್ನೂ ವೇದಗ್ರಂಥಗಳನ್ನೂ ಅವತೀರ್ಣಗೊಳಿಸುವುದರ ಸಾಧ್ಯತೆಯ ಕುರಿತು ಮೊದಲೇ ದೃಢಚಿತ್ತರಾಗಬೇಕಾಗುವುದೂ ಅಗತ್ಯ. ಆದುದರಿಂದ ಪ್ರಕೃತಿಯ ಚಮತ್ಕಾರಗಳನ್ನು ವೀಕ್ಷಿಸಿ ಗಾಢವಾಗಿ ಚಿಂತಿಸಿ ಅದರ ಮೂಲಕ ದೇವರ ಇರುವಿಕೆಯಲ್ಲಿ ನಂಬಿಕೆಯನ್ನು ತಾಳುವುದು ಮಾನವನ ಪ್ರಥಮ ಕರ್ತವ್ಯವಾಗಿದೆ. ಮೂಲಭೂತವಾದ ಈ ವಿಶ್ವಾಸದಿಂದ ಪ್ರವಾದಿಗಳನ್ನೂ ವೇದಗ್ರಂಥಗಳನ್ನೂ ನಂಬುವುದು ಸಾಧ್ಯವಾಗುತ್ತದೆ. ಇಸ್ಲಾಮ್ ಧರ್ಮದ ಅವತೀರ್ಣಗೊಳಿಸಲ್ಪಟ್ಟ ಗ್ರಂಥ ಪವಾಡ ಸದೃಶವಾಗಿದೆ.

ಇಸ್ಲಾಮಿನ ಅತಿ ಮಹತ್ತಾದ ಪವಾಡ ಖುರ್‌ಆನ್ ಆಗಿದೆ. ಅದು ಅದರ ಅವತೀರ್ಣದ ಕಾಲದಿಂದ ಇಷ್ಟರ ವರೆಗೆ ಯಾವುದೇ ವ್ಯತ್ಯಾಸಕ್ಕೆ ಗುರಿಯಾಗಿಲ್ಲವೆಂಬುದು ಐತಿಹಾಸಿಕ ಸತ್ಯವಾಗಿದೆ. ಈ ಗ್ರಂಥವನ್ನು ಅನುಕರಿಸುವುದು ಅಸಾಧ್ಯವಾಗಿದೆ. ಅದರ ಪ್ರತಿಯೊಂದು ಪದಪ್ರಯೋಗ ಪರಿಪೂರ್ಣವೂ, ಹೆಚ್ಚು ದೀರ್ಘವೂ ಹೆಚ್ಚು ಹ್ರಸ್ವವೂ ಆಗಿರದೆ ಸಮುಚಿತ ಗಾತ್ರವನ್ನು ಹೊಂದಿದೆ. ಅದರ ಶೈಲಿ ಅಪ್ರತಿಮವಾಗಿದೆ. ಅದರ ಅವತೀರ್ಣಕ್ಕೆ ಮೊದಲು ಅದರ ಶೈಲಿಯ ಮಾದರಿಯಲ್ಲಿ ಯಾವುದೇ ಕೃತಿ ಅರಬಿ ಭಾಷೆಯಲ್ಲಿ ಬರೆಯಲ್ಪಟ್ಟಿಲ್ಲ. ಮಾನವರ ಆತ್ಮದಲ್ಲಿ ಅದು ಉಂಟುಮಾಡುವ ಪ್ರಭಾವಕ್ಕೆ ಯಾವುದೇ ಪರಕೀಯ ಸಹಾಯದ ಅಗತ್ಯ ಬೀಳುವುದಿಲ್ಲ. ಅದರಲ್ಲಿ ಅಂತರ್ಗತವಾದ ಮಹತ್ವಗಳಿಂದಾಗಿಯೇ ಅದು ಪ್ರಭಾವ ಬೀರುತ್ತದೆ. ಅದರ ಪ್ರತಿಯೊಂದು ವಚನವೂ ವಾಕ್ಪಟುತ್ವವನ್ನು ಪ್ರತಿಬಿಂಬಿಸುತ್ತಿದ್ದು ಆಜ್ಞೆಗಳನ್ನೂ ನಿಷೇಧಗಳನ್ನೂ ಘೋಷಿಸುವಾಗಲೂ ಇದು ವ್ಯತ್ಯಾಸಗೊಂಡಿಲ್ಲ. ಪ್ರವಾದಿಗಳ ಚರಿತ್ರೆ, ಪ್ರಪಂಚದ ಆದಿ ಮತ್ತು ಅಂತ್ಯದ ವಿವರಣೆ, ದೇವರ ಗುಣಗಳ ವರ್ಣನೆ—ಮೊದ

ಲಾದುವು ಪುನರಾವರ್ತಿಸಿ ಹೇಳಲ್ಪಟ್ಟಿದ್ದರೂ, ಅವುಗಳ ಪರಿಣಾಮ ಪ್ರಭಾವ ಶೂನ್ಯವಾಗದಂತೆ ಪುನರಾರ್ತಿಸ ಲಾಗಿದೆ. ಒಂದು ವಿಷಯದಿಂದ ಇನ್ನೊಂದು ವಿಷಯಕ್ಕೆ ಶಕ್ತಿಶೂನ್ಯವಾಗದಂತೆ ವಿವರಣೆ ಸಾಗುತ್ತದೆ. ಗಾಂಭೀರ್ಯ ಮತ್ತು ಮಾಧುರ್ಯ ಸಾಮಾನ್ಯವಾಗಿ ಒಟ್ಟಿಗೆ ಸಾಗಲಾರದಿದ್ದರೂ ಈ ಗ್ರಂಥದಲ್ಲಿ ಇವನ್ನು ಒಟ್ಟಿಗೆ ಕಾಣಬಹುದು. ಭಾಷಾ ಭೂಷಣಕ್ಕಾಗಿ ಉಪಯೋಗಿಸಲ್ಪಟ್ಟ ಪ್ರಯೋಗಗಳು ಈ ಗ್ರಂಥದಲ್ಲಿ ಪರಿಪೂರ್ಣವಾಗಿ ಸಮಯೋಚಿತವಾಗಿವೆ. ಇಂತಹ ಅದ್ಭುತಕರ ಗ್ರಂಥವು ನಿರಕ್ಷರಕುಕ್ಷಿ ಅರಬಿಯನಾಗಿದ್ದ ಮತ್ತು ತನ್ನ ಜೀವಮಾನವಿಡೀ ಯಾವುದೇ ಕಾವ್ಯಭಾವವನ್ನು ಪ್ರತಿಬಿಂಬಿಸದ

"ನಾನು ಪ್ರವಾದಿ ಇದು ಮಿಥ್ಯವಲ್ಲ.

ನಾನು ಅಬ್ದುಲ್ ಮುತ್ತಲಿಬ್‌ರವರ ಪುತ್ರ"–ಎಂಬಂತಹ ಕಾವ್ಯಭಾವಹೀನವಾದ ಮೂರೋ ನಾಲ್ಕೋ ಪದ್ಯಗಳನ್ನು ರಚಿಸಿದಂತಹ ಮುಹಮ್ಮದ್ ಪೈಗಂಬರರಿಂದ ರಚಿತವಾಗುವುದು ಹೇಗೆ ತಾನೆ ಸಾಧ್ಯ ?

ಇಸ್ಲಾಮಿನ ವಿರೋಧಿಗಳನ್ನು ಮುಹಮ್ಮದರು ಖುರ್‌ಆನಿಗೆ ಸಮಾನವಾದ ಅಥವಾ ಅದರ ಒಂದು ಅಧ್ಯಾಯಕ್ಕೆ ಸಮವಾದ ಕೃತಿಯನ್ನು ರಚಿಸುವಂತೆ ಆಹ್ವಾನಿಸಿದರು. ಈ ವಿಷಯದಲ್ಲಿ ಖುರ್‌ಆನ್ ಈ ರೀತಿ ಹೇಳುತ್ತದೆ:

"ನಾವು ನಮ್ಮ ಸೇವಕನಿಗೆ ಅವತೀರ್ಣಗೊಳಿಸಿದುದರ ಕುರಿತು ನಿಮಗೆ ಯಾವುದೇ ಸಂಶಯವಿದ್ದರೆ ಅದರಂತಹ ಒಂದು ಅಧ್ಯಾಯವನ್ನು ರಚಿಸಿ ತನ್ನಿರಿ" (ಖುರ್‌ಆನ್ 2:24).

ಆ ಕಾಲದಲ್ಲಿ ವಾಕ್ಚಾತುರ್ಯಗಾರರಾದ ಜನರು ಅರಬಿಗಳಲ್ಲಿ ಎಷ್ಟೋ ಇದ್ದರು. ಹೀಗಿದ್ದರೂ ಖುರ್‌ಆನಿಗೆ ಹೋಲಿಸಬಹುದಾದ ಯಾವುದೇ ಕೃತಿಯನ್ನು ರಚಿಸಲು ಅವರು ಅಸಮರ್ಥರಾದರು. ಅರಬಿಗಳು ಪೈಗಂಬರರನ್ನು ಶಸ್ತ್ರಗಳಿಂದ ಎದುರಿಸಿದರೂ ಖುರ್‌ಆನಿನ ಶ್ರೇಷ್ಠತೆಗೆ ಸಮಾನವಾದುದನ್ನು ರಚಿಸಲು ಸಮರ್ಥರಾಗಲಿಲ್ಲ.

ಖುರ್‌ಆನ್ ಅದರ ಶೈಲಿಯಲ್ಲಿಯೂ ರಚನೆಯಲ್ಲಿಯೂ ಪರಿಪೂರ್ಣವಾಗಿದ್ದಂತೆಯೇ ಅದರಲ್ಲಿ ಅಡಕವಾದ ವಿಷಯ ಸಹ ಅನುಕರಣೆಗೆ ಅಸಾಧ್ಯವಾಗಿದೆ. ಅದರಲ್ಲಿ ಬೇರೆ ಅನೇಕ ವಿಷಯಗಳ ಜೊತೆಗೆ, ಮುಂದೆ ಸಂಭವಿಸಲಿರುವ ಘಟನೆಗಳ ಕುರಿತು ಭವಿಷ್ಯವಾಣಿಗಳಿವೆ. ನೂರಾರು ವರ್ಷಗಳ ಹಿಂದೆ ಸಂಭವಿಸಿದ ಆದರೆ ಈಗ ಅವಗಣಿಸಲ್ಪಟ್ಟ ಹಲವಾರು ಸಂಭವಗಳ ವಿವರಣೆಗಳೂ ಅದರಲ್ಲಿವೆ. ಅದರಲ್ಲಿ ಪ್ರಕೃತಿಯ ನಿಯಮಗಳ ಕುರಿತೂ ಧಾರ್ಮಿಕ ಮತ್ತು ಲೌಕಿಕವಾದ ವಿವಿಧ ವಿಜ್ಞಾನಗಳ ಕುರಿತೂ ಹಲವಾರು ಸೂಚನೆಗಳಿವೆ. ಅದರಲ್ಲಿ ಅತ್ಯಂತ ಬುದ್ಧಿವಂತರಾದವರಿಗೂ, ಮಹಾ ತತ್ವಜ್ಞಾನಿಗಳಿಗೂ ನಿಷ್ಣಾತರಾದ ರಾಜಕಾರಣಿಗಳಿಗೂ ಗಳಿಸಲು ಸಾಧ್ಯವಾಗದ ಜ್ಞಾನದ ಬೃಹತ್ ಭಂಡಾರಗಳಿವೆ. ಈ ಕಾರಣಗಳಿಂದ ಪವಿತ್ರ ಖುರ್‌ಆನ್ ವಿದ್ಯಾವಂತರನ್ನೂ ಧಾರ್ಮಿಕ ವಿದ್ವಾಂಸರನ್ನೂ ಒಳಗೊಂಡಿರದ ಅಸಭ್ಯ ಸಮಾಜದಲ್ಲಿ ತನ್ನ ಜೀವಮಾನವಿಡೀ ಕಳೆದ, ತಾನು ಇತರರಂತೆ ಓರ್ವ ಮನುಷ್ಯನೆಂದು ಸದಾ ಘೋಷಿಸುತ್ತಿದ್ದ, ದೇವರ ಸಹಾಯವಿಲ್ಲದೆ ತನಗೆ ಯಾವುದೇ ಪವಾಡ ತೋರಿಸಲು ಸಾಧ್ಯವಿಲ್ಲವೆಂದು ಹೇಳುತ್ತಿದ್ದ ನಿರಕ್ಷರಕುಕ್ಷಿಯಾಗಿದ್ದ ಮನುಷ್ಯನ ಕೃತಿಯಾಗಿರಲು ಸಾಧ್ಯವಿಲ್ಲ. ಆಕಾಶ ಭೂಮಿಗಳ ಸಂಗತಿಯನ್ನೆಲ್ಲಾ ತಿಳಿದಿರುವ ದೇವರೇ ಖುರ್‌ಆನಿನ ಉತ್ಪತ್ತಿ ಸ್ಥಾನವಾಗಿರಲು ಸಾಧ್ಯ.

ಖುರ್‌ಆನಿನ ದೈವಿಕ ಮೂಲದ ಕುರಿತು ಇನ್ನೊಂದು ಆಧಾರ ನಮ್ಮ ಬಳಿಯಿದೆ. ಅದು ಅವತೀರ್ಣಗೊಳಿಸಲ್ಪಟ್ಟು ಎಷ್ಟೋ ಶತಮಾನಗಳು ಕಳೆದಿದ್ದರೂ ಅದು ಇಂದಿನ ತನಕ ಕ್ಷತಿಗೊಳ್ಳದೆ ಬಾಕಿ ಉಳಿದಿದೆ. ದೇವರಿಚ್ಛಿಸಿದರೆ ಅದೇ ರೀತಿ ಪ್ರಪಂಚದ ಅವಸಾನದವರೆಗೆ ಬಾಕಿಯಾಗುವುದು. ಮುಸ್ಲಿಮರು ಪ್ರಪಂಚದಾದ್ಯಂತ ಇದನ್ನು ಪಠಿಸುತ್ತಾ ಇದ್ದರೂ ಯಾವನೇ ವಿಶ್ವಾಸಿಗೆ ಅದು ಬೇಸರ ಉಂಟುಮಾಡುವುದಿಲ್ಲ. ಪುನಃ ಪುನಃ ಓದುವುದರಿಂದ ಅದು ದಿನೇ ದಿನೇ ಹೆಚ್ಚು ಪ್ರಿಯವಾಗುತ್ತದೆ. ಅದನ್ನು ಓದುವವರಲ್ಲಿಯೂ ಕೇಳುವವರಲ್ಲಿಯೂ ಆದರವನ್ನೂ ಆಶ್ಚರ್ಯವನ್ನೂ ಅದು ಉಂಟುಮಾಡುತ್ತದೆ. ಅದನ್ನು ಕಂಠಪಾಠ ಮಾಡಲು ಸುಲಭವಾದ ಕಾರಣ ಧಾರ್ಮಿಕ ಶ್ರದ್ಧೆ ಕಮ್ಮಿಯಾಗಿರುವ ಈ ಕಾಲದಲ್ಲಿಯೂ ಸಾವಿರಾರು ಜನರು ಅದನ್ನು ಬಾಯಿಪಾಠ ಮಾಡಿರುವರು. ಯುರೋಪಿನ ದೇಶಗಳಲ್ಲೆಲ್ಲಾ ಒಟ್ಟಿಗೆ ಸುವಾರ್ತೆಗಳನ್ನು ಬಾಯಿಪಾಠ ಮಾಡಿದ ಜನರಿಗಿಂತ ಹೆಚ್ಚು ಸಂಖ್ಯೆಯ ಜನರು ಬರೇ ಈಜಿಪ್ಟ್ ದೇಶದಲ್ಲಿ ಖುರ್‌ಆನ್ ಬಾಯಿಪಾಠ ಮಾಡಿರುವರು.

ಶಕ್ತಿ ಪ್ರಯೋಗವಾಗಲೀ, ಶಕ್ತಿಯುತವಾದ ಮತಾಂತರ ಪ್ರವರ್ತನೆಗಳಾಗಲೀ ಇಸ್ಲಾಮಿನ ಕ್ಷಿಪ್ರ ವಿಸ್ತರಣೆಗೆ ಕಾರಣವಾಗಿಲ್ಲ. ಮುಸ್ಲಿಮರು ಯುದ್ಧದಲ್ಲಿ ಕೀಳಡಗಿಸಿದ ಜನರಿಗೆ ಸ್ವೀಕರಿಸಲು ಅಥವಾ ನಿರಾಕರಿಸಲು ಅನುಮತಿಯೊಂದಿಗಿತ್ತ ಗ್ರಂಥವು ದೈವಿಕವೂ ಸತ್ಯ ಸುಂದರವೂ, ಜಗತ್ತಿನಲ್ಲಿ ತತ್ತರಿಸುವವರಿಗೆ ಮುಹಮ್ಮದ್ ಪೈಗಂಬರ್ ತೋರಿಸಿದ ಅತ್ಯುತ್ಕೃಷ್ಟ ಪವಾಡವೂ ಆಗಿದ್ದುದರಿಂದಲೇ ಇದು ಸಾಧ್ಯವಾಯಿತು.

ದೇವರ ಏಕತೆ ಮತ್ತು ಮುಹಮ್ಮದರ ದೌತ್ಯವೆಂಬ ಮೊದಲೇ ವಿವರಿಸಿದ ಎರಡು ಪ್ರಧಾನ ಧಾರ್ಮಿಕ ತತ್ವಗಳ ಹೊರತಾಗಿರುವ, ಮುಸ್ಲಿಮರೆಲ್ಲರೂ ಗಾಢವಾಗಿ ಚಿಂತಿಸಿ ತರ್ಕಿಸಿ ಅನುಸರಿಸಿಕೊಂಡು ನೂರಾರು ವರ್ಷಗಳಿಂದ ಬಂದಿರುವ ಇತರ ತತ್ವಗಳು ಆಧುನಿಕ ವಿಜ್ಞಾನವನ್ನು ತಡೆಯುವಂತಹುಗಳೋ ತತ್ವಜ್ಞಾನ ಸಂಬಂಧವಾದ ನಿಯಮಗಳಿಗೆ ವಿರುದ್ಧವಾದುವುಗಳೋ ಅಲ್ಲ. ಸೃಷ್ಟಿಯ ಕುರಿತು ಖುರ್‌ಆನ್ ವಿವರಿಸುತ್ತಾ ಜಗತ್ತಿನ ಸೃಷ್ಟಿಯ ಹಿಂದಿನ ಕಾಲ ಮತ್ತು ಸೃಷ್ಟಿಯ ಕಾಲದ ಕುರಿತು, ಈ ರೀತಿ ಸೂಚಿಸುತ್ತದೆ:

"ಆಕಾಶ ಭೂಮಿಗಳು ಬಂಧಿಸಲ್ಪಟ್ಟಿದ್ದುವು; ನಾವು ಅವುಗಳನ್ನು ಮುಕ್ತಗೊಳಿಸಿದೆವು ಮತ್ತು ನಾವು ನೀರಿನಿಂದ ಎಲ್ಲಾ ವಸ್ತುಗಳನ್ನು ಜೀವಗೊಳಿಸಿದೆವು." (ಖುರ್‌ಆನ್ 21:31)

ಖುರ್‌ಆನ್ ಮನುಷ್ಯನ ಮನಸ್ಸಿನ ಶಕ್ತಿಯ ಮೇಲೆ ಯಾವುದೇ ತಡೆಯನ್ನುಂಟುಮಾಡದೆ ಅದು ಇಚ್ಛಿಸುವ ದಾರಿಯಲ್ಲಿ ಸಾಗಲು ಬಿಡುತ್ತದೆ. ಪ್ರಕೃತಿ ನಿಯಮಗಳ ಕುರಿತು ಅವು ದೇವರ ನಿಯಮಗಳೆಂದೂ ಅವು ಸೃಷ್ಟಿಯನ್ನು ನಿಯಂತ್ರಿಸುತ್ತವೆಯೆಂದೂ ಅವು ಬದಲಾಗಲಾರವೆಂದೂ ಖುರ್‌ಆನ್ ಹೇಳುತ್ತದೆ.

ಇತರ ಮತಗಳು ಅದರ ಅನುಯಾಯಿಗಳಿಗೆ ಅನುಸರಿಸಲು ಕಷ್ಟಸಾಧ್ಯವಾದ ಸುಲಭಗ್ರಾಹ್ಯವಲ್ಲದ ಸಿದ್ಧಾಂತಗಳನ್ನು ನಿರ್ಬಂಧಗೊಳಿಸುತ್ತಿರುವಾಗ ಇಸ್ಲಾಮ್ ಧರ್ಮವು ಅತ್ಯಂತ ಸುಲಭವೂ ಸ್ಫಟಿಕದಂತೆ ನಿರ್ಮಲವೂ ಸರಳವೂ ಆಗಿದೆ. ಧಾರ್ಮಿಕ ತತ್ವಗಳ ಅನಿಶ್ಚಿತತೆಯಿಂದಾಗಿ ಧಾರ್ಮಿಕ ಸಂಧಿಗ್ಧಾವಸ್ಥೆಯಲ್ಲಿದ್ದ ಜನರು ಇಸ್ಲಾಮಿನ ದಿಗ್ವಿಜಯಕ್ಕೆ ಪಾತ್ರರಾದಾಗ ಇಸ್ಲಾಮಿನ ಮೇಲಿನ ಗುಣದಿಂದಾಗಿ ಅದು ಅಂತಹ ಜನರಲ್ಲಿ ಸ್ವೀಕೃತಿಯನ್ನು ಪಡೆಯಿತು. ಇದೇ ಕಾರಣದಿಂದ ಆಸ್ಯಾ ಮತ್ತು ಆಫ್ರಿಕದ ಹೆಚ್ಚು ಪರಿಷ್ಕೃತಗೊಳ್ಳದ ಜನಾಂಗಗಳಿಗೆ ಯಾವುದೇ ದೀರ್ಘ ವಿವರಣೆಯ ಅಥವಾ ತೊಡಕಿನ ಪ್ರವಚನದ ಆವಶ್ಯವಿಲ್ಲದೆ ಅವರ ಆತ್ಮಗಳನ್ನು ತಲಪಲು ಇಸ್ಲಾಮ್ ಸಮರ್ಥವಾದ ಕಾರಣ ನಿರಂತರವಾಗಿ ಅದು ಸ್ವೀಕೃತವಾಗುತ್ತಾ ಹೋಗುತ್ತಿದೆ.

— ಅನುವಾದಕ: M. U. ರಶೀದ್.


## ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಗ್ರಂಥಕರ್ತ: ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್

ಅನುವಾದಕ: M. P. ಇಬ್ರಾಹಿಂ

ಪುಟ: 60 ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: The Editor, YUGARASHMI Kannada Quarterly,
23/1008, Ansari Road, Bunder, Mangalore-575001.

# ಡಾ| ಕೋವೂರರ ಮತದ್ವೇಷ - ವಿಜ್ಞಾನದ ನಿರಾಕರಣೆ

ಸೌಜನ್ಯ: "ಸತ್ಯದೂತನ್" ಕಣ್ಣಾನೂರು.

ಕಣ್ಣಾನೂರಿನ ಪತ್ರಿಕಾಗೋಷ್ಠಿಯಲ್ಲಿ ಡಾ| ಎ.ಟಿ. ಕೋವೂರರಿಗೆ ಹಲವಾರು ಪ್ರಶ್ನೆಗಳನ್ನು ಎದುರಿಸಬೇಕಾಯಿತು. ಸಾಯಿಬಾಬರಿಗೆ ಸಂಬಂಧಿಸಿದ ಪ್ರಶ್ನೆಗಳೊಂದಿಗೆ ಇದರ ಪ್ರಾರಂಭವಾಯಿತು. ಸಾಯಿಬಾಬರಲ್ಲಿ ನನಗೆ ನಂಬಿಕೆ ಇಲ್ಲವೆಂದು ನಾವು ಪ್ರಾರಂಭದಲ್ಲೇ ವ್ಯಕ್ತಪಡಿಸಿದೆನು. ಮಿಥ್ಯಾ ದೈವಗಳಲ್ಲಿ (Pseudo gods) ನನಗೆ ವಿಶ್ವಾಸವಿಲ್ಲವೆಂದು ಹೇಳಿದಾಗ ಕೆಲವು ಪತ್ರಕರ್ತರಿಂದ ಒಂದು ಪ್ರಶ್ನೆ:

"ಮತ್ತೆ ಸತ್ಯದೈವ ಯಾವುದು?''

"ಹೌದು, ಸತ್ಯದೈವ ಉಂಟೆಂದು ನನ್ನ ವಿಶ್ವಾಸ''

"ಹಾಗಾದರೆ ಆ ದೈವವನ್ನೊಮ್ಮೆ ತೋರಿಸಿ ಕೊಡಬಹುದೇ?''

ನಾನು—ಕಾಣದ ಯಾವುದನ್ನೇ ಸಂಬಲಾಗುವುದಿಲ್ಲವೆಂಬುದು ಕೀಳ್ಮಟ್ಟದ ವಾದವಾಗಿದೆ. ಗೋಚರವಾಗದ ಹಲವಾರು ಸಂಗತಿಗಳನ್ನು ನಂಬಲು ನಾವು ನಿರ್ಬಂಧಿತರಾಗಿದ್ದೇವೆ. ಕಾಣದ ಯಾವುದನ್ನೇ ನಂಬಲಿಕ್ಕಿಲ್ಲವೆಂದು ಡಾ| ಕೋವೂರ್ ಹೇಳುವರೋ?

ಮನುಷ್ಯನು ಚಂದ್ರನಲ್ಲಿ ಇಳಿದುದನ್ನು ಕಂಡ ಕಾರಣದಿಂದಲ್ಲ ತಾನು ಅದನ್ನು ನಂಬುವುದೆಂದೂ, ರುಜುವಾತುಪಡಿಸಿ ತೋರಿಸುವುದನ್ನೇ ನಂಬಲು ಸಾಧ್ಯವೆಂದೂ ಡಾ| ಕೋವೂರ್ ಹೇಳಿದರು.

ನಾನು—ರುಜುವಾತುಪಡಿಸಲು ಅಸಾಧ್ಯವಾದ ಹಲವು ಸಂಗತಿಗಳನ್ನು ಅತ್ಯಂತ ನಂಬಿಗಸ್ಥರಾದವರು ಹೇಳುವುದರ ಆಧಾರದಿಂದ ನಂಬಬೇಕಾಗುವುದಿಲ್ಲವೇ?

ಡಾ| ಕೋವೂರ್—ಅದು ಹೇಗೆ?

ನಾನು—ನನ್ನ ತಂದೆ ನನ್ನ ತಂದೆಯೇ ಆಗಿದ್ದಾರೆ ಎಂಬುದನ್ನು ನಾನು ದೃಢವಾಗಿ ನಂಬುವುದು ನನ್ನ ತಾಯಿ ಹೇಳಿದುದರ ಆಧಾರದಿಂದ ಮಾತ್ರವಾಗಿದೆ. ನನಗೆ ಈ ವಿಶ್ವಾಸವನ್ನು ಬೇರೆ ಯಾವುದೇ ರೀತಿಯಲ್ಲಿ ರುಜುಪಡಿಸಿ ತೋರಿಸಲು ಆಗದು. ನಾನು ಅದನ್ನು ಕಂಡದ್ದಿಲ್ಲ. ಆ ಸತ್ಯವನ್ನು ಆವರ್ತಿಸಿ ತೋರಿಸಲು ಅಸಾಧ್ಯ. ಆದರೂ ಅದು ಸತ್ಯವಾಗಿದೆ. ಒಮ್ಮೆಯೂ ಸಂಶಯಿಸಲಾಗದ ಒಂದು ಪರಮ ಸತ್ಯವೆಂದು ನಾನು ಅದನ್ನು ನಂಬುತ್ತೇನೆ. ನನ್ನ ಜೀವನಯಥಾರ್ಥವೆಲ್ಲಾ ಈ ಸತ್ಯವನ್ನು ಹೊಂದಿಕೊಂಡಿದೆ. ಡಾ| ಕೋವೂರ್ ಏನು ಹೇಳುವಿರಿ ?

ಡಾ| ಕೋವೂರ್ ಇನ್ನೊಂದು ಪ್ರಶ್ನೆಯನ್ನು ಉತ್ತರಿಸುವ ಪ್ರಯತ್ನದಲ್ಲಿದ್ದರು!

ಕ್ರೈಸ್ತರ ಕೆಲವು ಅಬದ್ಧ ವಿಶ್ವಾಸಗಳನ್ನು ಡಾ| ಕೋವೂರ್ ವಿವರಿಸಿದರು. ಆನುಷಂಗಿಕವಾಗಿ ಕನ್ಯಾ ಪ್ರಸವದ ಕುರಿತು ಹೇಳಿದಾಗ, ಅದು ಸಂಭಾವ್ಯವೋ ಎಂದು ನಾನು ಕೇಳಿದೆನು.

ಡಾ| ಕೋವೂರ್ - ಕನ್ಯಾಪ್ರಸವ (Partheno Genesis) ಅಸಂಭವನೀಯ.

ನಾನು—ಪುರುಷ ಬೀಜದ ಸ್ಪರ್ಶವಿಲ್ಲದೆ ಕನ್ಯೆ ಹೆರುವುದು ಸಂಭಾವ್ಯವೆಂದು ವಿಜ್ಞಾನಿಗಳು ಸಮ್ಮತಿಸುವರಲ್ಲವೇ?

ನನ್ನ ಪ್ರಶ್ನೆಗೆ ಆಧಾರವಾಗಿದ್ದ "ಮೂಢವಿಶ್ವಾಸ" ವನ್ನು ಬಯಲು ಮಾಡಲೆಂಬಂತೆ ಕೆಲವು ಪತ್ರಿಕಾ ಪ್ರತಿನಿಧಿಗಳು ನನಗೆ ಉತ್ತರಕೊಡಲು ತಯಾರಾದಾಗ ನನಗೆ ಡಾ| ಕೋವೂರ್‌ರವರಿಂದ ಉತ್ತರಸಿಗಬೇಕಾಗಿದೆಯೆಂದು ನಾನು ಹೇಳಿದೆನು. "ಡಾ| ಕೋವೂರ್ ಓರ್ವ ವಿಜ್ಞಾನಿಯಾಗಿದ್ದಾರೆ. ಅವರು ಉತ್ತರ ಕೊಡಲಿ!''

ಡಾ| ಕೋವೂರ್-ಮನುಷ್ಯರನ್ನು ಹೊರತು ಸಸ್ತನ ಜೀವಿಗಳಲ್ಲಿ (Mammals) ಪುರುಷ ಬೀಜದ ಸಂಕಲನವಿಲ್ಲದೆ ಪ್ರಸವಿಸುವುದು ಸಾಧ್ಯವಾದರೂ ಮನುಷ್ಯ ಜೀವಿಗಳಲ್ಲಿ ಅದು ಒಮ್ಮೆಯೂ ಸಾಧ್ಯವಲ್ಲ. (It is not possible in human beings) ಎಂದಾಗಿದೆ ಅವರು ಹೇಳಿದ ವಾಕ್ಯ).

ನಾನು—ಮನುಷ್ಯರಲ್ಲಿ ಸಹ ಅದು ಸಂಭವನೀಯವೆಂದು ಪ್ರಸಿದ್ಧ ಜೀವಶಾಸ್ತ್ರಜ್ಞೆಯೂ ಡಾ| ಜೆ. ಬಿ. ಎಸ್. ಹಾಲ್ಡೆಯಿಯುವರ ಪತ್ನಿಯೂ ಆಗಿರುವ ಡಾ|

ಹೆಲೆನ್‌ಸ್ಪರ್ವೆ ಸಾಕ್ಷ್ಯಪಡಿಸಿದ್ದಾರೆ. 16 ಲಕ್ಷ ಸ್ತ್ರೀಯರಲ್ಲಿ ಒಬ್ಬಾಕೆ ಹೀಗೆ ಪುರುಷ ಸಂಪರ್ಕವಿಲ್ಲದೆ ಪ್ರಸವಿಸಲು ಎಡೆಯಿದೆಯೆಂದು ಅವರು ಸಿದ್ಧಾಂತಿಸಿದ್ದಾರೆ. ಕನ್ಯಾ ಪ್ರಸವವೆಂದೇ ಖಂಡಿತವಾಗಿ ಸ್ಪಷ್ಟಪಡಿಸಲು ಇಂದು ಸಾಧ್ಯವಿದೆಯೆಂದು ಡಾ। ಸ್ಪರ್ವೆ ಪ್ರಖ್ಯಾಪಿಸಿದ್ದಾರೆ. ಅದಕ್ಕೆ ಸಂಬಂಧಿಸಿದ ಪತ್ರಿಕಾ ವರದಿಗಳ ಕಟಿಂಗ್‌ಗಳು ನನ್ನ ಕೈಯಲ್ಲಿ ಈ ಸಂದರ್ಭದಲ್ಲಿ ಇಲ್ಲ. ನಾನದನ್ನು ನಂತರ ಡಾಕ್ಟರರಿಗೆ ಸಮರ್ಪಿಸುವೆನು.

ಇವಿಷ್ಟು ಪತ್ರಿಕಾಗೋಷ್ಠಿಯಲ್ಲಿ ಡಾ। ಕೋವೂರ್ ಮತ್ತು ನನಗೆ ನಡೆದ ಸಂಭಾಷಣೆ. ಸೌಹಾರ್ದ ವಾತಾವರಣದಲ್ಲಿ ಮಾತುಕತೆ ನಡೆದಿತ್ತು. ಹಾರ್ದಿಕವಾದ ರೀತಿಯಲ್ಲಿ ಅವರೊಡನೆ ಹಸ್ತಲಾಘವ ಮಾಡಿ ಪತ್ರಕರ್ತರು ಬೀಳ್ಕೊಂಡರು.

ಪುರುಷ ಸಹಾಯವಿಲ್ಲದೆ, ಪುರುಷನ ಬೀಜಾಣುವಿನ ಸ್ಪರ್ಶವೇ ಆಗದೆ ಸ್ತ್ರೀಯರು ಹೆರಲು ಸಾಧ್ಯವೇ ಎಂಬುದು ಜೀವಶಾಸ್ತ್ರಜ್ಞರ ಗಹನವಾದ ಅಧ್ಯಯನಕ್ಕೆ ಗುರಿಯಾದ ಒಂದು ಪ್ರಶ್ನೆಯಾಗಿದೆ. ಅಂತಹ ಪ್ರಸವ ಸಾಧ್ಯವೂ ಸಂಭವನೀಯವೂ ಆಗಿದೆಯೆಂದು ಜೀವಶಾಸ್ತ್ರಜ್ಞರು ಘೋಷಿಸಿದ್ದಾರೆ. ಲೋಕ ಪ್ರಸಿದ್ಧ ವಿಜ್ಞಾನಿಯಾದ ಡಾ। ಜೆ. ಬಿ. ಎಸ್. ಹಾಲ್ಡೆಯಿಯ ಪತ್ನಿ ಡಾ। ಹೆಲೆನ್ ಸ್ಪರ್ವೆ ಈ ರಂಗದಲ್ಲಿ ವಿಶೇಷ ಸಂಶೋಧನೆ ನಡೆಸಿ ಇಂಗ್ಲೆಂಡಿನ ಸುಪ್ರಸಿದ್ಧ ವೈದ್ಯಶಾಸ್ತ್ರ ಮಾಸಿಕೆ 'ದಿ ಲಾನ್ಸೆಟ್' (The Lancet)ನಲ್ಲಿ ಆ ಸಂಶೋಧನೆಯ ಫಲಿತಾಂಶವನ್ನು ಪ್ರಕಟಿಸಿರುವರು. ಇದಕ್ಕೆ ಸಂಬಂಧಿಸಿದ ವರದಿಗಳನ್ನು ವಾರ್ತಾ ಏಜೆನ್ಸಿಗಳು ಲೋಕವ್ಯಾಪಕವಾಗಿ ಪ್ರಚಾರಪಡಿಸಿದ್ದಾರೆ. ಕೇರಳದ ಪತ್ರಿಕೆಗಳಲ್ಲಿಯೂ ಆ ವರದಿ ಬಂದಿರುತ್ತದೆ. 'ಮಾತೃಭೂಮಿ'ಯಲ್ಲಿ ಪ್ರಕಟಗೊಂಡ ವರದಿಯನ್ನು ಈ ಕೆಳಗೆ ಉದ್ಧರಿಸಲಾಗಿದೆ:

"ಪುರುಷನ ಸ್ಪರ್ಶವಿಲ್ಲದೆಯೇ ಕನ್ಯೆಯರಲ್ಲಿ ಗರ್ಭೋತ್ಪಾದನೆ ಸಾಧ್ಯವೆಂದು ವೈಜ್ಞಾನಿಕ ಸಂಶೋಧನೆಗಳು ಸಾಕ್ಷ್ಯಪಡಿಸಿವೆ. ಅಪ್ಪನಿಲ್ಲದೆ ಜನ್ಮವೆತ್ತ ಮಗುವಿನ ನಿಜಾಂಶವನ್ನು ಈ ರೀತಿಯಲ್ಲಿ ರುಜುಪಡಿಸಲು ಸಾಧ್ಯವಿದೆ. ಪುರುಷ ಬೀಜದ ಸಂಕಲನವಿಲ್ಲದೆ ಗರ್ಭೋತ್ಪಾದನೆ ಸಾಧ್ಯವೋ ಎಂಬುದರ ಕುರಿತು ವಾದ ವಿವಾದಗಳು ಪ್ರಾರಂಭವಾಗಿ ತುಂಬಾ ಕಾಲವಾಯಿತು. ಇದು ಕೆಲವು ಧಾರ್ಮಿಕ ಪ್ರಶ್ನೆಗಳನ್ನೊಳಗೊಂಡಿರುವ ಒಂದು ವಿಷಯವಾಗಿದೆ. ವೈದ್ಯರಂಗದ ಡಾ। ಹೆಲನ್ ಸ್ಪರ್ವೆ ಕನ್ಯಾಪ್ರಸವ ಸಾಧ್ಯವೆಂದು ಹೇಳುತ್ತಾರೆ. ಅವರು ಓರ್ವ ಲೆಕ್ಚರರ್ ಹಾಗೂ ಪ್ರೊಫೆಸರ್ ಜೆ. ಬಿ. ಎಸ್. ಹಾಲ್ಡೆಯಿಯವರ ಪತ್ನಿಯಾಗಿದ್ದಾರೆ. ಮನುಷ್ಯರ ಸಹಿತ ಸಸ್ತನಿ ಜೀವಿಗಳ ಗರ್ಭೋತ್ಪಾದನೆ ಸಾಧ್ಯತೆಯ ಕುರಿತು ಅವರು ಅಧ್ಯಯನ ಮಾಡಿರುವರು.

"ಮನುಷ್ಯರಲ್ಲಿ ಈ ರೀತಿಯ ಸಂಭವ ವಿರಳವಾಗಿರಬಹುದು. ಅಥವಾ ಪತಿಯರೊಂದಿಗೆ ಜೀವಿಸುವ ಸ್ತ್ರೀಯರಲ್ಲಿ ಹೀಗೆ ಉಂಟಾದರೂ ಸಹ ಕಂಡುಹಿಡಿಯಲು ಕಷ್ಟಸಾಧ್ಯ. ಈ ರೀತಿಯಲ್ಲಿ ಉಂಟಾದ ಮಕ್ಕಳು ಹೆಣ್ಣಾಗುವ ಸಾಧ್ಯತೆ ಹೆಚ್ಚು.

''ಕನ್ಯಾ ಪ್ರಸವ ಹೌದೋ ಎಂದು ತಿಳಿಯುವರೆ ಸುಲಭ ಉಪಾಯ ರಕ್ತ ಪರೀಕ್ಷೆಯಾಗಿದೆ. ಕಾರಣವೇನೆಂದರೆ, ತಾಯಿಯ ರಕ್ತವಮಾತ್ರವೇ ಆ ಮಗುವಿನಲ್ಲಿರುವುದು." (ಮಾತೃಭೂಮಿ, 9-11-1955).

ಇತ್ತೀಚೆಗಿನ ಕಾಲದಲ್ಲಿ ಇತರ ಪರೀಕ್ಷೆಗಳ ಮುಖಾಂತರ ಸಹ ಈ ಸತ್ಯವು ವ್ಯಕ್ತವಾಗಿ ಕನ್ಯಾಪ್ರಸವ ಒಂದು ಯಥಾರ್ಥವೆಂದು ಅಂಗೀಕರಿಸಲ್ಪಡಲು ತೊಡಗಿದೆ.

ಪ್ರಸಿದ್ಧ ಜೀವಶಾಸ್ತ್ರಜ್ಞನೂ ಕೆನಡಾದ ಮಾಜಿ ವಿಸಿಟಿಂಗ್ ಬಯೋಲಜಿ ಪ್ರೊಫೆಸರನೂ ಆಗಿದ್ದ ಡಾ। ಪಿ. ಕೆ. ಮೇನನ್ ಪಾಲ್ಘಾಟ್ ವಿಕ್ಟೋರಿಯಾ ಕಾಲೇಜಿನ ಹಳೆಯ ವಿದ್ಯಾರ್ಥಿ ಸಂಘದ ವತಿಯಿಂದ ಏರ್ಪಡಿಸಲಾದ ರಜತೋತ್ಸವದ ಸ್ಮಾರಕ ಭಾಷಣದಲ್ಲಿ ಈ ಸಂಗತಿಯನ್ನು ವ್ಯಕ್ತಪಡಿಸಿದ್ದರು. ''ಪುರುಷ ಬೀಜವಿಲ್ಲದೆ ಸಹ ಹೆರಬಹುದು'' ಎಂಬ ಶಿರೋನಾಮೆಯಲ್ಲಿ 'ಮಲೆಯಾಳ ಮನೋರಮ' ದಿನಪತ್ರಿಕೆಯಲ್ಲಿ ಇದರ ಕುರಿತು ವಾರ್ತೆ ಇತ್ತು.

"ಪುರುಷನ ಸಹಾಯವಿಲ್ಲದೆ, ಪುರುಷ ಬೀಜಾಣುವಿನ ಸ್ಪರ್ಶನವಾದರೂ ಇಲ್ಲದೆ ಸ್ತ್ರೀಯರಿಗೆ ಪ್ರಸವಿಸಲು ಸಾಧ್ಯವಿದೆಯೇ? ಸಾಧ್ಯವಿದೆಯೆಂದು ಪ್ರಸಿದ್ಧ ಜೀವಶಾಸ್ತ್ರಜ್ಞನೂ ಕೆನಡಾದ ಮಾಜಿ ವಿಸಿಟಿಂಗ್ ಬಯೋಲಜಿ ಪ್ರೊಫೆಸರನೂ ಆಗಿರುವ ಪಿ. ಕೆ. ಮೇನನ್ ಅವರ ಅಭಿಪ್ರಾಯ!

"ಪುರುಷ ಬೀಜದ ಹೊರತಾಗಿ ಸ್ತ್ರೀಯರಿಗೆ ಅವರ ಸ್ವಂತ ಬೀಜದಿಂದಲೇ ಪ್ರಸವಿಸಲು ಸಾಧ್ಯವೆಂದು ಮೇನನ್ ಮುಂದುವರಿಸುತ್ತಾ ಹೇಳಿದರು.

"ಇದಕ್ಕೆ ಸಂಬಂಧಿಸಿದ ಹಲವು ಪರೀಕ್ಷಣೆಗಳು ಜಯಗಳಿಸಿವೆ. ಓರ್ವ ಸ್ತ್ರೀಯ ಬೀಜವನ್ನು ತೆಗೆದು ಆದರ ನ್ಯೂಕ್ಲಿಯಸನ್ನು ಪ್ರತ್ಯೇಕಿಸಿ ಅದೇ ಸ್ತ್ರೀಯ ಸೆಲ್ಲಿನಲ್ಲಿ ಸಂಯೋಜನೆಗೊಳಿಸಿ ಒಂದು ಪ್ರತ್ಯೇಕ ಸಜ್ಜೀಕರಣದಲ್ಲಿ ಇಡಿರಿ. ಆ ಸೆಲ್ ಸ್ವಯಂ ಬೆಳೆಯುವುದು. ನಂತರ ಅದನ್ನು ಅದೇ ಸ್ತ್ರೀಯ ಗರ್ಭದಲ್ಲಿಡಿರಿ. 9 ಮಾಸಗಳ ಕಳೆದ ನಂತರ ಪ್ರಸವ ಉಂಟಾಗುವುದು'' (ಮಲೆಯಾಳ ಮನೋರಮ 21-7-1972).

ಕನ್ಯಾಪ್ರಸವ ಬಹಳ ಅಪೂರ್ವವಾಗಿರಬಹುದು. ಹಾಗೆ ಸಂಭವಿಸಿದರೂ ಸಹ ಅದನ್ನು ಕಂಡುಹಿಡಿಯಲು ಸುಲಭವಲ್ಲ. ವಿವಾಹಿತಳಾದ ಓರ್ವ ಯುವತಿ, ಪುರುಷ ಸ್ಪರ್ಶನವಾಗುವುದಕ್ಕೆ ಮೊದಲು ಕನ್ಯೆಯೆಂಬ ರೀತಿಯಲ್ಲೇ ಗರ್ಭಿಣಿಯಾದರೆ ಅದು ಸಾಧಾರಣ ರೀತಿಯ ಗರ್ಭವೆಂದು ಎಣಿಸಲ್ಪಡುವ ಕಾರಣ ವಿವಾದಕ್ಕೆ ಎಡೆಯಿಲ್ಲ. ವಿವಾಹಿತಳಲ್ಲದ ಓರ್ವ ಕನ್ಯೆ ಈ ರೀತಿಯಲ್ಲಿ ಗರ್ಭವತಿಯಾದರೆ ಅವಳು ತನ್ನ ಚಾರಿತ್ರಶುದ್ಧಿಯ ಕುರಿತು ಎಷ್ಟು ಆಣೆಹಾಕಿ ಹೇಳಿದರೂ ಅದನ್ನು ಯಾರೂ ನಂಬಲಿಕ್ಕಿಲ್ಲ. ಅವಳು ದಾರಿತಪ್ಪಿದವಳೆಂದು ಗಣಿಸಲ್ಪಡುವಳು. ಅವಳು ತರ್ಕಿಸಿ ಹೇಳಿದರೆ ಸಮಾಜವು ಅವಳನ್ನು ಹುಚ್ಚಿಯೆಂದು ಹೇಳಬಹುದು! ಇಂತಹ ಸಂಭವಗಳನ್ನು ಸಾಧ್ಯವಾದಷ್ಟು ಮುಚ್ಚಿಡುವುದಲ್ಲದೆ ವಿಚಾರಣೆಗೆ ಗುರಿಪಡಿಸಲು ಯಾರೂ ತಯಾರಾಗಲಾರರು. ಹೀಗಿರುವಾಗ ನಿಜಾಂಶವನ್ನು ತಿಳಿಯಲು ಹೇಗೆ ಸಾಧ್ಯವೆಂಬುದು ಜಟಿಲ ಪ್ರಶ್ನೆ. ಅದರ ವಿಚಾರವಾಗಿ ಡಾ। ಸ್ಪರ್ವೆ ಹೇಳುವುದನ್ನು ನೋಡಿರಿ:

"ಅವಿವಾಹಿತರಾದ ತಾಯಿಯಂದಿರಲ್ಲಿ ಕೆಲವರು ನಿಜ ಹೇಳುವುದಾಗಿರಬಹುದು. ಅವರ ಹೇಳಿಕೆ ವೈದ್ಯಶಾಸ್ತ್ರ ಗ್ರಂಥಗಳಲ್ಲಿ ತಿರಸ್ಕರಿಸಲ್ಪಟ್ಟಿತು; ಅಥವಾ ಒಂದು ಅದ್ಭುತ ಸಂಭವವೆಂದು ಸಮಕಾಲೀನರಿಂದ ಚಿತ್ರೀಕರಿಸಲ್ಪಟ್ಟಿತು. ಕನ್ಯಾಪ್ರಸವ ಹೌದೋ ಅಲ್ಲವೋ ಎಂದು ಸಂಶಯಾತೀತವಾಗಿ ಇಂದು ರುಜುವಾತುಗೊಳಿಸಲು ಸಾಧ್ಯವಾಗಿರುವುದರಿಂದ ಈ ರೀತಿಯಲ್ಲಿ ಹೆತ್ತ ಕನ್ಯೆಯರು ತಮ್ಮ ನೆಲೆಯನ್ನು ಹೆಚ್ಚಿನ ಆತ್ಮವಿಶ್ವಾಸದಿಂದ ಬಹಿರಂಗ ಪಡಿಸಲು ಇನ್ನು ಹಿಂಜರಿಯಬೇಕಾಗಿಲ್ಲ'' (Indian Express D/ 10-11-1955).

ರಕ್ತ ಪರೀಕ್ಷೆಯಿಂದ ಈ ಸಂಗತಿಯನ್ನು ರುಜುವಾತುಗೊಳಿಸಬಹುದೆಂದು ಡಾ। ಸ್ಪರ್ವೆ ಸಿದ್ಧಾಂತಿಸುತ್ತಾರೆ. ಹೀಗೆ ಹುಟ್ಟಿದ ಮಗುವಿನ ಚರ್ಮವನ್ನು ಅದರ ತಾಯಿಯ ಶರೀರದಲ್ಲಿ ಯಾವ ತೊಂದರೆಯೂ ಇಲ್ಲದೆ ಕಸಿಕಟ್ಟಲು (Skin graft) ಸಾಧ್ಯವಿದೆ. (The Lancet, London. 5-11-1955 pp 967, 968.)

ಪುರುಷ ಬೀಜಗಳನ್ನು ಉತ್ಪಾದಿಸಲು ಪ್ರಾಪ್ತವಾದ 'ಅರಿನೋಬ್ಲಾಸ್ಟೋಮ' (Arrhenoblastoma) ಎಂಬ ಹೆಸರಿನಿಂದ ಕರೆಯಲ್ಪಡುವ ಹಾಗೂ ಕೆಲವು ಬಾರಿ ಸ್ತ್ರೀಯ ಕಟಿಭಾಗದಲ್ಲಿ ಕಂಡುಬರುವ ಒಂದು ಜಾತಿಯ ಗಡ್ಡೆ (Tumor) ಈ ರೀತಿಯ ಗರ್ಭೋತ್ಪಾದನೆಗಳಿಗೆ ಕಾರಣವಾಗುತ್ತದೆಯೆಂದು ಡಾ। ವಾಲ್ಟರ್ ಟಿಮ್ಮೆ (Dr. Walter Timme) ಎಂಬ ಜೀವಶಾಸ್ತ್ರಜ್ಞನು ಹೇಳಿರುವನು. (American Medical Journal, Quoted in Commentary of the Holy Quran, Qadian Vol I). ಇಂತಹ ಗರ್ಭಗಳ ಕುರಿತು ಕೇಸುರಿಪೋರ್ಟ್‌ಗಳು ಉಲ್ಲೇಖಿತವಾಗಿವೆ. (Anomalies and Curiosities of Medicine by George M. Gould and Walter L. Payle, Sanders & Co. London).

ಜರ್ಮನಿಯ ಪ್ರೊಫೆಸರ್ ರೋಬರ್ಟ್ ಮೆಯರ್ (Prof Robert Meyer) ಯೂರೋಪಿನಲ್ಲಿ ಇಂತಹ 26 'ಅರಿನೋಬ್ಲಾಸ್ಟೋಮಾ' ಟ್ಯೂಮರ್ ಕೇಸುಗಳನ್ನು ಶೇಖರಿಸಿದ್ದಾರೆ. ಅಮೇರಿಕದಲ್ಲಿ 18 ವರ್ಷ ಪ್ರಾಯದ ಓರ್ವ ಯುವತಿಗೆ ಸಹ ಈ ರೀತಿಯಲ್ಲಿ ಕಂಡುಬಂತು.

ಯೇಸುಕ್ರಿಸ್ತರು ತಂದೆಯಿಲ್ಲದೆ ಜನಿಸಿದರೆಂದೂ, ಅವರ ತಾಯಿ ಮರಿಯಂ ಗರ್ಭಧರಿಸುವ ಮೊದಲು ಯಾವನೇ ಪುರುಷನು ಆಕೆಯನ್ನು ಸ್ಪರ್ಶಿಸಿರಲಿಲ್ಲವೆಂದೂ ಪವಿತ್ರ ಖುರ್ ಆನ್ ಪ್ರಸ್ತಾಪಿಸುತ್ತದೆ. "ಅವರೀರ್ವರೂ ಒಟ್ಟುಗೂಡುವ ಮೊದಲು'' ಮರಿಯಂ ಗರ್ಭಿಣಿಯಾದುದೆಂದು, ಜೋಸೆಫನೊಂದಿಗೆ ನಡೆದ ವಿವಾಹದ ಕುರಿತು ಬೈಬಲ್ ಹೇಳುತ್ತದೆ. ಇದು ನಿಸರ್ಗ ವಿರುದ್ಧ ಮತ್ತು ವಿವೇಚನಾರಹಿತವಾದ ಅಸಂಬದ್ಧವೆಂದು ಡಾ। ಕೋವೂರ್, ಶ್ರೀ ಎಂ.ಸಿ. ಜೋಸಫ್ ಮೊದಲಾದವರು ಇಷ್ಟುಕಾಲ ವಾದಿಸುತ್ತಾ ಬಂದಿದ್ದಾರೆ. ಆದರೆ ಈಗ ದೈವವಚನದ ಸತ್ಯತೆಯನ್ನು ವಿಜ್ಞಾನವು ರುಜುಪಡಿಸಿದೆ. ಈ ವೈಜ್ಞಾನಿಕ ಸತ್ಯವನ್ನು ಅವರು ಅಂಗೀಕರಿಸಿದರೂ ನಿರಾಕರಿಸಿದರೂ ಖುರ್‌ಆನ್ ದೈವ

# ಪ್ರುರುಷ ಸಂಪರ್ಕ ಇಲ್ಲದೇ ಕನ್ಯೆ, ಗರ್ಭಿಣಿ ಆಗುವಳೇ?

ಪುರುಷ ಸಂಪರ್ಕವಿಲ್ಲದೆ ಮಕ್ಕಳನ್ನು ಹೆತ್ತ ಮಾತೆಯರ ಬಗೆಗೆ ಮೊದ ಮೊದಲು ಜನರು ನಕ್ಕರು; ಆದರೆ ಈಗ ದೊಡ್ಡ ದೊಡ್ಡ ಡಾಕ್ಟರರು ಕನ್ಯಾಪ್ರಸವ ಸಾಧ್ಯ ಎಂದು ಹೇಳುತ್ತಾರೆ.

ಆಧುನಿಕ ಕಾಲದ ಅತ್ಯಂತ ಜಟಿಲವಾದ ಸಮಸ್ಯೆಯೊಂದು ಡಾಕ್ಟರರನ್ನೂ, ವಿಜ್ಞಾನಿಗಳನ್ನೂ ತಲೆ ತಿನ್ನ ತೊಡಗಿದೆ. ಬ್ರಿಟನ್‌ನಲ್ಲಿ ಪುರುಷರ ಸಹಾಯವಿಲ್ಲದೆ ಗೃಹಿಣಿ ಆಗಿ ತಾಯಂದಿರಾಗಿರುವ ಸ್ತ್ರೀಯರಿದ್ದಾರೆ.

ಪ್ರಾಚೀನ ಗ್ರೀಕರು, ಈರೀತಿ ಮಕ್ಕಳಾಗುವುದಕ್ಕೆ ಪಾರ್ಥೆನೋ ಜೆನಿಸಿಸ್ ಎಂದು ಕರೆದರು. ಮಹಾಭಾರತದ ಕುಂತಿಯು, ತನ್ನ ಗಂಡನ ಸಂಪರ್ಕವಿಲ್ಲದೆ, ಆರು ಜನ ಪುತ್ರರನ್ನು ಪಡೆದಳು. ಈಗ ಈ ಘಟನೆಯನ್ನು ಕನ್ಯಾ ಪ್ರಸವವೆಂದು ಕರೆಯುತ್ತಾರೆ. ಇಂಥ ಹೆರಿಗೆಗಳ ಬಗೆಗೆ ಧಾರ್ಮಿಕ ಹಾಗೂ ವೈದ್ಯಕೀಯ ಅಭಿಪ್ರಾಯವು ಪರಸ್ಪರ ವಿರೋಧವಾಗಿದೆ:

ಯೇಸುಕ್ರಿಸ್ತರು ಕನ್ಯೆಯ ಪುತ್ರನಾಗಿ ಜನಿಸಿದಂದಿನಿಂದಲೂ, ಪುರುಷ ಸಂಪರ್ಕವಿಲ್ಲದೆ ಗರ್ಭಧರಿಸಿದ ಸ್ತ್ರೀಯರು ತಮ್ಮ ಮನೆಯ ಮರ್ಯಾದೆ ಹಾಳಾಗಬಾರದೆಂದು, ತಾವು ಪುರುಷ ಸಂಪರ್ಕವನ್ನು ಹೊಂದದೆ, ಮಕ್ಕಳನ್ನು ಪಡೆದಿರುವುದಾಗಿ ಹೇಳುತ್ತ ಬಂದಿದ್ದಾರೆ.

ಅವರು ಸಾಧಿಸುತ್ತಿರುವ ಈ ವಾದವನ್ನು ಡಾಕ್ಟರರಲ್ಲಿ ಪ್ರಖ್ಯಾತರಾದವರು ಖಂಡಿಸುತ್ತ ಬಂದಿದ್ದಾರೆ. ಹಾಗಾದರೆ, ಕನ್ಯಾ ಪ್ರಸವವೆಂಬುದು ಹಾದಿ ತಪ್ಪಿದ ಹೆಂಗಸರು ಇಲ್ಲವೆ ಅವಿವಾಹಿತ ತಾಯಂದಿರು, ತಮ್ಮ ಗಂಡ ಇಲ್ಲದೆ ಕುಟುಂಬಗಳನ್ನು ಎದುರಿಸಲಿಕ್ಕಾಗದೆ ಸೃಷ್ಟಿಸಿಕೊಂಡು ಬಂದ ಕಲ್ಪಿತ ಕಥೆಯೇ?

ಇತಿಹಾಸದ ಉದ್ದಕ್ಕೂ ಪವಾಡ ಸದೃಶ ಜನನಗಳು ಆಗುತ್ತಲೇ ಬಂದಿವೆ. ಅವುಗಳ ಬಗೆಗೆ ವಿವರಣೆ ಹೇಳುವವರು ಯಾರೂ ಇಲ್ಲ. ಆ ಹೆರಿಗೆಗಳನ್ನು ಆಗಗೊಟ್ಟ ಡಾಕ್ಟರ್ ಇಲ್ಲವೆ ದಾಯಿಯರು ಕೂಡ ಅವುಗಳ ಬಗೆಗೆ ಏನನ್ನು ಹೇಳುವುದಕ್ಕೂ ಅಸಮರ್ಥರು.

ಯಾರ್ಕ್‌ಶೈರ್ ಆಸ್ಪತ್ರೆಯ ಒಬ್ಬ ಸಂನ್ಯಾಸಿನಿ ಸಿಸ್ಟರ್, ತರಬೇತಿ ಹೊಂದಿದ ತಾಯಿಯೂ ಆಗಿದ್ದಾಳೆ. ಅವಳ ಹೇಳಿಕೆ ಇದು: "ನನಗೆ ಕನ್ಯಾಪ್ರಸವ ಆದುದರ ಅನುಭವ ಆಗಿದೆ. ಅನೇಕ ತಿಂಗಳುಗಳ ವರೆಗೆ, ನಾನು ಬಹಳಷ್ಟು ಭಯಪಟ್ಟುಕೊಂಡಿದ್ದೆ. ನನಗೆ ಹೊಟ್ಟೆಯಲ್ಲಿ ಗಂಟಾಗಿದೆ ಎಂದು ಭಾವನೆ ಆಗಿದ್ದಿತು. ನಮ್ಮ ಆಸ್ಪತ್ರೆಯಲ್ಲಿದ್ದ ಡಾಕ್ಟರರೊಂದಿಗೆ ನಾನು ಸಮಾಲೋಚನೆ ಮಾಡಿದೆ. ನಾನು ಐದು ತಿಂಗಳ ಗರ್ಭಿಣಿ ಎಂದು

---

(16ನೇ ಪುಟದಿಂದ)

ವಚನವೆಂದು ಇನ್ನೊಂದಾವರ್ತಿ ಸ್ಪಷ್ಟಗೊಂಡಿದೆ. ಯೇಸು ರೋಮನ್ ಯೋಧನಾದ ಪಾಂತೇರನ ವ್ಯಭಿಚಾರ ಸಂತಾನವೆಂದು ಸಹ ಅವಿಶ್ವಾಸಿಗಳು ಹೇಳುತ್ತಾರೆ. ವಿಚಾರ ವಾದಿಗಳು ಅದನ್ನು ಅನುಮೋದಿಸಿ ಹೇಳಿದರು. ಆದರೆ ಯೇಸುಕ್ರಿಸ್ತರ ಮತ್ತು ಅವರ ಮಾತೆ ಮರಿಯಮರ ಪವಿತ್ರತೆಯನ್ನು ಪುರಾವೆ ಸಹಿತ ಸ್ಪಷ್ಟಪಡಿಸಲಾಗುವುದೆಂಬ ಖುತ್‌ಆನಿನ ಭವಿಷ್ಯನುಡಿ ಕೊನೆಗೂ ಸತ್ಯವಾಯಿತು. ಇನ್ನ್ಯಾವ ದಿವ್ಯದೃಷ್ಟಾಂತವನ್ನು ಶ್ರೀಲಂಕಾ ವಿಚಾರವಾದಿ ಸಂಘದ ಅಧ್ಯಕ್ಷರಾದ ಡಾ। ಕೋವೂರರ ಮತ್ತು ಭಾರತೀಯ ವಿಚಾರವಾದಿ ಫೆಡರೇಶನಿನ ಅಧ್ಯಕ್ಷ ಶ್ರೀ ಎಂ. ಸಿ. ಜೋಸಫರ ಮುಂದಿರಿಸಬೇಕಾಗಿದೆ?

ಅವರು ಹೇಳಿದಾಗ, ನನಗಾದ ಹೆದರಿಕೆಯನ್ನು ನೀವು ಊಹಿಸಬಹುದು. ಯಾಕೆಂದರೆ, ನಾನು ಯಾವ ಪುರುಷನೊಂದಿಗೂ ಸಂಭೋಗ ಮಾಡಿರಲಿಲ್ಲ.''

ವಿವಾಹಿತ ಸ್ತ್ರೀಯೊಬ್ಬಳು ಹೇಳಿದಳು: ''ನನ್ನ ಮಗುವಿನ ಜನನಕ್ಕೋಸ್ಕರ ಕಾಯುತ್ತ ನಾನು ನೋವಿನ ಅನೇಕ ತಿಂಗಳುಗಳನ್ನು ಕಳೆದೆ. ಆ ಕೂಸಿಗೆ ತಂದೆ ಇರಲಿಲ್ಲವೆಂಬುದು ನನಗೆ ಗೊತ್ತು. ನಾನು ಮತ್ತು ನನ್ನ ಗಂಡ ತುಂಬ ಪ್ರೀತಿಯಿಂದ ಇದ್ದೇವೆ. ಆದರೆ, ನನ್ನ ಮಗನ ಜನನದ ಸಂಗತಿ ಬಹು ಸಮಸ್ಯಾತ್ಮಕವೆಂದು ನಮ್ಮ ಭಾವನೆ.''

ಆದರೆ, ಇನ್ನೂ ಬೇರೆ ಎಷ್ಟೋ ಜನನಗಳಿವೆ. ಅವು ಕನ್ಯಾಪ್ರಸವವೆಂಬಂತೆ ತೋರುತ್ತವೆ, ಅಷ್ಟೇ. ಉದಾಹರಣೆಗೆ ಹೇಳುವುದಾದರೆ, ಪೇರು ದೇಶದ ನಾಲ್ಕು ವರ್ಷಗಳ ಹುಡುಗಿ ಲೇನಾ ಮೆಡಿನಾಳ ದೃಷ್ಟಾಂತವನ್ನು ಕೊಡಬಹುದು. ಅವಳು ಆರು ಪೌಂಡಿನ ಮಗುವಿಗೆ ಜನ್ಮಕೊಟ್ಟಳು. ಅವಳಿ–ಜವಳಿ ಗರ್ಭದಲ್ಲಿ ಸೇರಿಕೊಂಡು, ಬಹು ಕ್ವಚಿತ್ತಾದ ಪ್ರಕರಣಗಳಲ್ಲಿ ಅದು ಒಂದು.

ಮ್ಯಾಂಚೆಸ್ಟರದ ಒಬ್ಬ ವಿಧವೆಯು ತನ್ನ ಗಂಡ ತೀರಿದ ಹನ್ನೆರಡು ತಿಂಗಳೊಳಗಾಗಿ ಒಂದು ಮಗುವನ್ನು ಹೆತ್ತಳು. ಅವಳ ಗರ್ಭಧಾರಣೆಯ ಅವಧಿಯು 347 ದಿನಗಳದ್ದಾಗಿದ್ದಿತೆನ್ನುವುದನ್ನು ಕಂಡುಹಿಡಿಯಲಾಯಿತು.

ವಿಜ್ಞಾನದಲ್ಲಿ ಆಗುತ್ತಿರುವ ಅತ್ಯದ್ಭುತ ಪ್ರಗತಿಯ ಎದುರಿನಲ್ಲಿ ಶಿಶು ಜನನದ ಬಗೆಗಿನ ಮೂಲಭೂತ ನಂಬುಗೆಗಳು ಪುಡಿಗುಟ್ಟಿ ಹೋಗತೊಡಗಿವೆ. ಟೆಸ್ಟ್ ಟ್ಯೂಬ್ ಬೇಬಿ, ಕೃತಕ ಗರ್ಭಧಾರಣೆ, ಸಮೃದ್ಧಿಯ ಔಷಧಿ, ಮೊದಲಾದವುಗಳೆಲ್ಲವೂ ಇರುವುದರಿಂದ, ಮಗುವನ್ನು ಪಡೆಯಲು ಪುರುಷನು ಸ್ತ್ರೀಗೆ ಬೇಕು ಎನ್ನುವುದು ಆವಶ್ಯಕವೆನಿಸುವುದಿಲ್ಲ.

ಪ್ರಾಣಿಗಳಲ್ಲಿ ಕನ್ಯಾ ಪ್ರಸವ ಸಾಧ್ಯ ಎಂದು ವಿಜ್ಞಾನಿಗಳು ಖಚಿತವಾಗಿ ಹೇಳುತ್ತಾರೆ, ಕೆಲವೊಂದು ಸ್ಥಿತಿಯಲ್ಲಿ ಇಲಿ, ಮೊಲ, ಕೋಳಿ, ಬೆಕ್ಕು, ಮೀನು ಮೊದಲಾದವು, ಗಂಡಿನ ಸಂಪರ್ಕವಿಲ್ಲದೆ ತಮ್ಮ ಮೊಟ್ಟೆಗಳನ್ನು ಬೆಳೆಸಿಕೊಂಡು (fertilise) ಬಂದಿವೆ ಎಂಬುದು ಪ್ರಯೋಗಗಳಿಂದ ಕಂಡುಬಂದಿದೆ.

ಈಗ ಇಬ್ಬರು ಪ್ರಸಿದ್ಧ ಜೀವ ಶಾಸ್ತ್ರಜ್ಞರು ಆಕ್ಸಫರ್ಡ್ ವಿಶ್ವವಿದ್ಯಾಲಯದ ಡಾ॥ ಕ್ರಿಸ್ ಗ್ರೋಹಮ ಹಾಗೂ ವಾರ್ಸಾ ವಿಶ್ವವಿದ್ಯಾಲಯದ ಡಾ॥ ಟಿರ್ಕೋಸ್ಕಿ ಎಂಬವರು, ಹೆಣ್ಣು ಇಲಿಯು ಪುರುಷ ಇಲಿಯ ಸಂಪರ್ಕ ಇಲ್ಲದೆ ಗರ್ಭ ಧರಿಸುವಂತೆ ಮಾಡುವಲ್ಲಿ ಯಶಸ್ವಿ ಆಗಿದ್ದಾರೆ. ಇಲಿ ಹಾಗೂ ಸ್ತ್ರೀಯಲ್ಲಿಯ ಪ್ರಥಮ ಹತ್ತು ದಿನದ ಗರ್ಭಧಾರಣೆ ಒಂದೇ ರೀತಿಯಾಗಿರುತ್ತದೆ.

ಕನ್ಯಾ ಪ್ರಸವದ ಸಾಧ್ಯತೆಯನ್ನು ಅಲ್ಲಗಳೆಯುವುದು ಯಾವ ಡಾಕ್ಟರನಿಂದಲೂ ಆಗಿಲ್ಲ. ಡಾ॥ ಆರ್ಲೀ ಬ್ಯಾಲ್ಫರ್-ಲಿನ್ ಎಂಬ ವೈದ್ಯನು "ಈ ಬಗೆಗೆ ನನಗೇನೂ ಗೊತ್ತಿಲ್ಲ; ಆದರೆ, ಅದು ಗಂಭೀರ ಸಾಧ್ಯ ಎಂಬುದನ್ನು ಹೇಳಬಲ್ಲೆ'' ಎಂದಿದ್ದಾನೆ.

ಕನ್ಯಾ ಪ್ರಸವ ಸಾಧ್ಯವೆನ್ನುವುದಾದರೆ, ಜನನ ಶಾಸ್ತ್ರದ ಪ್ರಖ್ಯಾತ ಅಧಿಕಾರಿ ಡಾ॥ ಹೆಲೆನ್ ಸ್ಪರ್‌ವೇ ಹೇಳುತ್ತಾಳೆ: "ಮಗುವು ಹೆಣ್ಣು ಆಗುವುದೇ ಖಚಿತ ಮತ್ತು ಅದು, ಸಂಪೂರ್ಣವಾಗಿ ತನ್ನ ತಾಯಿಯನ್ನೇ ಹೋಲುತ್ತದೆ.''

ಈ ಕನ್ಯಾ ಪ್ರಸವ ಎನ್ನುವ ಮಾತು ಮೊದಲ ಶಿಶುವಿಗೊಂದೇ ಅನ್ವಯವಾಗುವುದಿಲ್ಲ. ಹೆರುವ ತಾಯಿಯು ಕನ್ಯೆ ಆಗಿರದೇ ಇರಬಹುದು. ಮಗುವು ಬೆಳೆಯುವಂತೆ ಸಾಮಾನ್ಯವಾಗಿ ಪುರುಷನು ಸ್ತ್ರೀಗೆ ಬೀಜವನ್ನು ಒದಗಿಸಿ ಕೊಡುತ್ತಾನೆ. ಆದರೆ, ಕನ್ಯಾ ಪ್ರಸವದಲ್ಲಿ ಸ್ತ್ರೀಯೊಳಗಿನ ಪಿಂಡವು ತನ್ನಷ್ಟಕ್ಕೆ ತಾನೇ ಬೆಳೆಯತೊಡಗುತ್ತದೆ. ಇದು ಹೇಗೆ ಎನ್ನುವುದು ಡಾಕ್ಟರರಿಗೆ ತಿಳಿದಿಲ್ಲ.

ಒಬ್ಬ ಹೆಂಗಸು ಕನ್ಯಾ ಪ್ರಸವ ಕಾಣಬಹುದೆನ್ನುವುದು ಕ್ರಿಸ್ತೀಯರ ನಂಬುಗೆಗೆ ಆಘಾತವನ್ನು ಉಂಟುಮಾಡುವ ಸಂಗತಿ. ಯಾಕೆಂದರೆ ಮನುಷ್ಯ ತಂದೆಯಿಲ್ಲದೆ ಏಸುವೊಬ್ಬನೇ ಜನ್ಮಿಸಬಹುದೆಂದು ಅವರ ಭಾವನೆ. ಆದರೆ ಕ್ಯಾಥೋಲಿಕ್ ಚರ್ಚ್, ಒಬ್ಬ ತಾಯಿಗೆ ಕನ್ಯಾ ಪ್ರಸವ ಆಗಿ, ಅವಳು ಹೆಣ್ಣು ಮಗುವೊಂದನ್ನು ಪಡೆಯುವುದು, ಯಾವ ಧಾರ್ಮಿಕ ನಂಬುಗೆಯನ್ನೂ ಕೆಡಿಸುವುದಿಲ್ಲವೆಂದು ನಂಬಿದೆ. ಹಾಗಾದರೆ ಸತ್ಯ ಎನ್ನುವುದು ಎಲ್ಲಿದೆ?

ಅನೇಕ ಡಾಕ್ಟರರು ಕನ್ಯಾಪ್ರಸವದ ಸಿದ್ಧಾಂತವನ್ನು ಒಪ್ಪುತ್ತಾರೆ; ಇತಿಹಾಸದಲ್ಲಿ ಅನೇಕ ಜನ ತಾಯಂದಿರು ತಮಗೆ ಕನ್ಯಾಪ್ರಸವ ಆಗಿರುವ ಪವಾಡವನ್ನು ಹೇಳಿಕೊಂಡು ಬಂದಿದ್ದಾರೆ.

(ಕೃಪೆ: **ಪ್ರಪಂಚ** )

# ಬಸವಾ ಪಟ್ಟಣದ ಭಾರತೀಯ ಧರ್ಮ ಸಮ್ಮೇಳನದಲ್ಲಿ

—ಎಂ. ಪಿ. ಇಬ್ರಾಹಿಂ, ಮಂಜೇಶ್ವರ.

ಶಿವಮೊಗ್ಗದಿಂದ 45 ಮೈಲು ದೂರದಲ್ಲಿರುವ ಬಸವಾ ಪಟ್ಟಣದಲ್ಲಿ ಶ್ರೀ ರಾಘವೇಂದ್ರ ಕೃಪಾಶ್ರಮದ ಮಠಾದೀಶರಾದ ಶ್ರೀ ರಾಘವೇಂದ್ರ ಸ್ವಾಮಿಯವರ ನಿರ್ದೇಶ ಪ್ರಕಾರ 'ಭಾರತೀಯ ಧರ್ಮ ಸಮ್ಮೇಳನ' ವೆಂಬ ಹೆಸರಿನಲ್ಲಿ ಒಂದು ಮಹಾ ಸಮ್ಮೇಳನವು ಜರಗಿತು. ಜನವರಿ 20ರಿಂದ 28ರ ವರೆಗೆ ಜರಗಿದ ಪ್ರಸ್ತುತ ಸಮ್ಮೇಳನದ ವೇಳೆಯಲ್ಲಿ ಇಸ್ಲಾಂ ಹಾಗೂ ಅಹ್ಮದಿಯಾ ಸಂಘಟನೆಯ ಸಂದೇಶವನ್ನು ಜನರಿಗೆ ತಲಪಿಸುವ ಸಲುವಾಗಿ ಶಿವಮೊಗ್ಗ ಅಹ್ಮದಿಯಾ ಜಮಾತಿನ ತೀರ್ಮಾನದ ಮೇರೆಗೆ ಊರ್ಜಿತವೂ ವಿಜಯಕರವೂ ಆದ ಪ್ರಚರಣ ಕಾರ್ಯವು ಏರ್ಪಡಿಸಲ್ಪಟ್ಟಿತು. ಬಸವಾ ಪಟ್ಟಣದಲ್ಲಿ ಜರಗಲಿರುವ ಧರ್ಮ ಸಮ್ಮೇಳನದ ಕುರಿತು ತಿಳಿಯುತ್ತಲೇ ಪ್ರಸ್ತುತ ಸಮ್ಮೇಳನದಲ್ಲಿ ಒಂದು ಇಸ್ಲಾಂ ಧರ್ಮ ಪ್ರಚರಣ ಕಾರ್ಯವನ್ನು ಏರ್ಪಡಿಸಬೇಕೆಂದು ಸ್ಥಳೀಯ ಅಹ್ಮದಿಯಾ ಮಿಶನರಿ ಆಗಿರುವ ಮೌಲವಿ ಫೈಜ್ ಅಹ್ಮದ್ ಸಾಹೆಬ್ ಅವರ ನೇತೃತ್ವದಲ್ಲಿ ಜಮಾಅತು ಒಂದು ತೀರ್ಮಾನವನ್ನು ಕೈಗೊಂಡಿತ್ತು.

ಬಸವಾ ಪಟ್ಟಣದಲ್ಲಿ ಜರಗಿದ ಭಾರತೀಯ ಧರ್ಮ ಸಮ್ಮೇಳನವು ಬೃಹತ್ತಾದ ಒಂದು ಸಮ್ಮೇಳನವಾಗಿದ್ದು ಇದರಲ್ಲಿ ಕರ್ನಾಟಕದ ಎಲ್ಲಾ ಜಿಲ್ಲೆಗಳಿಂದಲೂ ಮಾತ್ರವಲ್ಲ ಭಾರತದ ವಿವಿಧ ಭಾಗಗಳಿಂದಲೂ ಪ್ರತಿನಿಧಿಗಳು ಭಾಗವಹಿಸಿದ್ದರು. ಸಮ್ಮೇಳನದ ಭಾಗವಾಗಿ ಒಂದು ವಸ್ತು ಪ್ರದರ್ಶನವೂ (Exhibition) ಏರ್ಪಡಿಸಲಾಗಿತ್ತು. ಈ ಸಮ್ಮೇಳನದ ವಿವಿಧ ಉಪಯೋಗಕ್ಕಾಗಿ 450 ಎಕ್ರೆ ಜಮೀನನ್ನು ಉಪಯೋಗಿಸಿಕೊಳ್ಳಲಾಗಿದೆಯೆಂದು ತಿಳಿದುಬಂದಿದೆ. ಸಮ್ಮೇಳನದ ದಿನಗಳಲ್ಲಿ ನಿತ್ಯವೂ ವಿವಿಧ ಭಾಗಗಳಿಂದ ನೂರಾರು ಬಸ್ಸುಗಳಲ್ಲಿ ಪ್ರಯಾಣಿಕರು ಆಗಮಿಸಿದ್ದರು. ಅಲ್ಲದೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಇಲಾಖೆಯವರು ಕೂಡ ಬಸವಾ ಪಟ್ಟಣದ ಸುತ್ತುಮುತ್ತಲಿನ ವಿವಿಧ ಕಡೆಗಳಿಂದ ಹಲವಾರು ವಿಶೇಷ ಬಸ್ಸುಗಳನ್ನೂ ಸೌಕರ್ಯಪಡಿಸಿದ್ದರು. ಈ ದಿವಸಗಳಲ್ಲಿ ಪ್ರವಾಸಿಗಳಿಗೆ ಮಧ್ಯಾಹ್ನ ಭೋಜನವು ಸಮ್ಮೇಳನದ ವತಿಯಿಂದ ಈಯಲ್ಪಟ್ಟಿತು. 23ನೆಯ ಆದಿತ್ಯವಾರದಂದು ಮಾತ್ರವೇ ಒಂದು ಲಕ್ಷ ಜನರಿಗೆ ಅನ್ನದಾನವಾಯಿತೆಂದರೆ ಸಮ್ಮೇಳನದ ವಿಪುಲತೆಯನ್ನು ತಿಳಿಯಬಹುದು.

## ಪ್ರತಿದಿವಸವೂ ಇಸ್ಲಾಮಿನ ಕುರಿತು ಭಾಷಣ

ಶಿವಮೊಗ್ಗದ ಅಹ್ಮದಿಯಾ ಜಮಾತಿನ ಪ್ರತಿನಿಧಿಗಳು ರಾಘವೇಂದ್ರ ಕೃಪಾಶ್ರಮದ ಮಠಾಧೀಶರನ್ನೂ ಸಮ್ಮೇಳನ ಭಾರವಾಹಿಗಳನ್ನೂ ಭೇಟಿಯಾಗಿ ಜಮಾತಿನ ತೀರ್ಮಾನವನ್ನು ತಿಳಿಸಿದಾಗ ಅವರು ಅತ್ಯಂತ ಸಂತೋಷದಿಂದ ಇಸ್ಲಾಂ ಧರ್ಮ ಪ್ರಚಾರ ಕಾರ್ಯಕ್ಕೆ ಸಮ್ಮತಿಯನ್ನಿತ್ತರು. ಮಾತ್ರವಲ್ಲ ಪ್ರತಿದಿವಸವೂ ಇಸ್ಲಾಂ ಹಾಗೂ ಅಹ್ಮದಿಯಾ ಸಂಘಟನೆಯ ಕುರಿತು 30 ನಿಮಿಷಗಳ ಭಾಷಣಕ್ಕೂ ಅನುಮತಿಯಿತ್ತರು. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಇಸ್ಲಾಂ ಧರ್ಮ ಪ್ರವಚನಕ್ಕಾಗಿ ಬೊಂಬಾಯಿಯ ಅಹ್ಮದಿಯಾ ಮಿಶನರಿಯಾಗಿರುವ ಮೌಲವಿ ಶರೀಫ್ ಅಹ್ಮದ್ ಅಮೀನಿ, ಡೆಲ್ಲಿಯ ಅಹ್ಮದಿಯಾ ಮಿಶನರಿ ಮೌಲವಿ ಬಶೀರ್ ಅಹ್ಮದ್ ಸಾಹೆಬ್, ಮದ್ರಾಸಿನ ಅಹ್ಮದಿಯಾ ಮಿಶನರಿ ಮೌಲವಿ ಮುಹಮ್ಮದ್ ಉಮರ್ ಸಾಹೆಬ್ ಹಾಗೂ ಜಮಾತಿನ ಇತರ ಕೆಲವು ಪಂಡಿತರೂ ಆಗಮಿಸಿದರು.

## ಬುಕ್ ಸೆಂಟರ್ ಅಹ್ಮದಿಯಾ ಇಂಟರ್ ನೇಶನಲ್

ಧರ್ಮ ಸಮ್ಮೇಳನದ ಅನುಬಂಧವಾಗಿ ಜನವರಿ 20ರಿಂದ ಫೆಬ್ರುವರಿ 10ರ ತನಕ ಒಂದು ಬೃಹತ್ತಾದ ವಸ್ತುಪ್ರದರ್ಶನವು ನಡೆಯಿತು. ಇದರಲ್ಲಿ ಅಹ್ಮದಿಯಾ ಸಂಘಟನೆಯ ಸುಂದರವಾದ "ಬುಕ್ ಸೆಂಟರ್ ಅಹ್ಮದಿಯಾ ಇಂಟರ್‌ನೇಷನಲ್"ನ್ನು ಏರ್ಪಡಿಸಲಾಗಿತ್ತು. ಪ್ರಸ್ತುತ ಅಹ್ಮದಿಯಾ ಪುಸ್ತಕಾಲಯವನ್ನು ಲಕ್ಷಾಂತರ ಜನರು ಸಂದರ್ಶಿಸಿದರು. The

Holy Quran With English Translation, ಇಸ್ಲಾಮಿ ತತ್ವಜ್ಞಾನ ಪ್ರಕಾಶ, ಮೈತ್ರಿ ಸಂದೇಶ ಮೊದಲಾದ ಪುಸ್ತಕಗಳನ್ನು ಜನರು ಅತ್ಯಂತ ಅಭಿರುಚಿಯಿಂದ ಖರೀದಿಸಿದರು. ಅಲ್ಲದೆ, ಇಸ್ಲಾಂ ಹಾಗೂ ಅಹ್ಮದಿಯಾ ಸಂಘಟನೆಯ ಕುರಿತಿರುವ ವಿವಿಧ ಭಾಷೆಯ ಇತರ ಪುಸ್ತಕಗಳನ್ನು ಉಚಿತವಾಗಿಯೂ ಕೊಡಲಾಯಿತು. ಈ ಧರ್ಮ ಸಮ್ಮೇಳನದ ಉಪಯೋಗಕ್ಕಾಗಿಯೇ ಮುದ್ರಿಸಲಾದ ಕಿರುಲೇಖನಗಳ 65 ಸಾವಿರ ಪ್ರತಿಗಳು ಉಚಿತವಾಗಿ ವಿತರಣೆ ಮಾಡಲ್ಪಟ್ಟವು. ಧರ್ಮ ಸಮ್ಮೇಳನದಲ್ಲಿ ಭಾಗವಹಿಸಿದ ಹಿಂದೂ ಧರ್ಮದ ಉನ್ನತ ವ್ಯಕ್ತಿಗಳಿಗೂ ಸಮ್ಮೇಳನದಲ್ಲಿ ಅಧ್ಯಕ್ಷ ಸ್ಥಾನಗಳನ್ನು ವಹಿಸಿದ ವಿವಿಧ ಮಠಗಳ ಜಗದ್ಗುರುಗಳಿಗೂ ಧರ್ಮಸ್ಥಳದ ಶ್ರೀ ಡಿ. ವೀರೇಂದ್ರ ಹೆಗ್ಡೆ, ಬೆಂಗಳೂರಿನ ಆರ್ಚ್ ಬಿಶಪರಾದ ರೆವರೆಂಡ್ ಪಿ. ಆರೋಗ್ಯಸ್ವಾಮಿ ಮೊದಲಾದವರಿಗೂ ಇಸ್ಲಾಮಿಕ ಗ್ರಂಥಗಳನ್ನು ಸಮ್ಮಾನಿಸಲಾಯಿತು.

## ಸುಧಾ ಪ್ರವಚನ ಮಂಟಪದಲ್ಲಿ

ಪ್ರತ್ಯೇಕವಾಗಿ ಸಜ್ಜೀಕರಿಸಿದ 'ಸುಧಾ ಪ್ರವಚನ ಮಂಟಪದಲ್ಲಿ ಜನವರಿ 20ರಿಂದ 28ರ ವರೆಗೆ ವಿವಿಧ ಧರ್ಮಗಳ ಪ್ರತಿನಿಧಿಗಳಿಂದ ಪ್ರವಚನಗಳು ನಡೆಯಿತು. ಪ್ರತಿ ದಿವಸ ಸಂಜೆ 4 ಗಂಟೆಗೆ ಪ್ರಾರಂಭವಾದ ಸಭೆಯು ರಾತ್ರಿ 8 ಗಂಟೆಯ ವರೆಗೂ ಮುಂದುವರಿಯುತ್ತಿತ್ತು. ಈ ಸಭೆಗಳಲ್ಲಿ ಪ್ರತಿದಿವಸವೂ ವಿವಿಧ ಧರ್ಮಕ್ಷೇತ್ರಗಳ ಜಗದ್ಗುರುಗಳೂ ಧರ್ಮಾಧಿಪತಿಗಳೂ ಅಧ್ಯಕ್ಷತೆ ವಹಿಸಿದರು. ವಿವಿಧ ಮತಗಳ ಪ್ರತಿನಿಧಿಗಳು ಈ ಸಭೆಯಲ್ಲಿ ಮಾತನಾಡಿದರು. ಕ್ರೈಸ್ತ ಧರ್ಮದ ಕುರಿತು ರೆ। ಪಿ. ಆರೋಗ್ಯಸ್ವಾಮಿಯವರೂ ಬಹಾಯಿ ಪಂಥದ ಕುರಿತು ಮೇಜರ್ ಖನ್ನ ಅವರೂ ಚೆನ್ನಬಸವೇಶ್ವರ ಪಂಥದ ಕುರಿತು ಶ್ರೀ ಸಿಯಾಉದ್ದೀನ್ ಅವರೂ ಮಾತನಾಡಿದ ಈ ಅಧಿವೇಶನಗಳಲ್ಲಿ ಇಸ್ಲಾಂ ಧರ್ಮವನ್ನು ಪ್ರತಿನಿಧೀಕರಿಸಲು ಅಹ್ಮದಿಯಾ ಸಂಘದವರು ಮಾತ್ರವೇ ಹಾಜರಿದ್ದರು. ವ್ಯವಸ್ಥಾಪಕರ ಅನುಮತಿಯ ಮೇರೆಗೆ ಅಹ್ಮದಿಯಾ ಪ್ರತಿನಿಧಿಗಳಿಗೆ ಪ್ರತಿದಿವಸವೂ ಅರ್ಧತಾಸು ಕಾಲ ಮಾತನಾಡಲು ಅವಕಾಶವಿತ್ತು. ಮೊದಲ ದಿವಸ ಮೌಲವಿ ಶರೀಫ್ ಅಹ್ಮದ್ ಅಮೀನಿಯವರು ಹಿಂದಿಯಲ್ಲಿ ಭಾಷಣ ಮಾಡಿದರು. ಅವರು ಸಮ್ಮೇಳನದ ಸಂಘಟಕರನ್ನು ಅಭಿನಂದಿಸುತ್ತಾ ಧರ್ಮಕಾರ್ಯಗಳಿಗೆ ಪ್ರಾಮುಖ್ಯತೆಯು ಕಡಿಮೆಯಾಗುತ್ತಿರುವ ಈ ವೇಳೆಯಲ್ಲಿ ಇಂತಹ ಧರ್ಮ ಸಮ್ಮೇಳನಗಳು ನಡೆಯುತ್ತಿರುವುದು ಆಶ್ವಾಸದಾಯಕವೆಂದೂ ಧರ್ಮ ವಿಶ್ವಾಸಿಗಳು ತಮ್ಮೊಳಗಿನ ಜಾತೀಯ ಮನೋಭಾವವನ್ನು ತ್ಯಜಿಸಿ ಒಟ್ಟಾಗಿ ನಾಸ್ತಿಕತೆಯನ್ನು ಎದುರಿಸಬೇಕಾದ ಕಾಲವು ಸನ್ನಿಹಿತವಾಗಿರುವುದೆಂದೂ ಹೇಳುತ್ತಾ ಎಲ್ಲಾ ಮತಸ್ಥರೂ ತಮ್ಮೊಳಗೆ ಪರಸ್ಪರ ಸೌಹಾರ್ದದಿಂದಲೂ ಮೈತ್ರಿಯಿಂದಲೂ ವರ್ತಿಸುವಂತೆ ಕರೆಯಿತ್ತರು.

ಮರುದಿವಸ ಬೆಳಿಗ್ಗೆ ಪ್ರವಚನ ಮಂಟಪದಲ್ಲಿ ಜರಗಿದ ಪ್ರತ್ಯೇಕ ಸಭೆಯಲ್ಲಿ ಮಾತನಾಡಲು ಅಹ್ಮದಿಯಾ ಸದಸ್ಯರಿಗೆ ಅವಕಾಶವಿತ್ತ ಪ್ರಕಾರ ಮೌಲವಿ ಬಶೀರ್ ಅಹ್ಮದ್ ಸಾಹೆಬ್ ಅವರು ಅರ್ಧ ತಾಸು ಮಾತನಾಡಿದರು. ಎಲ್ಲಾ ಧರ್ಮಗಳ ಮೂಲವೂ ಒಂದೇ ಆಗಿರುವುದೆಂದೂ, ಎಲ್ಲಾ ಧರ್ಮಗಳ ಪ್ರಬೋಧನೆಗಳೂ ಮನುಷ್ಯನ ಗುಣಕ್ಕಾಗಿರುವುದೆಂದೂ, ಆದುದರಿಂದ ನಾವು ಪರಸ್ಪರ ಸ್ಪರ್ಧೆಯಿಂದಲೂ ಈರ್ಷ್ಯೆಯಿಂದಲೂ ವರ್ತಿಸದೆ ಅನ್ಯೋನ್ಯ ಅಭಿಪ್ರಾಯ ವಿನಿಮಯ ಮಾಡಿಕೊಳ್ಳುತ್ತಾ ಸೌಹಾರ್ದದಿಂದ ಜೀವಿಸಬೇಕೆಂದು ಅವರು ಹೇಳಿದರು. ತನ್ನ ಭಾಷಣದಲ್ಲಿ ಖುರ್ಆನ್ ವಾಕ್ಯಗಳನ್ನೂ ವೇದೋಕ್ತಿಗಳನ್ನೂ ಭಗವದ್ಗೀತೆಯ ಶ್ಲೋಕಗಳನ್ನೂ ಉಚ್ಚರಿಸುತ್ತಾ ಧರ್ಮಗಳೆಲ್ಲವೂ ಮಾನವ ರಾಶಿಯ ಒಳಿತನ್ನು ಪ್ರಬೋಧಿಸುತ್ತದೆಂದು ಹೇಳಿದ ಅವರು ಸಭಿಕರ ಅಭಿರುಚಿಯನ್ನು ಕೆರಳಿಸಿದರು. ಒಬ್ಬ ಮುಸ್ಲಿಂ ಪಂಡಿತನ ಮುಖದಿಂದ ಸಂಸ್ಕೃತ ಶ್ಲೋಕಗಳನ್ನು ಶ್ರವಿಸಿದ ಸಭಿಕರು ಆಕರ್ಷಿತರಾಗಿ ತಮ್ಮ ಸಂತೃಪ್ತಿಯನ್ನು ಸೂಚಿಸಿದರು. ಈ ಭಾಷಣದಿಂದ ಪ್ರಭಾವಿತರಾದ ಸಮ್ಮೇಳನದ ವ್ಯವಸ್ಥಾಪಕರು ಆ ಆ ದಿವಸ ಸಾಯಂಕಾಲವೂ ಇವರು ಇನ್ನೊಮ್ಮೆ ಮಾತನಾಡಬೇಕೆಂದು ಕೇಳಿಕೊಂಡರು. ಅಂತೆಯೇ ಅದೇ ದಿವಸ ಸಂಜೆ 6 ಗಂಟೆಗೆ ಮೌಲವಿ ಬಶೀರ್ ಅಹ್ಮದ್ ಸಾಹೆಬ್‌ರವರು ಎರಡನೇ ಸರ್ತಿ ಭಾಷಣ ಮಾಡಿದರು.

ತಾರೀಕು 22ನೇ ಶನಿವಾರದಂದು ಅಹ್ಮದಿಯರಿಗಿತ್ತ ವೇಳೆಯನ್ನು ಉಪಯೋಗಪಡಿಸುತ್ತಾ ಮದ್ರಾಸಿನ ಅಹ್ಮದಿಯ ಮಿಶನರಿ ಮೌಲವಿ ಮುಹಮ್ಮದ್ ಉಮರ್ ಸಾಹೆಬರು ಮಾತನಾಡಿದರು. ಇಸ್ಲಾಂ ಧರ್ಮಸ್ಥಾಪಕರ ಕುರಿತು ಹೈಂದವ ಪುರಾಣಗಳಲ್ಲೂ ಉಪನಿಷತ್ತುಗಳಲ್ಲೂ ಭವಿಷ್ಯ ನುಡಿದಿರುವುದನ್ನು ಅವರು

ಸಭಿಕರ ಮುಂದಿಡುತ್ತಾ ಇಸ್ಲಾಂ ಧರ್ಮದ ಆವಿರ್ಭಾವಕ್ಕೆ ಎಷ್ಟೋ ವರ್ಷಗಳ ಮೊದಲು ಬರೆಯಲ್ಪಟ್ಟ ಈ ಮಹಾಗ್ರಂಥಗಳಲ್ಲಿ ಭವಿಷ್ಯ ನುಡಿಯಲ್ಪಟ್ಟಿರುವುದು ನಿಜವಾಗಿಯೂ ಇಸ್ಲಾಂ ಧರ್ಮದ ಸತ್ಯತೆಗೆ ಒಂದು ನಿದರ್ಶನವೆಂದೂ, ಅದೇರೀತಿ ಹಿಂದೂ ಧರ್ಮವೂ ಸಹ ಮೂಲತಃ ದೈವಿಕ ಧರ್ಮವೇ ಆಗಿರುವುದೆಂದೂ ಅವರು ತಿಳಿಸಿದರು. ಮರುದಿವಸ ಮದ್ರಾಸಿನಿಂದ ಆಗಮಿಸಿದ "ಅಜಾದ್ ನೌಜವಾನ್" ಪತ್ರಿಕೆಯ ಸಂಪಾದಕರಾದ ಕರೀಮುಲ್ಲಾ ಸಾಹೆಬರು ಇಂಗ್ಲೀಷ್‌ನಲ್ಲಿ ಮಾತನಾಡಿದರು. ಅವರಿಗೆ ಮೊದಲು ಅದೇ ಸಭೆಯಲ್ಲಿ ಬಹಾಯಿ ಪಂಥದ ಮೇಜರ್ ಖನ್ನ ಅವರು ಮಾತನಾಡುತ್ತಾ ಇಸ್ಲಾಂ ಧರ್ಮದಲ್ಲಿ ಕೆಲವು ನ್ಯೂನತೆಗಳಿವೆಯೆಂದು ಹೇಳಿದುದನ್ನು ಕರೀಮುಲ್ಲಾ ಸಾಹೆಬರು ವಿಮರ್ಶಿಸಿದರು. ಇಸ್ಲಾಂ ಧರ್ಮದ ಸೌಂದರ್ಯವನ್ನೂ ಸಾರ್ವಲೌಕಿಕತೆಯನ್ನೂ ಅದರ ಪವಿತ್ರತೆಯನ್ನೂ ಅವರು ಸಭಿಕರ ಮುಂದಿಟ್ಟರು.

ಮರುದಿವಸ ನನ್ನ ಸರದಿಯಾಗಿತ್ತು. ನಾನು "ಸಮುದಾಯ ಮೈತ್ರಿ" ಎಂಬ ವಿಷಯದ ಕುರಿತು 30 ನಿಮಿಷಗಳ ಕಾಲ ಮಾತನಾಡಿದೆನು. ಎಲ್ಲಾ ಧರ್ಮಗಳ ಮೂಲವೂ ಜಗತ್ಪಾಲಕನಾದ ಏಕ ಪರಮಾತ್ಮನಾಗಿರುವನೆಂದೂ ಆವನು ವಿವಿಧ ಕಾಲಗಳಲ್ಲಿ ಲೋಕದ ವಿವಿಧ ಭಾಗಗಳಲ್ಲಿ ವಾಸಿಸುವ ಜನರ ಧಾರ್ಮಿಕ ಉದ್ಧಾರಕ್ಕಾಗಿ ಅವತಾರ ಪುರುಷರನ್ನೂ ಋಷಿ, ಮುನಿ, ಪ್ರವಾದಿಗಳನ್ನೂ ಕಳುಹಿಸಿರುವನೆಂದೂ ಆದುದರಿಂದ ನಾವು ಧರ್ಮಗಳ ಆಂತರಿಕ ತಿರುಳನ್ನರಿಯದೆ ಬಾಹ್ಯವಾದ ವ್ಯತ್ಯಾಸವನ್ನು ಆಧಾರವಾಗಿರಿಸಿಕೊಂಡು ಪರಸ್ಪರ ಶಾಂತಿಭಂಗವಾಗುವ ರೀತಿಯಲ್ಲಿ ವರ್ತಿಸಬಾರದೆಂದೂ ಹೇಳಿದೆನು. ಸಮುದಾಯ ಮೈತ್ರಿಗೆ ಅಹ್ಮದಿಯಾ ಸಂಘಟನೆಯ ಸ್ಥಾಪಕರು ನಿರ್ದೇಶಿಸಿದ ಮಹತ್ತಾದ ಸಂದೇಶವು ಅನ್ಯಮತಗಳ ಸ್ಥಾಪಕರನ್ನೂ ಮತಾಚಾರ್ಯರನ್ನೂ ಆತ್ಮಾರ್ಥವಾಗಿ ಬಹುಮಾನಿಸಬೇಕೆಂಬ ತತ್ವವಾಗಿದೆ. ಇಸ್ಲಾಂ ಧರ್ಮದ ಈ ಉಪದೇಶದನ್ವಯ ಅಹ್ಮದಿಯರಾದ ನಾವು ಮಹಾತ್ಮಾ ಶ್ರೀ ಕೃಷ್ಣ, ಶ್ರೀ ರಾಮಚಂದ್ರ, ಶ್ರೀ ಬುದ್ಧ ಮೊದಲಾದವರನ್ನು ದೇವರ ಪ್ರವಾದಿಗಳೆಂದು ನಂಬುತ್ತೇವೆಂದೂ ಅವರನ್ನು ಆತ್ಮಾರ್ಥವಾಗಿ ಸ್ನೇಹಿಸುತ್ತಲೂ ಆದರಿಸುತ್ತಲೂ ಇದ್ದೇವೆಂದೂ ಆದುದರಿಂದ ಹಿಂದೂ ಸಹೋದರರೂ ಕೂಡ ಇಸ್ಲಾಂ ಧರ್ಮಸ್ಥಾಪಕರ ಸತ್ಯತೆಯನ್ನು ಅಂಗೀಕರಿಸಿ ಅವರನ್ನು ಆದರಿಸಬೇಕಾದುದು ಅವರ ಧಾರ್ಮಿಕ ಕರ್ತವ್ಯವೆಂದೂ ನಾನು ಹೇಳಿದೆನು.

"ಯುಗರಶ್ಮಿ" ಪತ್ರಿಕೆಯ ಸಂಪಾದಕರಾದ ಜನಾಬ್ ಮುಹಮ್ಮದ್ ಯೂಸುಫ್ ಸಾಹೆಬ್ ಅವರು ಮರುದಿವಸ "ವಾಗ್ದತ್ತ ಲೋಕೋದ್ಧಾರಕ" ಎಂಬ ವಿಷಯದ ಕುರಿತು ಅರ್ಧ ತಾಸು ಮಾತನಾಡಿದರು. ಲೋಕದಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಧರ್ಮ ಗ್ರಂಥಗಳಲ್ಲೂ ನಾವು ಈಗ ಜೀವಿಸುತ್ತಿರುವ ಈ ಕಾಲವನ್ನು ಧಾರ್ಮಿಕ ಅಧಃಪತನದ ಒಂದು ಕಾಲವಾಗಿ ಚಿತ್ರೀಕರಿಸಿರುವುದನ್ನು ಕಾಣಬಹುದೆಂದೂ ಧರ್ಮದ ಸ್ಥಾನದಲ್ಲೆಲ್ಲಾ ಅಧರ್ಮವು ತುಂಬಿಹೋಗಿರುವ ಈ ಯುಗದಲ್ಲಿ ಮನುಷ್ಯರನ್ನು ಪುನಃ ಧಾರ್ಮಿಕ ಮೌಲ್ಯಗಳತ್ತ ಕೊಂಡೊಯ್ಯಲು ಒಬ್ಬ ದಿವ್ಯ ಪುರುಷನ ಅವತಾರವಾಗುವುದೆಂದು ಎಲ್ಲಾ ಧರ್ಮ ಗ್ರಂಥಗಳಲ್ಲೂ ಭವಿಷ್ಯ ನುಡಿಯಲ್ಪಟ್ಟಿರುವುದೆಂದೂ ಹೇಳುತ್ತಾ ಅದಕ್ಕೆ ಅವರು ಪವಿತ್ರ ಖುರಾನ್‌ನಿಂದಲೂ ಬೈಬಲ್‌ನಿಂದಲೂ ಹಿಂದೂ ಮತಗ್ರಂಥಗಳಿಂದಲೂ ಉದಾಹರಣೆಗಳನ್ನು ಎತ್ತಿ ತೋರಿಸಿದರು. ಭವಿಷ್ಯ ನುಡಿಯಲ್ಪಟ್ಟಿರುವ ಆ ಯುಗವು ಇದೇ ಆಗಿರುವುದೆಂಬುದನ್ನು ನಾವು ಅನುಭವದಿಂದ ತಿಳಿದುಕೊಳ್ಳುತ್ತಿದ್ದೇವೆ. ಧರ್ಮ ಗ್ರಂಥಗಳಲ್ಲಿ ವಾಗ್ದಾನ ಮಾಡಲ್ಪಟ್ಟ ಪ್ರಕಾರ ಆ ಮಹಾ ಲೋಕೋದ್ಧಾರಕನು ಅವತರಿಸಿರುವನೆಂದೂ ಅವರು ಭಾರತದ ಪಂಜಾಬ್ ಪ್ರಾಂತ್ಯದ ಖಾದಿಯಾನ್ ಎಂಬಲ್ಲಿ ಜನಿಸಿದರೆಂದೂ ಅವರು ಹೇಳಿದರು. ಭಾರತ ಭೂಮಿಯಲ್ಲಿ ಉದಯವಾದ ಈ ದಿವ್ಯ ಪ್ರಕಾಶವು ಜಗತ್ತಿನಾದ್ಯಂತ ಪ್ರಕಾಶಮಾನವಾಗಿ ಬೆಳಗಲಿ ಎಂದು ಅವರು ಆಶಿಸಿದರು.

ನಂತರದ ಎರಡು ದಿವಸಗಳಲ್ಲಿ ಅಹ್ಮದಿಯಾ ಪಂಡಿತರಾದ ಮೌಲವಿ ಮುಹಮ್ಮದ್ ಉಮರ್ ಸಾಹೆಬ್ ಮತ್ತು ಮೌಲವಿ ಬಶೀರ್ ಅಹ್ಮದ್ ಸಾಹೆಬ್ ಅವರು ಇಸ್ಲಾಮಿನ ಸಂದೇಶವನ್ನು ಜನಲಕ್ಷಗಳಿಗೆ ತಲಪಿಸಿದರು. ಪ್ರತಿದಿವಸವೂ ಅಹ್ಮದಿಯಾ ಪ್ರತಿನಿಧಿಗಳನ್ನು ಪ್ರವಚನ ವೇದಿಕೆಗೆ ಬರಮಾಡಿಸಿಕೊಂಡು ಅತ್ಯಂತ ಬಹುಮಾನದಿಂದಲೂ ಸ್ನೇಹಾದರದಿಂದಲೂ ವರ್ತಿಸಿದ ಸಮ್ಮೇಳನದ ಸಂಘಟಕರ ಹೃದಯ ವಿಶಾಲತೆಯೂ ಪರಧರ್ಮಾದರಣೆಯೂ ನಿಜವಾಗಿಯೂ ಪ್ರಶಂಸನೀಯವಾಗಿದೆ.

## ಅಹ್ಮದಿಯರ ಡೇರೆಯಲ್ಲಿ

ಲಕ್ಷಾಂತರ ಜನರು ಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಆಗಮಿಸಿದ್ದರಿಂದ ಆ ಪ್ರದೇಶವೇ ಅತ್ಯಂತ ಗುಲ್ಲು ಗೊಂದಲಗಳಿಂದ ತುಂಬಿತ್ತು. ಇವುಗಳಿಂದ ದೂರವಾಗಿ ಭದ್ರಾ ಅಣೆಕಟ್ಟಿನಿಂದ ಹರಿದು ಬರುವ ಒಂದು ನಾಲೆಯ ದಂಡೆಯಲ್ಲಿ, ಅತ್ಯಂತ ಶಾಂತವಾದ ವಾತಾವರಣದಲ್ಲಿ ಅಹ್ಮದಿಯಾ ಸಂಘದವರಿಗೆ ವಾಸವಿರಲು ಡೇರೆಯನ್ನು ಹಾಕಿದ್ದವು. ಸಾಧಾರಣ ವಿಶಾಲವೂ ಚೊಕ್ಕಟವೂ ಆದ ಆ ಡೇರೆಯಲ್ಲಿ ಅಹ್ಮದಿಯಾ ಮಿಶನರಿಗಳೂ ಇತರ ಅಹ್ಮದಿಯಾ ಸದಸ್ಯರೂ 10 ದಿವಸ ತಂಗಿದರು. ದಿನಂಪ್ರತಿ ಐದು ಸಮಯದ ನಮಾಜು ಕೂಡ ಅಲ್ಲಿಯೇ ನಡೆಯುತ್ತಿತ್ತು. ಸತ್ಯಾನ್ವೇಷಿಗಳಾದ ವಿವಿಧ ಮತಸ್ಥರು ಅಹ್ಮದಿಯಾ ಪಂಡಿತರು ತಂಗಿರುವ ಈ ಸ್ಥಳಕ್ಕೆ ಆಗಮಿಸಿ ಧಾರ್ಮಿಕ ವಿಷಯಗಳಲ್ಲಿ ಚರ್ಚೆಗಳನ್ನು ನಡೆಸಿದರು. ಹಲವು ಅಹ್ಮದಿಯೇತರ ಮುಸ್ಲಿಮರೂ ಬಂದಿದ್ದರು. ಅವರಿಗೆ ಅಹ್ಮದಿಯಾ ಸಂದೇಶವನ್ನು ತಲಪಿಸುತ್ತಾ ಸಂಘಟನೆಯ ಸತ್ಯತೆಯನ್ನು ವಿವರಿಸಿಕೊಡಲಾಯಿತು.

## ಬಹಾಯಿ ಪಂಥದವರೊಡನೆ ಚರ್ಚೆ

ಭಾರತೀಯ ಧರ್ಮ ಸಮ್ಮೇಳನದಲ್ಲಿ ಬಹಾಯಿ ಧರ್ಮದ ಪ್ರಚಾರಕ್ಕಾಗಿ ಕೆಲವು ವ್ಯಕ್ತಿಗಳು ಆಗಮಿಸಿದ್ದರು. ಅವರು ಕೆಲವು ಅಹ್ಮದಿಯಾ ವ್ಯಕ್ತಿಗಳೊಡನೆ ಮಾತನಾಡಿದಾಗ, ನಮ್ಮ ಮೌಲವಿಗಳು ಟೆಂಟಿನಲ್ಲಿದ್ದಾರೆಂದೂ ಅವರೊಡನೆ ಸಂಭಾಷಣೆ ನಡೆಸುವುದು ಉಚಿತವಾಗಿರಬಹುದೆಂದೂ ತಿಳಿಸಿದ ಪ್ರಕಾರ 22ನೇ ಶನಿವಾರದಂದು ಮೂರು ಬಹಾಯಿ ಸದಸ್ಯರು ನಮ್ಮ ಡೇರೆಗೆ ಬಂದರು. ಅವರನ್ನು ಆದರದಿಂದ ಸ್ವಾಗತಿಸಲಾಯಿತು. ಅವರಲ್ಲಿ ಒಬ್ಬರು ಸೈನ್ಯಾಧಿಕಾರಿಯಾಗಿರುವ ಮೇಜರ್ ಖನ್ನಾ ಅವರೂ, ಒಬ್ಬ ಪರ್ಶಿಯಾದವರೂ ಮತ್ತೊಬ್ಬರು ಬಹಾಯಿ ಮತದ ಕರ್ನಾಟಕ ರಾಜ್ಯದ ಮುಖ್ಯಸ್ಥರೂ ಆಗಿದ್ದರು. ಅವರು ಅಹ್ಮದಿಯಾ ಪಂಡಿತರನ್ನು ನೋಡಿ ಹೀಗೆಂದರು:– "ಮೌಲವಿ ಬಶೀರ್ ಅಹ್ಮದ್ ಸಾಹೆಬರು ನಿನ್ನೆ ಮಾಡಿದ ಭಾಷಣವನ್ನು ಕೇಳಿ ನಮಗೆ ಬಹಳ ಆನಂದವಾಗಿದೆ. ಅವರು ಎಲ್ಲಾ ಧರ್ಮಗಳ ಕುರಿತು ಅಧ್ಯಯನ ಮಾಡಿದ ಒಬ್ಬ ತಾರತಮ್ಯ ಪಠನಾ ವಿದ್ಯಾರ್ಥಿಯೆಂಬಂತೆ ತೋರಿ ಬರುತ್ತದೆ. ನಾವು ಕೂಡ ವಿವಿಧ ಮತಗಳ ಕುರಿತು ಅಧ್ಯಯನ ಮಾಡುವ ವಿದ್ಯಾರ್ಥಿಗಳಾಗಿದ್ದೇವೆ (Students of Comparitive studies). ಬಹಾವುಲ್ಲಾರವರಿಂದ ಸ್ಥಾಪಿತವಾದ "ಬಹಾಯಿ" ಧರ್ಮದ ಕುರಿತು ನಿಮಗೆ ತಿಳಿಸಿಕೊಡಲಿಕ್ಕೂ ಅದರ ಸತ್ಯತೆಯನ್ನು ವಿವರಿಸಿಕೊಡಲಿಕ್ಕೂ ನಾವು ನಿಮ್ಮಲ್ಲಿಗೆ ಬಂದಿರುವೆವು."

ಸಂಭಾಷಣೆಯು ಇಂಗ್ಲೀಷ್ ಭಾಷೆಯಲ್ಲಾಗಿತ್ತು. ಇದನ್ನು ಕೇಳಿದ ಮೌಲವಿ ಶರೀಫ್ ಅಹ್ಮದ್ ಅಮೀನಿ ಸಾಹೆಬ್ ಅವರು ವಿನಯದಿಂದ ಹೀಗೆಂದರು:– "ನೀವು ನಿಮ್ಮ ಕುರಿತು ವಿವಿಧ ಮತಗಳ ಅಧ್ಯಯನ ನಡೆಸಲು ಇಚ್ಛಿಸುವವರೆಂದು ಹೇಳಿದುದರಲ್ಲಿ ಸಂತೋಷವಿದೆ. ಬಹಾಯಿ ಮತದ ಪ್ರಚಾರಕ್ಕಾಗಿ ನೀವು ಆಗಮಿಸಿದಿರೆಂದು ತಿಳಿಸಿದಿರಿ. ನಾನು ಮನಗಂಡಂತೆ ಪ್ರತಿಯೊಂದು ಧರ್ಮವೂ ಅದರದೇ ಆದ ಕೆಲವು ತತ್ವ ಮತ್ತು ಆದರ್ಶಗಳ ಮೇಲೆ ಆಧಾರಿತವಾಗಿರುತ್ತದೆ. ಸಾಮಾನ್ಯವಾಗಿ ಎಲ್ಲಾ ಧರ್ಮಕ್ಕೂ ಅಧಿಕೃತವಾದ ಧರ್ಮ ಗ್ರಂಥಗಳು ಇರುತ್ತವೆ. ಆ ಧರ್ಮದ ಎಲ್ಲಾ ಉಪದೇಶಗಳೂ ತತ್ವಾದರ್ಶಗಳೂ ಆ ಧರ್ಮಗ್ರಂಥದಿಂದಲೇ ಆಧಾರಿತವಾಗಿರಬೇಕು. ಬಹಾಯಿ ಧರ್ಮ ಸ್ಥಾಪಕರಾದ ಬಹಾವುಲ್ಲಾರ ವಾದಕ್ಕೆ ಮೊದಲು ಅಲಿ ಮುಹಮ್ಮದ್ ಬಾಬ್ ಎಂಬವರು ತಾನೊಬ್ಬ ದೈವಿಕ ಪುರುಷನೆಂದು ವಾದಿಸಿದರು. ಮಾತ್ರವಲ್ಲ ಅವರು "ಅಲ್‌ಬಯಾನ್" ಎಂಬ ತನ್ನ ಗ್ರಂಥದ ಮೂಲಕ ಲೋಕದ ಎಲ್ಲಾ ಧರ್ಮಗಳನ್ನೂ ಧರ್ಮ ಗ್ರಂಥಗಳನ್ನೂ ಪವಿತ್ರ ಖುರಾನನ್ನು ಕೂಡಾ ಕಾಲಹರಣವಾದುದೆಂದು ವಿಧಿಸಿದರು. ಇದರಲ್ಲಿ ನೀವು ನಂಬಿಕೆಯಿಟ್ಟಿದ್ದೀರಿ. ಅವರ ಮರಣಾನಂತರ ಬಹಾವುಲ್ಲಾರವರು ದಿವ್ಯವಾದವನ್ನು ಹೊರಡಿಸಿ "ಅಖ್‌ದಸ್" ಎಂಬ ಒಂದು ಗ್ರಂಥವನ್ನು ಬರೆಯುತ್ತಾ ಅದರ ಮೂಲಕ ಉಳಿದ ಎಲ್ಲಾ ಧರ್ಮ ಗ್ರಂಥಗಳನ್ನೂ ಅಲ್‌ಬಯಾನನ್ನು ಕೂಡ ಅಕಾಲಿಕವೆಂದು ವಿಧಿಸಿದರು. ಈಗ ನಿಮ್ಮ ವಿಶ್ವಾಸ ಪ್ರಕಾರ ಜಗತ್ತಿಗೆ ಮಾರ್ಗದರ್ಶಕವಾಗಿರುವ, ನೀವು ಜನರನ್ನು ಯಾವ ಮಾರ್ಗದರ್ಶನದ ಕಡೆಗೆ ಆಹ್ವಾನಿಸುವಿರೋ ಆ ಮಾರ್ಗದರ್ಶನದ ಆಧಾರ ಗ್ರಂಥವು "ಅಖ್‌ದಸ್" ಆಗಿದೆ. ಅಂತೆಯೇ ಮುಸ್ಲಿಮರಾದ ನಮ್ಮ ಧರ್ಮಗ್ರಂಥವು "ಪವಿತ್ರ ಖುರಾನ್" ಆಗಿರುತ್ತದೆ. ನಮ್ಮ ಎಲ್ಲಾ ವಿಶ್ವಾಸಾದರ್ಶಗಳೂ ಪವಿತ್ರ ಖುರಾನ್‌ನಿಂದ ಆಧಾರಿತವಾಗಿರುತ್ತವೆ. ನಾವು

ಪರಸ್ಪರ ಧಾರ್ಮಿಕ ವಿಷಯಂಗಳ ಕುರಿತು ಚರ್ಚೆ ನಡೆಸು ವಾಗ ನಮ್ಮ ವಿಶ್ವಾಸಗಳಿಗೆ ನಿದರ್ಶನಗಳನ್ನು ಖುರಾನ್‌ನಿಂದಲೂ ನಿಮ್ಮ ವಿವಾದಗಳಿಗೆ ನಿದರ್ಶನಗಳನ್ನು ಅಖ್‌ದಸ್ ನಿಂದಲೂ ತೆಗೆದು ತೋರಿಸಬೇಕಾದುದು ಅಗತ್ಯವಾಗಿದೆ. ಆದುದರಿಂದ ನಮ್ಮ ಧಾರ್ಮಿಕ ಗ್ರಂಥವಾದ ಪವಿತ್ರ ಖುರ್‌ಆನನ್ನು ಮುಂದಿಡುತ್ತೇನೆ. ಅಂತೆಯೇ ನಿಮ್ಮ ಧಾರ್ಮಿಕ ಗ್ರಂಥವಾದ ಅಖ್‌ದಸನ್ನು ನೀವು ಜೊತೆಯಲ್ಲಿ ತಂದಿರುವಿರಾ?'' ಎಂದು ಕೇಳುತ್ತಾ ತನ್ನ ಕೈಯಲ್ಲಿದ್ದ ಪವಿತ್ರ ಖುರಾನಿನ ಇಂಗ್ಲೀಷ್ ಭಾಷಾಂತರವನ್ನು ತನ್ನ ಮುಂದಿಟ್ಟರು. ಆದರೆ ಬಹಾಯಿಯರು ಪರಸ್ಪರ ಮುಖನೋಡುತ್ತಾ ದೀನ ಸ್ವರದಿಂದ ಹೀಗೆಂದರು: "ನಾವು ನಮ್ಮ ಜೊತೆ ಅಖ್‌ದಸ್ ಗ್ರಂಥವನ್ನು ತಂದಿಲ್ಲ''

ಮೌಲವಿ ಸಾಹೆಬ್:–ಇರಲಿ, ನಿಮ್ಮ ವಿವಾದಗಳನ್ನೂ ಧಾರ್ಮಿಕ ತತ್ವಗಳನ್ನೂ ನೀವು ಆ ಗ್ರಂಥದಿಂದ ನಿರೂಪಿಸಬೇಕಷ್ಟೇ. ನಿಮ್ಮಲ್ಲಿ ಯಾರಾದರೂ ಆ ಗ್ರಂಥವನ್ನು ಪೂರ್ಣವಾಗಿ ಓದಿರುವಿರಾ?

ಬಹಾಯಿ:–ಇಲ್ಲ.

ಮೌಲವಿ ಸಾಹೆಬ್:–ನಿಮ್ಮಲ್ಲಿ ಯಾರಾದರೂ ಆ ಗ್ರಂಥವನ್ನು ನೋಡಿದ್ದೀರಾ?

ಮೂವರು ಬಹಾಯಿಗಳು ಸಹ ತಾವು ಆ ಗ್ರಂಥವನ್ನು ನೋಡಿಲ್ಲವೆಂದು ಹೇಳಿದರು.

ಮೌಲವಿ ಸಾಹೆಬ್:–ನಿಮ್ಮ ಕೈಯಲ್ಲಿ ಇಲ್ಲದ, ನೀವು ಓದಿಲ್ಲದ, ಎಂದೇಕೆ ನೀವು ಒಮ್ಮೆಯಾದರೂ ನೋಡಿರದ ಒಂದು ಧರ್ಮಗ್ರಂಥದ ತತ್ವಗಳೆಡೆ ಜನರನ್ನು ಆಹ್ವಾನಿಸಲು ಹೊರಟದ್ದು ನಿಜವಾಗಿಯೂ ಹಾಸ್ಯಾಸ್ಪದವಾಗಿರುತ್ತದೆ. ಬಹಾವುಲ್ಲಾ ಎಂದರೆ ಯಾರು? ಅವರ ವಾದಗಳೇನು? ಅವರ ಉಪದೇಶಗಳ್ಯಾವುವು? ಎಂಬ ವಿಷಯಂಗಳನ್ನೆಲ್ಲಾ ನೀವು ಧರ್ಮಗ್ರಂಥವಾಗಿ ನಂಬುವ ಅಖ್‌ದಸ್‌ನಿಂದಲೇ ನಿರೂಪಿಸಿ ತೋರಿಸಬೇಕಾಗಿದೆ. ಅಲ್ಲದೆ ನಿಮ್ಮ ಸ್ವಂತ ನುಡಿಗಳಿಂದ ಒಂದು ಧರ್ಮದ ತತ್ವಗಳನ್ನು ಕಟ್ಟಿ ಹೆಣೆಯುವುದು ಎಂದಿಗೂ ಸಮಂಜಸವಲ್ಲ. ಇಸ್ಲಾಂ ಧರ್ಮದ ಮೂಲಾಧಾರವಾದ ಪವಿತ್ರ ಖುರಾನ್ ನಮ್ಮ ಕೈಯಲ್ಲಿದೆ. ಇಸ್ಲಾಮಿನ ಆದರ್ಶಗಳೆಂದು ನಾವು ಹೇಳುತ್ತಿರುವ ಯಾವುದೇ ವಿಷಯಕ್ಕೂ ಈ ಪವಿತ್ರ ಖುರಾನ್‌ನಿಂದ ಪುರಾವೆಗಳನ್ನು ತೆಗೆದು ತೋರಿಸಲು ನಾವು ಸಿದ್ಧರಿದ್ದೇವೆ. ನೀವು ಕೂಡ ಬಹಾವುಲ್ಲಾರ ಸ್ವಂತ ನುಡಿಗಳಿಂದಲೇ ಅವರ ವಾದಗಳನ್ನು ನಿರೂಪಿಸಬೇಕಲ್ಲವೇ?

ಬಹಾಯಿ:–ಬಹಾವುಲ್ಲಾರವರು ಒಬ್ಬ ಪ್ರವಾದಿಯೆಂದು ವಾದಿಸಿದವರಾಗಿದ್ದಾರೆ. ಅಂತಹ ಪ್ರವಾದಿಗಳ ಬರುವಿಕೆಯು ಕುರಿತು ಪವಿತ್ರ ಖುರಾನ್‌ನಲ್ಲಿ ಕೂಡ ಹೇಳಲ್ಪಟ್ಟಿರುವುದನ್ನು ಕಾಣಬಹುದು. ಖುರಾನ್ ಈ ರೀತಿ ಹೇಳುತ್ತದೆ:–''ಎಲೈ ಮನುಷ್ಯ ಸಂತತಿಗಳೇ, ನಿಮ್ಮಿಂದಲೇ ಇರುವ ಪ್ರವಾದಿಗಳು ನಿಮ್ಮಲ್ಲಿಗೆ ಬಂದರೆ ನೀವು ಅವರಲ್ಲಿ ವಿಶ್ವಾಸವಿಡಿರಿ–ವಿಶ್ವಾಸವರ್ಪಿಸಿ ಭಕ್ತಿ ಮಾರ್ಗ ಕೈಗೊಳ್ಳುವವರಿಗೆ ಯಾವುದೇ ಭಯವೂ ಇರಲಾರದು.''

ಮೌಲವಿ ಸಾಹೆಬ್:– ಧರ್ಮೋದ್ಧಾರಕ್ಕಾಗಿ ಪ್ರವಾದಿಗಳು ಬರುವರೆಂದು ಪವಿತ್ರ ಖುರಾನಿನಲ್ಲಿ ಉಲ್ಲೇಖಿತವಾಗಿರುವುದಂತೂ ನಿಜ. ಆದರೆ, ಪ್ರಸ್ತುತ ಖುರಾನ್ ವಾಕ್ಯದನ್ವಯ ತಾನು ದೈವನಿಯುಕ್ತ ಪ್ರವಾದಿಯಾಗಿರುವೆನೆಂದು ಬಂದ ಈ ವ್ಯಕ್ತಿ ವಾದಿಸಬೇಕಲ್ಲವೇ? ನೀವು ಹೇಳಿದ ಈ ಖುರಾನ್ ವಾಕ್ಯದನ್ವಯ ತಾನೊಬ್ಬ ಪ್ರವಾದಿಯಾಗಿ ನಿಯುಕ್ತನಾಗಿರುವೆನೆಂದು ಬಹಾವುಲ್ಲಾರವರು ವಾದಿಸಿರುವುದಾಗಿ ಕೇವಲ ಒಂದೇ ಒಂದು ವಾಕ್ಯವನ್ನಾದರೂ ಅವರ ಗ್ರಂಥವಾದ ಅಖ್‌ದಸ್‌ನಿಂದ ತೆಗೆದು ತೋರಿಸಲು ನಿಮಗೆ ಸಾಧ್ಯವೇ? ಒಂದೇ ಒಂದು ವಾಕ್ಯವನ್ನು!

ಬಹಾಯಿ:–.........(ಮೌನ)

ಮೌಲವಿ ಸಾಹೆಬ್:–ಬಹಾಯಿ ಪಂಥದ ಕುರಿತು ನಾನು ಬಲ್ಲೆನು; ಅಖ್‌ದಸ್ ಗ್ರಂಥವೂ ಕೂಡ ನನ್ನ ವಶವಿದೆ. ಅದು ಮಾತ್ರ ಬೊಂಬಾಯಿಯಲ್ಲಿದೆ, ಇಲ್ಲಿಗೆ ನಾನು ತಂದಿಲ್ಲ. ನೀವು ಹೇಳುವಂತೆ ಬಹಾವುಲ್ಲಾರವರು ತಾನೊಬ್ಬ ದೈವನಿಯುಕ್ತ ಪ್ರವಾದಿಯೆಂದು ವಾದಿಸಿಯೇ ಇಲ್ಲ. **ಅವರು ತಾನು ಸ್ವಯಂ ದೇವರೆಂದು ವಾದಿಸಿದವರಾಗಿದ್ದಾರೆ.** ಅಲ್ಲದೆ ನೀವಂದಂತೆ ಅವರು ದೇವರ ಒಬ್ಬ ಪ್ರವಾದಿಯಾಗಿದ್ದರೆ ಅದರ ಕುರಿತು ಅವರಲ್ಲವೇ ವಾದಿಸಬೇಕಾದುದು? ಆದರೆ ಅವರು ತಾನೊಬ್ಬ ದೇವದೂತನೆಂದು ಪ್ರಸ್ತಾಪಿಸಿದ ಒಂದು ಶಬ್ದವನ್ನು ಕೂಡ ಅವರ ಗ್ರಂಥದಿಂದ ತೆಗೆದು ತೋರಿಸಲು ನಿಮ್ಮಿಂದ ಸಾಧ್ಯವಿಲ್ಲ. ಬದಲಾಗಿ ಅವರು ತಾನು ಸ್ವಯಂ ದೇವರೇ ಆಗಿರುವೆನೆಂದು ವ್ಯಕ್ತವಾಗಿ ಬರೆದಿರುವರು.

ಹಾಗೆ ಹೇಳುತ್ತಾ ಮೌಲವಿ ಶರೀಫ್ ಅಹ್ಮದ್ ಅಮೀನಿ ಅವರು ತನ್ನ ಪಾಕೆಟ್ ಬುಕ್‌ನಿಂದ ಕೆಲವು ಅಖ್‌ದಸ್ ಗ್ರಂಥದ ಉದ್ಧಾರಣೆಗಳನ್ನು ಓದಿ ಕೇಳಿಸಿದರು. ಬಹಾವುಲ್ಲಾರವರು ತನ್ನ ಕುರಿತು ಸೃಷ್ಟಿಕರ್ತನಾದ ದೇವರೆಂದು ವ್ಯಕ್ತವಾಗಿ ಹೇಳಿಕೊಂಡ ಉದ್ಧಾರಣೆಗಳು! ಇದಕ್ಕೆ ನಿಮಗೇನಾದರೂ ಹೇಳಲಿಕ್ಕಿದೆಯೋ ಎಂದು ಬಹಾಯಿಗಳೊಡನೆ ಮೌಲವಿ ಸಾಹೆಬರು ಪ್ರಶ್ನಿಸಿದರು. ತೃಪ್ತಿಕರವಾದ ಯಾವ ಉತ್ತರವೂ ಅವರಿಂದ ಲಭಿಸಲಿಲ್ಲ. ಮಾತ್ರವಲ್ಲ ತಾವು ಪ್ರತಿನಿಧೀಕರಿಸುವ ಧರ್ಮ ತತ್ವಗಳ ಆಧಾರ ಗ್ರಂಥವಾದ ಅಖ್‌ದಸನ್ನು ತಾವು ಜೊತೆಯಲ್ಲಿ ತರದೆ ಇದ್ದುದು ತಪ್ಪೆಂದು ಅವರು ಒಪ್ಪಿಕೊಂಡರು. ಕೊನೆಗೆ ಮೌಲವಿ ಅಮೀನಿ ಸಾಹೆಬರು ಇಸ್ಲಾಂ ಧರ್ಮದ ಕುರಿತು ಒಂದು ಸಂಕ್ಷಿಪ್ತ ವಿವರಣೆಯನ್ನು ಅವರಿಗೆ ನೀಡಿದರು. ಕೇವಲ ಮನುಷ್ಯನಾಗಿರುವ ಒಬ್ಬ ವ್ಯಕ್ತಿಯು ತಾನು ಜಗತ್ಪಾಲಕನಾಗಿರುವ ದೇವರಾಗಿರುವೆನೆಂದು ವಾದಿಸುವುದರ ಅಬದ್ಧತೆಯನ್ನೂ ಅವರಿಗೆ ತಿಳಿಸಿದರು. ಅಹ್ಮದಿಯಾ ಸಂಘಟನೆಯು ಪ್ರಕಟಿಸಿದ ಹಲವಾರು ಅಮೂಲ್ಯ ಗ್ರಂಥಗಳನ್ನೂ ಅವರಿಗೆ ಸಮ್ಮಾನವಾಗಿ ನೀಡಲಾಯಿತು.

## ಕ್ರೈಸ್ತ ಧರ್ಮ ಪ್ರಚಾರಕನೊಡನೆ ಸಂಭಾಷಣೆ

ತಾರೀಕು 24ರಂದು ಒಬ್ಬ ಕ್ರೈಸ್ತ ಧರ್ಮ ಪ್ರಚಾರಕ 'ಬುಕ್ ಸೆಂಟರ್ ಅಹ್ಮದಿಯಾ ಇಂಟರ್‌ನೇಶನಲ್' ಸಂದರ್ಶಿಸಿದರು. ಕ್ರೈಸ್ತ ಧರ್ಮದ ಕುರಿತು ಅಹ್ಮದಿಯಾ ಸಂಘಟನೆ ಪ್ರಕಟಿಸಿದ ಹಲವಾರು ಪುಸ್ತಕಗಳನ್ನು ಕಂಡು ಅವರಿಗೆ ಆಶ್ಚರ್ಯವಾಯಿತು. ಅವರ ಅಪೇಕ್ಷೆಯ ಮೇರೆಗೆ ಅವರನ್ನು ಅಹ್ಮದಿಯಾ ಮೌಲವಿಗಳು ತಂಗಿರುವ ಸ್ಥಳಕ್ಕೆ ಬರಮಾಡಿಸಿಕೊಂಡೆವು. ಕ್ರೈಸ್ತ ಧರ್ಮ ವಿಶ್ವಾಸವಾದ ತ್ರಿಏಕತ್ವ (ತ್ರಿತ್ವ) ಸಿದ್ಧಾಂತದ ಕುರಿತು ಪ್ರಾರಂಭದಲ್ಲಿ ಮಾತನಾಡಲಾಯಿತು. ತಂದೆ, ಮಗ, ಪರಿಶುದ್ಧಾತ್ಮ ಎಂಬ ಮೂರು ದೇವರಿರುವರೆಂದೂ ಆದರೆ ದೇವರು ಒಬ್ಬನೇ ಆಗಿರುವನೆಂದೂ ಇರುವ ಕ್ರೈಸ್ತರ ವಿಶ್ವಾಸವು (1+1+1=1) ದೈವ ದೂಷಣೆಯೂ ಅಬದ್ಧ ತತ್ವವೂ ಆಗಿರುವುದೆಂದು ಮೌಲವಿ ಶರೀಫ್ ಅಹ್ಮದ್ ಅಮೀನಿಯವರು ಅನೇಕ ವಿವೇಕಯುತ ಆಧಾರಗಳೊಂದಿಗೆ ನಿರೂಪಿಸಿ ಹೇಳಿದರು. ಮೂವರು ದೇವರಿರುವರೆಂದು ನೀವು ನಂಬುತ್ತೀರಿ. ಆ ಮೂವರು ದೇವರು ಸಹ ಪರಿಪೂರ್ಣರೂ ಸರ್ವಶಕ್ತರೂ ಆಗಿದ್ದರೆ, ಸರ್ವಶಕ್ತರಾಗಿರುವ ಮೂವರು ದೇವರ ಆವಶ್ಯಕತೆಯಿರುವುದಿಲ್ಲವೆಂದೂ ಅಥವಾ ಆ ಮೂರು ದೇವರುಗಳೂ ವಿಂಗಡಿತ ಅವಸ್ಥೆಯಲ್ಲಿ ಅಪೂರ್ಣರೂ ಪರಿಮಿತ ಶಕ್ತರೂ ಆಗಿರುವರೆಂದಾದರೆ ಅಂತಹ ಶಕ್ತಿಗಳನ್ನು ದೇವರೆಂದು ನಂಬಲು ಸಾಧ್ಯವಿಲ್ಲವೆಂದೂ ಮೌಲವಿ ಸಾಹೆಬರು ಹೇಳಿದರು. ತ್ರಿತ್ವ ಸಿದ್ಧಾಂತವನ್ನು ನಿರೂಪಿಸಲು ಆ ಕ್ರೈಸ್ತ ಪಾದ್ರಿಯು ತನ್ನಿಂದಾದ ಎಲ್ಲಾ ಶ್ರಮಗಳನ್ನು ನಡೆಸಿಯೂ ವಿಫಲರಾದರು. ನಂತರ ಯೇಸುಕ್ರಿಸ್ತರ ದೈವತ್ವ, ಅವರ ಆಕಾಶಾರೋಹಣ ಮೊದಲಾದ ವಿಷಯಗಳ ಕುರಿತು ಚರ್ಚೆ ನಡೆಯಿತು. ಬೈಬಲ್ ಗ್ರಂಥದ ಆಧಾರದಿಂದಲೇ ಈ ಎರಡು ವಿಶ್ವಾಸಗಳನ್ನು ಮೌಲವಿ ಸಾಹೆಬರು ಖಂಡಿಸಿದರು. ಬೈಬಲ್ ಗ್ರಂಥದಲ್ಲಿ ಒಬ್ಬ ಮುಸ್ಲಿಂ ಮೌಲವಿಗಿರುವ ಪಾಂಡಿತ್ಯವನ್ನು ಕಂಡು ಪಾದ್ರಿಯವರು ಬೆರಗಾದರು. ಆಧುನಿಕ ಕ್ರೈಸ್ತರ ವಿಶ್ವಾಸಗಳೆಲ್ಲವೂ ಅವರ ಧರ್ಮಾಧಾರವಾದ ಬೈಬಲ್ ಗ್ರಂಥಕ್ಕೆ ವಿರುದ್ಧವಾಗಿರುವುದೆಂದೂ ಮೌಲವಿ ಸಾಹೆಬರು ನಿರೂಪಿಸಿ ತಿಳಿಸಿದರು. ಸೂರ್ಯ ಪ್ರಕಾಶದಂತೆ ತನ್ನೆದುರಿಗೆ ವಿವರಿಸಲ್ಪಟ್ಟ ಆಧಾರಗಳ ಮುಂದೆ ನಿಲ್ಲಲು ಸಾಧ್ಯವಾಗದೆ ಪಾದ್ರಿಯು "ನನಗೆ ನಿಮ್ಮೊಡನೆ ಮಾತನಾಡಲು ಈಗ ಸಮಯವಿಲ್ಲ" ಎಂದು ಹೇಳುತ್ತಾ ಅಲ್ಲಿಂದ ಹೊರಡಲಣಿಯಾದರು. ಅವರಿಗೂ ಅಹ್ಮದಿಯಾ ಸಂಘಟನೆಯು ಪ್ರಕಟಿಸಿದ ಕೆಲವು ಪುಸ್ತಕಗಳನ್ನು ಕೊಡಲಾಯಿತು. ಅದರಲ್ಲಿ Jesus in India, Where Did Jesus die? Christian Doctrine of Atonement, Review of Christianity Latest findings about Jesus Christ ಎಂಬ ಕೃತಿಗಳೂ ಒಳಪಡುವುವು.

## ಧರ್ಮ ಸಮ್ಮೇಳನದ ಸಂಘಟಕರಿಗೆ ಪತ್ರ

ಬಸವಾ ಪಟ್ಟಣದಲ್ಲಿ ಜರಗಿದ ಭಾರತೀಯ ಧರ್ಮ ಸಮ್ಮೇಳನದ ವೇಳೆಯಲ್ಲಿ ಸಮ್ಮೇಳನದ ಸಂಘಟಕರು "ಆಶೀರ್ವಾದ" ಎಂಬ ಸ್ಮರಣ ಸಂಚಿಕೆಯನ್ನು ಬಿಡುಗಡೆ ಗೊಳಿಸಿದ್ದರು. 10 ರೂಪಾಯಿ ಬೆಲೆಗೆ ಹೊರಗಡೆ ಮಾರಲ್ಪಡುತ್ತಿದ್ದ ಈ ಸಂಚಿಕೆಯು ಎಲ್ಲಾ ಭಾಷಣಕಾರರಿಗೂ ಉಚಿತವಾಗಿ ಈಯಲ್ಪಟ್ಟಿತ್ತು. ಸಾಮಾನ್ಯವಾಗಿ ಎಲ್ಲಾ ಧರ್ಮಗಳ ಸಂಕ್ಷಿಪ್ತ ವಿವರಣೆಯನ್ನು ಕೊಡಲಾಗಿದ್ದ ಈ ಸ್ಮರಣ ಸಂಚಿಕೆಯ 33-34

ನೆಯ ಪುಟಗಳಲ್ಲಿ ಇಸ್ಲಾಂ ಧರ್ಮದ ಕುರಿತೂ ಬರೆಯಲಾಗಿದೆ. ಆದರೆ, ದುರ್ದೈವವಶಾತ್ ಆ ಸಂಚಿಕೆಯ ಸಂಪಾದಕರ ಅಶ್ರದ್ಧೆ ನಿಮಿತ್ತವೋ ಅಥವಾ ಇಸ್ಲಾಂ ಧರ್ಮದ ಕುರಿತು ಅವರಿಗೆ ತಿಳುವಳಿಕೆ ನೀಡಿದವರ ಅಜ್ಞಾನದ ಕಾರಣದಿಂದಲೋ ಇಸ್ಲಾಂ ಧರ್ಮದ ಕುರಿತು ಪ್ರತಿಪಾದಿಸಿದಲ್ಲಿ ಅತ್ಯಂತ ಘೋರ ಅಬದ್ಧಗಳನ್ನೂ ಅವಾಸ್ತವಿಕ ಸಂಭವಗಳನ್ನೂ ಆ ಸಂಚಿಕೆಯಲ್ಲಿ ಸೇರಿಸಲಾಗಿದೆ. ಮೊದಲನೆಯದಾಗಿ ಇಸ್ಲಾಂ ಧರ್ಮದ ಕುರಿತು ಲೇಖನ ತೊಡಗುವ ಮೊದಲೇ ಒಂದು ಪುಟದಲ್ಲಿ ಬಾಣಗಳಿಂದ ಚುಚ್ಚಲ್ಪಟ್ಟ ಒಂದು ಅಶ್ವದ ಚಿತ್ರವನ್ನು ಕೊಟ್ಟು ಅದರ ಮೇಲ್ಭಾಗದಲ್ಲಿ "ಇಸ್ಲಾಂ ಧರ್ಮ ಸ್ಥಾಪಕರು'' ಎಂದೂ ಚಿತ್ರದ ಕೆಳಭಾಗದಲ್ಲಿ "ಹಜರತ್ ಮುಹಮ್ಮದ್ ಪೈಗಂಬರರು'' ಎಂದೂ ಬರೆಯಲಾಗಿದೆ. ಇನ್ನು ಇಸ್ಲಾಂ ಧರ್ಮದ ಕುರಿತು ಬರೆದ ಲೇಖನದಲ್ಲಿ ಒಂದೆಡೆ ಇಸ್ಲಾಂ ಮತದ ಕಲಿಮಾದ "ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್'' ಎಂಬುದನ್ನು ಬರೆಯುತ್ತಾ ಅದರ ಅರ್ಥವನ್ನು ಈರೀತಿ ಕೊಡಲಾಗಿದೆ: "ಅಂದರೆ ಮುಹಮ್ಮದ್ ಪೈಗಂಬರರನ್ನು ದೇವರೆಂದು ತಿಳಿ.'' (ಆದರೆ ನಿಜವಾದ ಅರ್ಥವು ಈ ರೀತಿಯಾಗಿದೆ:- ಅಲ್ಲಾಹು ಅಲ್ಲದೆ ಬೇರಾವ ದೇವರೂ ಇಲ್ಲ. ಮುಹಮ್ಮದ್ ಅಲ್ಲಾಹುವಿನ ದೂತರಾಗಿರುವರು.) ಇದಲ್ಲದೆ ಇಸ್ಲಾಂ ಧರ್ಮ ಸ್ಥಾಪಕರ ಕುರಿತು ಅವಾಸ್ತವಿಕವಾದ ಇನ್ನೂ ಹಲವು ವಿಷಯಗಳನ್ನು ಆ ಲೇಖನದಲ್ಲಿ ಬರೆಯಲಾಗಿತ್ತು. ಮೇಲಿನ ಎರಡು ಅಬದ್ಧಗಳನ್ನು ತೋರಿಸುತ್ತಾ ಅದರ ನಿವಾರಣೆಗೋಸ್ಕರವಾಗಿ ಧರ್ಮ ಸಮ್ಮೇಳನದ ಕನ್‌ವೀನರ್ ಶ್ರೀ ರಾಘವೇಂದ್ರ ಗುರೂಜಿಯವರ ಸಮಕ್ಷಮಕ್ಕೆ ಅಹ್ಮದಿಯಾ ಸಂಘದಿಂದ ಒಂದು ಭಿನ್ನಹ ಪತ್ರವನ್ನು ಸಮರ್ಪಿಸಲಾಯಿತು.*

## ಮಹಿಳೆಯರ ಪಾತ್ರ

ಭಾರತೀಯ ಧರ್ಮ ಸಮ್ಮೇಳನದ ವೇಳೆಯಲ್ಲಿ ಶಿವಮೊಗ್ಗ ಅಹ್ಮದಿಯಾ ಜಮಾತಿನ ಮಹಿಳೆಯರು ಸಹ ಇಸ್ಲಾಂ ಧರ್ಮ ಪ್ರಚರಣ ಕಾರ್ಯದಲ್ಲಿ ಆದರ್ಶಣೀಯ ಪಾತ್ರವನ್ನು ವಹಿಸಿರುವರು. ಇಸ್ಲಾಂ ನಿರ್ದೇಶಿಸುವ ಪರ್ದಾವನ್ನು ಧರಿಸಿಕೊಂಡೇ ಅಹ್ಮದಿಯಾ ಸ್ತ್ರೀಯರು ಮಹಿಳೆಯರೆಡೆಯಲ್ಲಿ ಇಸ್ಲಾಮಿ ಕಿರುಲೇಖನಗಳನ್ನು ಹಂಚಿದರು. ಹೀಗೆ, ಸಮ್ಮೇಳನದಲ್ಲಿ ಭಾಗವಹಿಸಿದ ಪುರುಷರಿಗೆಂಬಂತೆ ಸ್ತ್ರೀಯರಿಗೂ ಇಸ್ಲಾಂ ಧರ್ಮದ ಸಂದೇಶವು ತಲಪುವಂತಾಯಿತು.

ಬಸವಾಪಟ್ಟಣದಲ್ಲಿ ಜರಗಿದ ಭಾರತೀಯ ಧರ್ಮ ಸಮ್ಮೇಳನದ ವೇಳೆ ಏರ್ಪಡಿಸಲಾದ ಈ ಪ್ರಚರಣ ಕಾರ್ಯಕ್ರಮದ ಎಲ್ಲಾ ಆರ್ಥಿಕ ಭಾರವನ್ನು ಶಿವಮೊಗ್ಗ ಅಹ್ಮದಿಯಾ ಜಮಾತಿನ ಸದಸ್ಯರೇ ವಹಿಸಿರುವರು. ಅಲ್ಲದೆ, ಬಸವಾ ಪಟ್ಟಣದಲ್ಲಿ 10 ದಿವಸಗಳ ವರೆಗೆ ತಂಗಿದ ಅಹ್ಮದಿಯಾ ಮೌಲವಿಗಳಿಗೂ ಇತರ ಅತಿಥಿಗಳಿಗೂ ಬೇಕಾದ ಎಲ್ಲಾ ಸೌಕರ್ಯಗಳನ್ನೂ ಒದಗಿಸಿಕೊಡುವಲ್ಲಿ ಶಿವಮೊಗ್ಗ ಜಮಾತಿನ ಯುವಕರು ಸಲ್ಲಿಸಿದ ಸೇವೆಯು ಪ್ರಶಂಸನೀಯವಾಗಿದೆ. ಸರ್ವಶಕ್ತನಾದ ಪರಮಾತ್ಮನು ಅವರೆಲ್ಲರಿಗೂ ತಕ್ಕುದಾದ ಪ್ರತಿಫಲವನ್ನೂ, ಇಹಪರ ಸೌಭಾಗ್ಯವನ್ನೂ ಈಯಲಿ-ಆಮೀನ್.

---

* 26ನೇ ಪುಟದಲ್ಲಿ ನೋಡಿರಿ.

---

( 26ನೇ ಪುಟದಿಂದ )

ಎಡೆಯಿದೆ. ಆದುದರಿಂದ ಅದರ ನಿವಾರಣೆಯು ಅನಿವಾರ್ಯವಾಗಿರುತ್ತದೆ.

ಮೇಲೆ ತೋರಿಸಿದ ವಿಷಯಗಳ ನಿವಾರಣೆಗೆ ತಾವು ಏರ್ಪಾಡು ಮಾಡಬೇಕೆಂಬುದಾಗಿ ಅತ್ಯಂತ ವಿನಯ, ಸ್ನೇಹ ಹಾಗೂ ಆದರಣೆಯೊಂದಿಗೆ ತಮ್ಮೊಡನೆ ಭಿನ್ನವಿಸಿಕೊಳ್ಳುತ್ತೇವೆ. ಮೇಲಿನ ವಿಷಯಗಳ ಕಡೆಗೆ ತಮ್ಮ ಗಮನವನ್ನು ಆಹ್ವಾನಿಸಬೇಕಾದುದು ನಮ್ಮ ಧಾರ್ಮಿಕ ಕರ್ತವ್ಯವಾಗಿದೆ.

ಇನ್ನೊಮ್ಮೆ ತಮಗೆ ನಾವು ಕೃತಜ್ಞತೆಗಳನ್ನು ಸಲ್ಲಿಸಿಕೊಳ್ಳುತ್ತೇವೆ.

ಇತಿ:

(ಸಹಿ)

**ಶರೀಫ್ ಅಹ್ಮದ್ ಅಮೀನಿ.**
Ahmadiya Muslim Missionary,
17, Club Back Road, Bombay-400008.

# ರಾಘವೇಂದ್ರ ಗುರೂಜಿಯವರಿಗೆ ಪತ್ರ

ದಿನಾಂಕ: 27—1—1977.

Ref. 611. Camp: Basavapattana.

ಶ್ರೀ ರಾಘವೇಂದ್ರ ಕೃಪಾಶ್ರಮದ ಮಠಾಧೀಶರಾದ ಶ್ರೀ ಶ್ರೀ ಶ್ರೀ ರಾಘವೇಂದ್ರ ಗುರೂಜಿಯವರ ಆದರಣೀಯ ಸನ್ನಿಧಾನಕ್ಕೆ ಭಿನ್ನಹಗಳು:—

ತಮ್ಮ ಮೇಲ್ನೋಟದಲ್ಲಿ ಈ ಬಸವಾ ಪಟ್ಟಣದಲ್ಲಿ ಜರಗುತ್ತಿರುವ "ಭಾರತೀಯ ಧರ್ಮ ಸಮ್ಮೇಳನ"ವೆಂಬ ಈ ಮಹಾ ಸಮ್ಮೇಳನದಲ್ಲಿ ಅಹ್ಮದಿಯಾ ಸಂಘದವರಾದ ನಮಗೂ ಭಾಗವಹಿಸಲು ಸಂದರ್ಭವನ್ನು ಒದಗಿಸಿಕೊಟ್ಟು ನಮಗೆ ಬೇಕಾದ ಎಲ್ಲಾ ಸೌಕರ್ಯ ಏರ್ಪಾಡಾದಿಗಳನ್ನು ಮಾಡಿಸಿಕೊಟ್ಟು ನಮ್ಮನ್ನು ಬಹುಮಾನವಿತ್ತು ಸತ್ಕರಿಸಿದ್ದಕ್ಕೆ ತಮ್ಮ ಆದರಣೀಯ ಸನ್ನಿಧಿಗೆ ನಾವು ಮೊತ್ತ ಮೊದಲಾಗಿ ಕೃತಜ್ಞತೆಗಳನ್ನು ಸಮರ್ಪಿಸುತ್ತೇವೆ.

ನಿಜವಾಗಿಯೂ ಪ್ರಸ್ತುತ ಧರ್ಮ ಸಮ್ಮೇಳನವು ಅದರ ಉದ್ದೇಶದಲ್ಲಿ ಅತಿ ಮಹತ್ವವನ್ನು ಒಳಗೊಂಡಿದೆ. ಈ ಸಮ್ಮೇಳನವು ಅತ್ಯಂತ ವಿಜೃಂಭಿತವೂ ವಿಜಯಕರವಾಗಿಯೂ ಜರಗಿದ್ದರಲ್ಲೂ ಈ ಮಹಾ ಸಮ್ಮೇಳನದಲ್ಲಿ ಭಾಗವಹಿಸಿ ಇಸ್ಲಾಂ ಹಾಗೂ ಅಹ್ಮದಿಯಾ ಸಂಘಟನೆಯನ್ನು ಪ್ರತಿನಿಧೀಕರಿಸಲು ನಮಗೆ ಸಂದರ್ಭವಿತ್ತದ್ದಕ್ಕಾಗಿಯೂ ತಮಗೆ ಕೃತಜ್ಞತೆಗಳು. ಇದರಲ್ಲಿ ನಮಗೆ ಅಭಿಮಾನವಿದೆ.

ಈ ಸಮ್ಮೇಳನದ ಉದ್ದೇಶಗಳಲ್ಲೊಂದಾದ "ಸೌಹಾರ್ದ"ದ ಪ್ರಕಟವಾದ ಉದಾಹರಣೆಯೆಂಬಂತೆ ಪ್ರಸ್ತುತ ಸಮ್ಮೇಳನದಲ್ಲಿ ನಡೆಯುತ್ತಿರುವ ವಸ್ತು ಪ್ರದರ್ಶನದಲ್ಲಿ ನಮಗೆ ಒಂದು ಬುಕ್‌ಸ್ಟಾಲನ್ನು ಏರ್ಪಡಿಸುವರೆ ಉಚಿತವಾಗಿ ಸ್ಥಳವನ್ನು ಕರುಣಿಸಿದ್ದಕ್ಕೂ ನಾವು ತಮಗೆ ಧನ್ಯರಾಗಿರುವೆವು.

ಇದೇ ಮಹಾ ಸಮ್ಮೇಳನದ ವೇಳೆಯಲ್ಲಿ ಬಿಡುಗಡೆಗೊಂಡ "ಆಶೀರ್ವಾದ" ಎಂಬ ಸ್ಮರಣ ಸಂಚಿಕೆಯು ನಮ್ಮ ಭಾಷಣಕಾರರಿಗೂ ಭಾಷಣ ವೇದಿಕೆಯಲ್ಲಿ ಬಹುಮಾನವಾಗಿ ಈಯಲ್ಪಟ್ಟಿತು—ಕೃತಜ್ಞತೆಗಳು.

1. ಪ್ರಸ್ತುತ ಸ್ಮರಣ ಸಂಚಿಕೆಯ 32 ಮತ್ತು 33ನೇ ಪುಟಗಳ ಮಧ್ಯೆ ಒಂದು ಕುದುರೆಯ ಚಿತ್ರವು ಪ್ರಕಟಿಸಲ್ಪಟ್ಟಿರುತ್ತದೆ. ಆ ಚಿತ್ರದ ಮೇಲ್ಭಾಗದಲ್ಲಿ "ಇಸ್ಲಾಂ ಧರ್ಮ ಸ್ಥಾಪಕರು" ಎಂದೂ ಚಿತ್ರದ ಅಡಿಭಾಗದಲ್ಲಿ "ಹಜರತ್ ಮುಹಮ್ಮದ್ ಪೈಗಂಬರರು" ಎಂದೂ ಬರೆಯಲ್ಪಟ್ಟಿದೆ. ಆದರೆ ಯಥಾರ್ಥದಲ್ಲಿ ಇಸ್ಲಾಂ ಮತ ಸ್ಥಾಪಕರಾದ ಮುಹಮ್ಮದ್ ಪೈಗಂಬರರು ಒಬ್ಬ ಮನುಷ್ಯರಾಗಿದ್ದರು; ಕುದುರೆಯಾಗಿರಲಿಲ್ಲ. ಮಾತ್ರವಲ್ಲ, ಕುದುರೆಯ ಚಿತ್ರವು ಇಸ್ಲಾಂ ಧರ್ಮದ ಯಾವುದೇ ಚಿಹ್ನೆಯೂ ಆಗಿರುವುದಿಲ್ಲ.

2. ಇಸ್ಲಾಂ ಧರ್ಮದ "ಕಲಿಮ" ಅಥವಾ ಮುದ್ರಾವಾಕ್ಯವು "ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್" ಎಂದಾಗಿದೆ. ಇದರ ಅರ್ಥವು "ಅಲ್ಲಾಹನ ಹೊರತು (ಪರಮಾತ್ಮನ ಹೊರತು) ಬೇರೆ ದೇವರಿಲ್ಲ; ಮತ್ತು ಹಜ್ರತ್ ಮುಹಮ್ಮದ್, ಅಲ್ಲಾಹನ ಪೈಗಂಬರರಾಗಿರುವರು" ಎಂದಾಗಿರುತ್ತದೆ. ಇಸ್ಲಾಂ ಧರ್ಮವು ಒಬ್ಬನೇ ಪರಮಾತ್ಮನಲ್ಲಿ ವಿಶ್ವಾಸವನ್ನು ಬೋಧಿಸುತ್ತದೆ. ಅಲ್ಲದೆ ಬೇರೆ ಯಾವ ಋಷಿ, ಪೈಗಂಬರ್, ಪ್ರವಾದಿಗಳನ್ನೂ ದೇವರೆಂದು ನಂಬುವುದಿಲ್ಲ. ಮುಹಮ್ಮದ್ ಪೈಗಂಬರರನ್ನು ಇಸ್ಲಾಂ ಧರ್ಮವು ಪರಮಾತ್ಮನೆಂದು ಪರಿಗಣಿಸುವುದಿಲ್ಲ.

3. ತಮ್ಮ ಸ್ಮರಣ ಸಂಚಿಕೆಯ 34ನೇ ಪುಟದಲ್ಲಿ ಇಸ್ಲಾಮಿನ ಕಲಿಮವನ್ನು ಬರೆದು ಅದರ ಅರ್ಥವನ್ನು ಈರೀತಿ ಕೊಡಲಾಗಿದೆ: "ಅಂದರೆ ಹಜರತ್ ಮುಹಮ್ಮದ್ ಪೈಗಂಬರರನ್ನು ದೇವರೆಂದು ತಿಳಿ." ಆದರೆ, ಈ ಅರ್ಥವು ತಪ್ಪಾಗಿರುತ್ತದೆ. ಇದರಿಂದ, ಮುಸಲ್ಮಾನರು ಹಜ್ರತ್ ಮುಹಮ್ಮದ್ ಪೈಗಂಬರರನ್ನು ದೇವರೆಂದು ತಿಳಿಯುತ್ತಾರೆಂಬ ತಪ್ಪಭಿಪ್ರಾಯವು ಉಂಟಾಗಲು

( 25ನೇ ಪುಟ ನೋಡಿರಿ )

# ಅರಬ್ ರಾಜ್ಯದ (ಯು. ಎ. ಇ.) ಪತ್ರಿಕೆಯಲ್ಲಿ ಅಹ್ಮದಿಯಾ ಖಲೀಫರ ಭಾವಚಿತ್ರ

ದಣಿದು ರೂಮನ್ನು ಪ್ರವೇಶಿಸಿದಾಗ ವೃತ್ತಪತ್ರಿಕೆಗಳ ಮುಖಗಳು ನನ್ನನ್ನು ನೋಡಿ ನಗುತ್ತಿದ್ದುವು! ಹೆಚ್ಚಿನ ಎಲ್ಲವೂ ಅಮೇರಿಕಾದ ಪ್ರೆಸಿಡೆಂಟರ ಮುಖಚಿತ್ರಗಳಿಂದ ತುಂಬಿದ ಪತ್ರಿಕೆಗಳು. ಹಾಗೆ ಆಲಸ್ಯಭಾವದಿಂದ 'ಎಮಿರೇಟ್ಸ್ ನ್ಯೂಸ್'ನೆಡೆಗೆ ಒಮ್ಮೆ ಕಣ್ಣೋಡಿಸಿದಾಗ ಅಹ್ಮದಿಯಾ ಮುಖಂಡನ ಫೋಟೋ! ಅದು ಸಹ ಹಡ್ಡರ್ಸ್‌ಫೀಲ್ಡ್ (Haddersfield, Northern England) ನಲ್ಲಿ ಮಸೀದಿಯನ್ನು ಉದ್ಘಾಟನೆ ಮಾಡುವ ಸಂದರ್ಭದಲ್ಲಿ ಖಲೀಫರು ಅನುಯಾಯಿಗಳಿಗೆ ಉಪದೇಶಿಸುವ ಫೋಟೋ! ನನ್ನ ಕಣ್ಣಂಚಿನಲ್ಲಿ ಹನಿಗೂಡಿದುವು. ಸಮೀಪ ಕುಳಿತಿದ್ದ ನನ್ನ ಅಹ್ಮದಿಯೇತರ ಸ್ನೇಹಿತನ ಕೈಯಲ್ಲಿ ಪತ್ರಿಕೆಯನ್ನು ಕೊಟ್ಟೆನು. ನಾನು ಹಾಗೆ ವಿಚಾರಮಗ್ನನಾದಾಗ ನನ್ನ ಜನ್ಮದ ಕುರಿತು ಅರಿತೆ! ಜನ ನಿಬಿಡವಾಗಿರುವ ದುಬೈ ನಗರದ ಬೀದಿಗಳಲ್ಲಿ ಈ ಭಾವಚಿತ್ರವನ್ನು ಹಿಡಿದು ಓಡಾಡಬೇಕೆಂದು ಒಂದರ್ಧ ನಿಮಿಷ ನನಗೆ ಅನಿಸಿತು.



Hazrat Mirza Nasir Ahmed, Head of the Ahmadiya Movement in Islam, addresses followers during a religious ceremony at the opening of a new mosque at Huddersfield, northern England. During his recent travels, he opened a new mosque in Sweden and then visited the United States to organise the building of an Islamic Community Centre near Washington

ಅಬೂದಾಬಿಯಲ್ಲಿ ಮೊದಲೊಮ್ಮೆ ಅಹ್ಮದಿಯರಿಗೆದುರಾಗಿ ಒಂದು ಗಾಳಿ ಬೀಸಲು ತೊಡಗಿತ್ತು. ಆದರೆ ಯು. ಎ. ಇ. ಪ್ರಸಿಡೆಂಟ್ ಶೈಕ್ ಸಯಿದ್ ಇಬ್ನ್ ಅಲ್ ನಹಿಯಾನ್ ಅದಕ್ಕೆದುರಾದ ಕಾರಣ ಅದು ಬಂದಲ್ಲಿಗೇನೇ ಹಿಂತಿರುಗಿತು.

ಮಕ್ಕಾದ 'ರಾಬಿತ್ತತುಲ್ ಆಲಮುಲ್ ಇಸ್ಲಾಮಿ' ಯು ಅಹ್ಮದಿಯಾ ಸಂಘಟನೆಯನ್ನು ನಾಶಪಡಿಸಲು ಆಹ್ವಾನಿಸಿ, ಅಹ್ಮದಿಯರು ಕಾಫಿರರೆಂದು ಫತ್ವಕೊಡಲು ಮುಸ್ಲಿಂ ರಾಷ್ಟ್ರಗಳೊಡನೆ ಅಗತ್ಯಪಡಿಸಿದ ಹಿನ್ನೆಲೆಯುಲಾಗಿತ್ತು, ಯು.ಎ.ಇ. ಪ್ರಸಿಡೆಂಟರ ಪತ್ರಿಕೆಯಲ್ಲಿ ಅಹ್ಮದಿಯಾ ಸಂಘಟನೆಯನ್ನು ಇಸ್ಲಾಮಿಕ ಸಂಘಟನೆಯೆಂದು ವಿವರಿಸುವ ಟಿಪ್ಪಣಿ ಸಹಿತ ಅದರ ಮುಖಂಡನ ಫೋಟೋವನ್ನು ಪ್ರಕಟಿಸಿದ್ದು. ರಾಬಿತ್ತದ ತೀರ್ಮಾನಕ್ಕೆದುರಾಗಿ ಇದು ಶಕ್ತಿಯುತವಾದ ಒಂದು ಪ್ರಹಾರವೆಂದು ಹೇಳದೆ ನಿರ್ವಾಹವಿಲ್ಲ.

ಆ ನಂತರ ನನ್ನ ಸ್ನೇಹಿತನು ಆ ಫೋಟೋವನ್ನು ಕತ್ತರಿಸಿ ತೆಗೆದು ನನಗೆ ಕೊಟ್ಟು ಹೇಳಿದ: "ಊರಿನವರೂ ತಿಳಿಯಲಿ; ನಿಮ್ಮ ಪತ್ರಿಕೆಗೆ ಕಳುಹಿಸಿಕೊಡಿರಿ!''

ಮನಸ್ಸಿನಲ್ಲಿ ಆನಂದದ ಸಾವಿರಾರು ಚಿಗುರುಗಳು! ಒಂದುವೇಳೆ ಊರಿನವರು ಇದನ್ನು ಪ್ರಕಟಗೊಂಡು ಕಂಡಾಗ ಆನಂದಿಸುವುದಕ್ಕಿಂತ ಹೆಚ್ಚು ನಮಗೆ ಇಲ್ಲಿ ಆನಂದಿಸಬಹುದು. ಕಾರಣವೇನೆಂದರೆ, ಲಕ್ಷಗಟ್ಟಲೆ ಪ್ರತಿಗಳು ಅಚ್ಚಾಗುವ 'ಎಮಿರೇಟ್ಸ್ ನ್ಯೂಸ್'' ಓದುಗರಲ್ಲಿ ಹೆಚ್ಚಿನವರು ಅರಬಿಗಳಿಗಿಂತ ಇಂಗ್ಲೀಷರೂ ಇತರರೂ ಆಗಿದ್ದಾರೆ. ಮಾತ್ರವಲ್ಲ ಯು.ಎ.ಇ. ಸರಕಾರದ ಏಕ ಇಂಗ್ಲಿಷ್ ಮುಖವಾಣಿಯಾಗಿದೆ 'ಎಮಿರೇಟ್ಸ್ ನ್ಯೂಸ್!' ಶೈಕ್ ಸಯಿದ್ ಇಬ್ನು ಅಲ್ ನಹಿಯಾರ ನೆರಳಿನಲ್ಲಿ ಪ್ರಕಟಗೊಳ್ಳುತ್ತಿರುವ ಪ್ರಸ್ತುತ ಪತ್ರಿಕೆಯಲ್ಲಿ ನನ್ನ ನೇತಾರರ ಫೋಟೋ! ಮನೋಹರವಾದ, ಕಮೋಜ್ಜ್ವಲವಾದ ಫೋಟೋ!

—E. M. ಹಾಶಿಂ.

—o—o—

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಜ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

**ಮೈತ್ರಿ ಸಂದೇಶ**

"....... ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದುಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು... .. " —ಉದಯವಾಣಿ.

" ...... ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸಯಬಲ್ಲ ಲೇಖನ...... " —ನವಭಾರತ

ಪುಟಗಳು: 48 ಬೆಲೆ: ಒಂದು ರೂಪಾಯಿ ಅಂಚೆವೆಚ್ಚ: ಉಚಿತ

ಬರೆಯಿರಿ: The Editor, YUGARASHMI Kannada Quarterly,
23/1008, Ansari Road, Bunder, Mangalore-575001

Phone: 75849 GST No. K-191 CSR No. K-126

ಶುಂಠಿ, ಕರಿಮೆಣಸು, ಮರಗೆಣಸು, ಅರಸಿನ ಮತ್ತು ಇತರ ಕಾಡು ಉತ್ಪತ್ತಿಗಳ ಪ್ರಸಿದ್ಧ ವ್ಯಾಪಾರಿಗಳು

**KECEE & COMPANY**

Merchants & Commission Agents

**9/231, COPRA BAZAAR CALICUT-1**

# • ಅಹ್ಮದಿಯಾ ಸಂಕ್ಷಿಪ್ತ ವಾರ್ತೆಗಳು •

## ದಕ್ಷಿಣ ಅಮೇರಿಕದ ಗಿಯಾನದಲ್ಲಿ ಹೊಸ ಮಸೀದಿಯ ಉದ್ಘಾಟನೆ, ವಾರ್ಷಿಕ ಸಮ್ಮೇಳನ ಮತ್ತು ಕರಿಬಿಯನ್ ಕೌನ್ಸಿಲ್ ಸಭೆ

ಗಿಯಾನ ರಾಜ್ಯದ ಒಂದು ಪ್ರಧಾನ ನಗರವಾದ ರೋಝ್‌ಗನಾಲ್‌ನಲ್ಲಿ ಹೊಸದಾಗಿ ಕಟ್ಟಿಸಿದ ಅಹ್ಮದಿಯಾ ಮಸೀದಿಯು 1976ನೇ ಇಸವಿ ನವೆಂಬರ್ 12ರಂದು ಟ್ರಿನಿಡಾಡ ನ ಮಿಶನರಿ ಮೌಲಾನ ಮುಹಮ್ಮದ್ ಹಸೀಫ್ ಯಾಕೂಬ್ ಸಾಹೇಬರಿಂದ ಉದ್ಘಾಟಿಸಲ್ಪಟ್ಟಿತು. ಗಿಯಾನದ ವಾರ್ಷಿಕ ಸಮ್ಮೇಳನವು ನವೆಂಬರ್ 14ಕ್ಕೆ ನಿಶ್ಚಯಿಸಲಾದುದರಿಂದ ಇದರಲ್ಲಿ ಭಾಗವಹಿಸಲು ಟ್ರಿನಿಡಾಡ್ ಮತ್ತು ಸುರಿನಾಮ್ ರಾಜ್ಯಗಳಿಂದ ಮಿಶನರಿಗಳು ಮತ್ತು ಇತರ ಅಹ್ಮದಿ ಸಹೋದರರು ಮುಂಚಿತವಾಗಿಯೇ ಬಂದು ಈ ಮಸೀದಿಯ ಉದ್ಘಾಟನೆಯಲ್ಲೂ ಪಾಲ್ಗೊಂಡರು. ಸಹಸ್ರಾರು ಆಮಂತ್ರಿತರು ಈ ಸಮಾರಂಭದಲ್ಲಿ ಸೇರಿದ್ದರು. ಗಿಯಾನ ಕ್ರಾನಿಕಲ್ ಪತ್ರಿಕೆ ತನ್ನ ನವೆಂಬರ್ 22ರ ಸಂಚಿಕೆಯಲ್ಲಿ ಮಸೀದಿಯ ದೊಡ್ಡ ಫೋಟೋವನ್ನು ಪ್ರಕಟಿಸಿ ಮಸೀದಿಯ ಉದ್ಘಾಟನೆಯ ಸಮಾಚಾರವನ್ನು ಪ್ರಸಿದ್ಧಗೊಳಿಸಿತು. ಗಿಯಾನದ ವಾರ್ಷಿಕ ಸಮ್ಮೇಳನವು ನವೆಂಬರ್ 14ರಂದು ವಿಜಯಕರವಾಗಿ ಜರಗಿತು. ಹಿಂದಿನ ವರ್ಷದಲ್ಲಿ ರೂಪೀಕರಿಸಿದ್ದ ಅಹ್ಮದಿಯಾ ಕರಿಬಿಯನ್ ಕೌನ್ಸಿಲ್ ಪುನಃ ಸಭೆಗೂಡಿ ಅಹ್ಮದಿಯಾ ಪ್ರಚರಣಕಾರ್ಯವನ್ನು ವಿಸ್ತರಿಸಲು ಹಲವು ತೀರ್ಮಾನಗಳನ್ನು ಕೈಗೊಂಡಿತು.

ಕರಿಬಿಯನ್ ದ್ವೀಪಗಳಾದ ಬಾರ್ಬದೋಸ್, ಗ್ರೆನೆಡಾ, ಎಂಟೀಗಾ ಮತ್ತು ಜಮೈಕಾಗಳಲ್ಲಿ ಮತ ಪ್ರಚಾರಕ್ಕಾಗಿ ಒಬ್ಬ ಹೊಸ ಮಿಶನರಿ ಬೇಕೆಂದು ಕೇಂದ್ರ ಸಂಘಟನೆಯೊಡನೆ ಅಪೇಕ್ಷಿಸಲಾಗಿದೆ.

ಜಾರ್ಜ್ ಟೌನಿನಲ್ಲಿ ಮಸೀದಿ ಮತ್ತು ಮಿಶನ್ ಹೌಸಿಗಾಗಿ ಸ್ಥಳದ ಖರೀದಿ ಮಾಡಿ ಅವುಗಳನ್ನು ಕಟ್ಟಿಸುವುದರೊಂದಿಗೆ ಸ್ಥಳೀಯ ಮಿಶನರಿಗಳನ್ನು ತರಬೇತುಗೊಳಿಸುವ ಒಂದು ಕೇಂದ್ರವನ್ನೂ ಸ್ಥಾಪನೆ ಮಾಡುವರೆ ತೀರ್ಮಾನಿಸಲಾಯಿತು.

—o—o—

## — ಲಂಡನಿನ ಅಹ್ಮದಿಯಾ ಮಸೀದಿಯಲ್ಲಿ ಸೆಮಿನಾರ್ —

ಮಾರ್ಚ್ ದಿನಾಂಕ 27ರಂದು ಸಾಯಂಕಾಲ ಲಂಡನಿನ ಅಹ್ಮದಿಯಾ ಮಸೀದಿಯ ವಠಾರದಲ್ಲಿ ದೈವಾಸ್ತಿಕ್ಯದ ಕುರಿತು ಒಂದು ಸೆಮಿನಾರನ್ನು ಏರ್ಪಡಿಸಲಾಗಿತ್ತು. ಪಾಕಿಸ್ತಾನದ ಮಾಜಿ ವಾಯು ಸೇನಾ ದಂಡನಾಯಕ ಏರ್‌ಮಾರ್ಷಲ್ ಝಫರ್ ಚೌಧರಿಯವರು ಅಧ್ಯಕ್ಷತೆ ವಹಿಸಿದರು. ಶ್ರೀ ಮಾತುರ್ ಕೃಷ್ಣಮೂರ್ತಿ, ರಿಜಿಸ್ಟ್ರಾರ್, ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಕಲ್ಚರ್ (ಹಿಂದು ಮತ), ಮಿಸ್ಟರ್ ಪೌಲ್ ಪಾ (ಯಹೂದ ಮತ), ರೆವೆರೆಂಡ್ ಕೇನನ್ ಪೀಟರ್ ಷ್ನೈಡರ್, Secretary of the consultants to the Archbishops of Canterbury and York on interfaith relations (ಕ್ರೈಸ್ತ ಮತ), ರೆವರೆಂಡ್ ಜೇಕ್ ಡಿಸ್ಟಿನ್, Development Secretary, world Congress of Faiths (ಬೌದ್ಧ ಮತ), ಡಾ। ತರ್ಲೋಚನ್ ಸಿಂಘ್, (ಸಿಖ್ಖ ಮತ), ಬಶೀರ್ ಅಹ್ಮದ್ ರಫೀಕ್, ಲಂಡನ್ ಅಹ್ಮದಿಯಾ ಮಸೀದಿಯ ಇಮಾಂ (ಇಸ್ಲಾಂ ಮತ) ಎಂಬಿವರು ಆಯಾಯ ಧರ್ಮಗಳನ್ನು ಉದ್ಧರಿಸಿ ಮಾತನಾಡಿದರು.

ಜಾಗತಿಕ ನ್ಯಾಯಾಲಯದ ಮಾಜಿ ಅಧ್ಯಕ್ಷ ಸರ್ ಮುಹಮ್ಮದ್ ಝಫರುಲ್ಲಾ ಖಾನ್ ಸಾಹೇಬರು ಸಹ ಸೆಮಿನಾರನ್ನು ಅಭಿಸಂಬೋಧಿಸಿ ಭಾಷಣ ಮಾಡಿದರು.

—o—o—

## ಖಾದಿಯಾನಿನಲ್ಲಿ 85ನೇ ವಾರ್ಷಿಕ ಸಮ್ಮೇಳನ ಸಮಾರೋಪಗೊಂಡಿತು

ಖಾದಿಯಾನಿನ 85ನೇ ವಾರ್ಷಿಕ ಸಮ್ಮೇಳನವು ಮೂರು ದಿನಗಳ ವಿವಿಧ ಕಾರ್ಯಕ್ರಮಗಳ ನಂತರ 1976 ಡಿಸೆಂಬರ್ 28ಕ್ಕೆ ಸಮಾರೋಪಗೊಂಡಿತು.

ಭಾರತದ ನಾನಾ ಕಡೆಗಳಿಂದ ಸುಮಾರು 2000 ಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲುಗೊಂಡಿದ್ದರು. 68 ಹೊರರಾಷ್ಟ್ರ ಪ್ರತಿನಿಧಿಗಳು ಸಹ ಭಾಗವಹಿಸಿದ್ದರು. ಪಾಕಿಸ್ತಾನದಿಂದ ಪ್ರತ್ಯೇಕ ಬಸ್ಸಿನಲ್ಲಿ ಡಿಸೆಂಬರ್ 25ಕ್ಕೆ ಅವರು ಖಾದಿಯಾನಿಗೆ ತಲುಪಿದರು. ಆಫ್ರಿಕದ ಕರಿಯ ರಿಂದಲೂ ಯುರೋಪಿನ ಬಿಳಿಯರಿಂದಲೂ ಕೂಡಿದ್ದ ಈ ಆತ್ಮಿಕ ಪ್ರತಿನಿಧಿ ಸಂಘವು ಸಮ್ಮೇಳನಕ್ಕೆ ಒಂದು ನವ ಚೈತನ್ಯವನ್ನು ನೀಡಿತು. ಯುರೋಪಿನಿಂದ ಬಂದ ಮಹಿಳೆಯರೆಲ್ಲರೂ ಬುರ್ಖಾಧಾರಿಗಳಾಗಿದ್ದರೆಂಬುದು ಉಲ್ಲೇಖಾರ್ಹವಾಗಿದೆ.

ಭಾರತದ ಅಹ್ಮದಿಯಾ ಪಂಡಿತರುಗಳಲ್ಲದೆ ಜನಾಬ್ ಅಬೂಬಕ್ಕರ್ ಖಾನ್ (ಮೊರಿಷ್ಯಸ್), ಹಿದಾಯತುಲ್ಲಾ ಹಬಶ್ (ಜರ್ಮನಿ), ಮೌಲಾನ ಬಶೀರ್ ಅಹ್ಮದ್ ರಫೀಖ್ (ಲಂಡನ್), ಮುಝಫ್ಫರ್ ಅಹ್ಮದ್ (ಅಮೇರಿಕ), ಅಬ್ದುಲ್‌ವಾಸೀ (ನೈಜೀರಿಯಾ) ಎಂಬಿವರು ಭಾಷಣ ಮಾಡಿದರು.

### ಅಖಿಲ ಕೇರಳ ಅಹ್ಮದಿಯಾ ಸಮ್ಮೇಳನ

21ನೇ ಅಖಿಲ ಕೇರಳ ಅಹ್ಮದಿಯಾ ಸಮ್ಮೇಳನವು ಎಪ್ರಿಲ್ 30 ಮತ್ತು ಮೇ 1 ದಿನಾಂಕಗಳಲ್ಲಿ ನಿಲಂಬೂರಿಗೆ ಸಮೀಪದ ಕರುಳಾಯಿ ಎಂಬಲ್ಲಿ ನಡೆಯಲಿದೆ.

ಸಮ್ಮೇಳನದಲ್ಲಿ ಅಹ್ಮದಿಯಾ ಮುಖ್ಯ ಪ್ರಚರಣಾ ಕಾರ್ಯದರ್ಶಿ ಮೌಲಾನ ಶರೀಫ್ ಅಹ್ಮದ್ ಸಾಹೆಬ್ ಅಮೀನಿ, ಮೌಲವಿ ಕರೀಮುದ್ದೀನ್ ಸಾಹೆಬ್, ಹೈದರಾಬಾದಿನ ಸೇಟ್ ಇಲ್ಯಾಸ್ ಸಾಹೆಬ್ ಎಂಬಿವರೂ ಭಾಗ ವಹಿಸುವರು.

# ಅಲ್‌ಹಾಜ್ ಹಝ್‌ರತ್ ಮೌಲಾನ ಅಬ್ದುರ್ರಹ್ಮಾನ್ ಸಾಹೆಬ್ ನಿಧನ ಹೊಂದಿದರು

## ( ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್ )

ಭಾರತದ ಅಹ್ಮದಿಯಾ ಸಂಘಟನೆಯ ಮುಖ್ಯ ಆಡಳಿತಾಧಿಕಾರಿಗಳಾದ ಹಝ್‌ರತ್ ಮೌಲಾನ ಅಬ್ದುರಹ್ಮಾನ್ ಸಾಹೆಬರು ತಾರೀಕು 21-2-1977ರಂದು ತಮ್ಮ 84ನೇ ವಯಸ್ಸಿನಲ್ಲಿ ಮೃತರಾದರು. ಅವರ ಸೋದರ ಮಾವನವರಾದ ಹಝ್‌ರತ್ ಹಾಫಿಝ್ ಹಾಮಿದ್ ಅಲಿ ಸಾಹೆಬರು ಅಹ್ಮದಿಯಾ ಸಂಘಟನೆಯ ಸ್ಥಾಪಕರ ಮೆಚ್ಚಿನ ಸೇವಕರಾಗಿದ್ದುದರಿಂದ ಅವರ ಜೊತೆಯಲ್ಲಿ ಇವರು ಖಾದಿಯಾನಿಗೆ ತಮ್ಮ ಬಾಲ್ಯ ಕಾಲದಲ್ಲಿಯೇ ಬಂದಿದ್ದರು. ಖಾದಿಯಾನಿನಲ್ಲಿ ಸ್ಥಾಪಿತವಾದ ಪ್ರಥಮ ಧಾರ್ಮಿಕಪಾಠಶಾಲೆಯಾದ "ಮದ್‌ರಸ ಅಹ್ಮದಿಯಾ"ದ ಪ್ರಥಮ ಇಬ್ಬರು ವಿದ್ಯಾರ್ಥಿಗಳಲ್ಲಿ ಇವರೊಬ್ಬರಾಗಿದ್ದರು. ಇವರು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿ ಕೊನೆಗೆ ಈ ಪಾಠ ಶಾಲೆಯ ಅಧ್ಯಾಪಕರೂ ಮುಖ್ಯೋಪಾಧ್ಯಾಯರೂ ಆದರು. ಪ್ರಪಂಚದಾದ್ಯಂತ ಇಸ್ಲಾಮಿನ ಪ್ರಚಾರಗೈಯುತ್ತಿರುವ ಮಿಶನರಿಗಳಲ್ಲಿ ಒಂದು ದೊಡ್ಡ ಭಾಗ ಇವರ ಶಿಷ್ಯಗಣದಲ್ಲಿ ಸೇರಿದ್ದರು. ಇವರು ಖಾದಿಯಾನಿನ ಮುನ್ಸಿಪಲ್ ಕಮಿಟಿಯ ಸದಸ್ಯರಾಗಿಯೂ, ವೈಸ್ ಪ್ರೆಸಿಡೆಂಟರಾಗಿಯೂ, ಪ್ರೆಸಿಡೆಂಟರಾಗಿಯೂ ಹಲವಾರು ವರ್ಷ ಸೇವೆಸಲ್ಲಿಸಿ ಬಹಳ ಜನಪ್ರಿಯರಾಗಿದ್ದರು. ಇವರು 1948ನೆಯ ಇಸವಿಯಿಂದ ಭಾರತದ ಸಂಘಟನೆಯ ಉನ್ನತಾಧಿಕಾರಿಗಳಾಗಿ ಸಮರ್ಥವಾಗಿ ಸೇವೆಸಲ್ಲಿಸುತ್ತಿದ್ದರು. ಧರ್ಮಶೀಲರಾದ ಈ ಮಹಾನುಭಾವರ ಮರಣದಿಂದ ಅಹ್ಮದಿಯಾ ಸಂಘಟನೆಗೆ ಉಂಟಾದ ನಷ್ಟವನ್ನು ಅಲ್ಲಾಹು ಬರ್ತಿಮಾಡಲೆಂದು ಪ್ರಾರ್ಥಿಸುತ್ತೇವೆ. ಮೃತರು ಮೂವರು ಗಂಡು ಮಕ್ಕಳನ್ನೂ ಇಬ್ಬರು ಹೆಣ್ಣು ಮಕ್ಕಳನ್ನೂ ಒಬ್ಬ ವಿಧವೆಯನ್ನೂ ತಮ್ಮ ಸ್ಮಾರಕವಾಗಿ ಬಿಟ್ಟುಹೋಗಿರುವರು. ಅಲ್ಲಾಹು ಇವರಿಗೂ ಸಂತಾಪಭರಿತರಾದ ಸಕಲರಿಗೂ ಮನಶ್ಶಾಂತಿಯನ್ನು ಕರುಣಿಸಲಿ.

ಪುಸ್ತಕ ವಿಭಾಗ

# ಯೇಸು ಕ್ರಿಸ್ತರು ಮೃತರಾದುದು ಎಲ್ಲಿ?

ಲೇಖಕ: ಮೌಲಾನ ಜಲಾಲುದ್ದೀನ್ ಶಮ್ಸ್, ಲಂಡನ್.

ಭಾಷಾಂತರ: ಅಬೂ ತಾಹಿರ್.

## ಅಧ್ಯಾಯ – 10

### ಪಾಪ ಪರಿಹಾರ ಸಿದ್ಧಾಂತ

ಹಳೆಯ ಸಂಪ್ರದಾಯದ ಜನರು ಅವರ ದೇವರಾದ ಎಡೋನಿಸ್, ಆಟ್ಟಿಸ್, ಓಸೈರಿಸ್, ಮಿತ್ರಾ ಮೊದಲಾದವರು ಕಷ್ಟವನ್ನನುಭವಿಸಿ, ಮೃತರಾಗಿ, ಪುನರುತ್ಥಾನಗೊಂಡರೆಂದೂ ಅವರು "ಮಾನವರ ಪಾಪಕ್ಕಾಗಿ" ಮೃತರಾದರೆಂದೂ ನಂಬಿದ್ದರೆಂದು ಹಿಂದಿನ ಅಧ್ಯಾಯದಿಂದ ವ್ಯಕ್ತವಾಗಿದೆ. ಪ್ರಾಚೀನ ಆಚಾರಗಳನ್ನು ಹೊಂದಿದ ಹಲವು ದೇಶಗಳ, ಪ್ರತ್ಯೇಕವಾಗಿ ಪಶ್ಚಿಮ ಆಫ್ರಿಕದ, ಪೂರ್ಣವಾಗಿ ನಾಗರಿಕತೆಯನ್ನು ಹೊಂದದ ಜನರು ಹಲವು ವಿಧದ ಬಲಿಯರ್ಪಣೆಗಳನ್ನು ಮಾಡುತ್ತಿದ್ದರು. ದಹೋಮಿಯಲ್ಲಿ ನೂರಾರು ಮಾನವರನ್ನು ಬಲಿಯರ್ಪಿಸಲಾಗುತಿತ್ತು. ಮೂರು ವಿಧದ ನರಬಲಿ ಈ ಪ್ರದೇಶಗಳಲ್ಲಿ ವಾಡಿಕೆಯಲ್ಲಿದ್ದುವು. ಅವುಗಳು ಈ ರೀತಿಯಾಗಿದ್ದುವು: 1) ಪ್ರಾಯಶ್ಚಿತ್ತದ ಹೋತದ ಮಾದರಿ ಬಲಿ. 2) ಸಂದೇಶ ವಾಹಕನ ಮಾದರಿ ಬಲಿ 3) ಪ್ರಾಯಶ್ಚಿತ್ತ ಬಲಿ. ಇವುಗಳ ಸಂಯೋಜಿತ ಕ್ರಮವೂ ನಡೆಯುತ್ತಿತ್ತು. ಬಲಿಯಾಗಿ ಅರ್ಪಿತನಾಗುತ್ತಿದ್ದ ವ್ಯಕ್ತಿಯನ್ನು ಬಂಧನದಲ್ಲಿಟ್ಟು ಚೆನ್ನಾಗಿ ತಿನ್ನಿಸುತ್ತಿದ್ದರು. ಅವರ ಪಾಪಗಳನ್ನು ಬದಲಾಯಿಸಲು ಜನರು ತಮ್ಮ ಕೈಗಳನ್ನು ಆತನ ಮೇಲೆ ಆತನನ್ನು ಮೆರವಣಿಗೆಯಲ್ಲಿ ಕೊಂಡುಹೋಗುವಾಗ ಇಡುತ್ತಿದ್ದರು. ಆತನ ತಲೆ ಬೂದಿಯಿಂದ ಮುಸುಕಲಾಗುತ್ತಿತ್ತು. ಬಲಿಕೊಡುವ ಸ್ಥಳದಲ್ಲಿ ಮೂರು ಆವರಣಗಳು ಇರುತ್ತಿದ್ದುವು. ಎರಡನೆಯ ಆವರಣಕ್ಕೆ ಮುಖಂಡರಿಗೂ ಪುರೋಹಿತರಿಗೂ ಮಾತ್ರ ಪ್ರವೇಶವಿತ್ತು. ಮೂರನೆಯ ಆವರಣದಲ್ಲಿ ಕೊಲೆಮಾಡುವ ಅಧಿಕಾರಿಯೂ ಆತನ ರಕ್ಷಕನೂ ಮಾತ್ರ ಇರುತ್ತಿದ್ದರು. ಕೊಲೆಯಾದವನ ರಕ್ತ ದೇವತೆಗಳಿಗೆ ಅರ್ಪಿತವಾಗುತ್ತಿತ್ತು.

(Encyclopaedia Brittanica, Ed II "Sacrifice")

ಮೃಗಗಳನ್ನು ಪಾಪಪರಿಹಾರಕ್ಕಾಗಿ ಬಲಿಕೊಡುವ ಸಂಪ್ರದಾಯ ಯೆಹೂದ್ಯ ಮತದಲ್ಲಿಯೂ ಕಾಣಬಹುದು. (ಇದು ಬಹುಶಃ ಬೇಬಿಲೋನಿನ ಮೂಢ ಸಂಪ್ರದಾಯದವರಿಂದ ಎರವಲು ಪಡೆದುದಾಗಿತ್ತು). ಆದರೆ ಯಹೂದಿಗಳು ಮಾನವನ ಬಲಿಯಲ್ಲಿ ನಂಬಿಕೆಯಿರಿಸಿರಲಿಲ್ಲ. ಮೆಸ್ಸಾಯನು ಬಂದು ಮಾನವರ ಪಾಪಕ್ಕಾಗಿ ಶಿಲುಬೆಯಲ್ಲಿ ಬಲಿಯರ್ಪಿತನಾಗುವನೆಂಬ ನಂಬಿಕೆಯೂ ಅವರಲ್ಲಿರಲಿಲ್ಲ.

ತನ್ನ ಮರಣದಿಂದ ಮೂಲಭೂತ ಪಾಪವು ಪರಿಹಾರಗೊಂಡು ದೇವರು ಮತ್ತು ಮಾನವರ ಮಧ್ಯೆ ಪುನರ್ಮಿಲನವೇರ್ಪಡಿಸುವಂತಹ ಪರಿಣಾಮ ಉಂಟಾಗುವುದೆಂಬ ಅರ್ಥದಲ್ಲಿ ಯೇಸುಕ್ರಿಸ್ತರು ಸ್ಪಷ್ಟವಾಗಿ ಏನನ್ನೂ ಹೇಳಲಿಲ್ಲ. ಅವರ ಮರಣ ಪಾಪಪರಿಹಾರಕ್ಕಾಗಿ ಎಂದು ತಿಳಿಯುವಂತೆ ಅವರೆಂದಿಗೂ ಉಪದೇಶಿಸಿರಲಿಲ್ಲ. "ಮನುಷ್ಯ ಕುಮಾರನು ಅನೇಕರನ್ನು ಬಿಡಿಸಿಕೊಳ್ಳುವುದಕ್ಕಾಗಿ ತನ್ನ ಪ್ರಾಣವನ್ನು ಈಡು ಕೊಡುವುದಕ್ಕೂ ಬಂದನು" (ಮಾರ್ಕ 10:45) ಎಂಬ ವಚನ ಯೇಸುಕ್ರಿಸ್ತರು ಸ್ವಂತ ಹೇಳಿದುದಲ್ಲ. ಅದು ಸುವಾರ್ತಾ ಲೇಖಕನು ವ್ಯಾಖ್ಯಾನ ರೂಪದಲ್ಲಿ ತಾನೇ ಹೇಳಿದುದಾಗಿದೆ. ಅವರು ಆರೀತಿ ಹೇಳಿದ್ದರೂ ಅದರ ಅರ್ಥ ಯಾವರೀತಿ ತಾನು ಇತರರಿಗೆ ಸಂತೋಷ ತರಲು

ಜೀವಿಸಿದರೋ ಅದೇರೀತಿ ಶಿಷ್ಯರನ್ನು ತನ್ನೊಂದಿಗೆ ಸಿಲುಕಿಸದೆ ತಾನುಮಾತ್ರ ಇದಕ್ಕಾಗಿ ಮೃತನಾಗಲು ಸಿದ್ಧನೆಂದಾಗಿದೆ.

"ಅಂತಿಮ ಭೋಜನ"ದ ಸಮಯ ಯೇಸು ಕ್ರಿಸ್ತರು ನುಡಿದ ವಚನಗಳು ಅವರ ಮರಣವು ಬಲಿಯೆಂದೂ ಪಾಪ ಪರಿಹಾರಕವೆಂದೂ ಸೂಚಿಸುತ್ತವೆಂದು ಊಹಿಸಲಾಗುತ್ತಿದೆ. ಆದರೆ ಇದು ತಪ್ಪು ವ್ಯಾಖ್ಯಾನವಾಗಿದೆ. ಸಂತ ಮಾರ್ಕನ ಸುವಾರ್ತೆಗಳಲ್ಲಿ ಯೇಸು ಕ್ರಿಸ್ತರು, ಪಾನಪಾತ್ರೆಯನ್ನು ಕೊಡುತ್ತಾ "ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ, ಇದು ಬಹು ಜನರಿಗೋಸ್ಕರ ಸುರಿಯಲ್ಪಡುವ ರಕ್ತ'' (ಮಾರ್ಕ 14:24) ಎಂದರೆಂದೂ ಮತ್ತು ಲೂಕನ ಸುವಾರ್ತೆಗಳಲ್ಲಿ "ಈ ಪಾತ್ರೆಯು ನಿಮಗೋಸ್ಕರ ಸುರಿಸಲ್ಪಡುವ ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ'' (ಲೂಕ 22:20) ಎಂದು ಹೇಳಿದರೆಂದೂ ಬರೆಯಲಾಗಿದೆ. ಅನಂತರ ಬರೆಯಲ್ಪಟ್ಟ ಮತ್ತಾಯನ ಸುವಾರ್ತೆಯಲ್ಲಿ ಮಾತ್ರ "ಪಾಪಗಳ ಕ್ಷಮೆಗಾಗಿ'' (ಮತ್ತಾಯ 26:28) ಎಂದು ಸೇರಿಸಲಾಗಿದೆ. ಕಾರ್‌ಲಿಸ್ಲೆಯ ಡೀನರಾಗಿದ್ದ (Dean of Carlisle) ಹೇಸ್ಟಿಂಗ್ ರಾಶ್‌ಡೆಲ್ಲರು ಈ ರೀತಿ ಬರೆದಿರುವರು: "ಅತ್ಯಂತ ಸಂಪ್ರದಾಯವಾದಿಯಾದ ವಿಮರ್ಶಕನು ಸಹ ಈ ಸೇರಿಸುವಿಕೆಯನ್ನು ಸುವಾರ್ತಾ ಲೇಖಕನ ಸ್ವಯಂ ಅಭಿಪ್ರಾಯವೆಂದು ಹೇಳದೆ ನಿವೃತ್ತಿ ಇಲ್ಲ. ಯೇಸು ಕ್ರಿಸ್ತರ ನುಡಿಗಳು ಅವರು ತನ್ನ ಸ್ನೇಹಿತರಿಗಾಗಿ, ತನ್ನ ತತ್ವಗಳಿಗಾಗಿ ಬೇಗನೇ ಸಾಯಲಿರುವರೆಂಬುದನ್ನು ಮಾತ್ರ ಸೂಚಿಸುತ್ತಿದ್ದುವು.'' (H. Rashdall, "TheIdea of Atonement''). ಸಂತ ಪೌಲನೂ ಆತನ ಸಹಾಯಕರೂ ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾದರೆಂಬ ಯಹೂದ್ಯರ ಹೇಳಿಕೆಗಳನ್ನು ಅನುಮೋದಿಸಿ ಅವರ ಮರಣ ಲೋಕದ ಪಾಪ ಪರಿಹಾರಕ್ಕೆ ಮಾರ್ಗವೆಂದು ಅನ್ಯ ಜಾತೀಯರಿಗೆ ಬೋಧಿಸಿ, ತಮ್ಮ ದೇವರ ಕುರಿತು ಮೊದಲೇ ಅವರಿಗಿದ್ದಂತಹ ವಿಶ್ವಾಸಗಳಿಗೆ ಸಮಾನವಾದ ವಿಶ್ವಾಸಗಳನ್ನು ಪ್ರಕಟಗೊಳಿಸಿದರು. ಪೌಲನು "ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು'' (ಕೊಲೊಸ್ಸೆಯವರಿಗೆ 1:14) ಎಂದನು. ಅವರ ರಕ್ತವನ್ನು "ಶಿಲುಬೆಯ ಮೇಲೆ ಸುರಿಸಿದ ರಕ್ತ"ವೆಂದೂ (ಕೊಲೊಸ್ಸೆಯವರಿಗೆ 1:20) "ಪ್ರೋಕ್ಷಣ ರಕ್ತ'' (ಇಬ್ರಿಯರಿಗೆ 12:24) ವೆಂದೂ ಕರೆದಿರುವನು. ಯೋಹಾನ ಈ ರೀತಿ ಹೇಳುತ್ತಾನೆ:—

"ಆತನು ನಮ್ಮ ಪಾಪಗಳನ್ನು ನಿವಾರಣ ಮಾಡುವ ನಮ್ಮ ಯಜ್ಞವಾಗಿದ್ದಾನೆ; ನಮ್ಮ ಪಾಪಗಳನ್ನು ಮಾತ್ರವಲ್ಲದೆ, ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣ ಮಾಡುತ್ತಾನೆ. (I ಯೋಹಾನ 2:2). ಬೈಬಲಿನ ವ್ಯಾಖ್ಯಾನ ಬರೆದ ವಿವಿಧ ಲೇಖಕರು ಈ ವಿಷಯದ ಕುರಿತು ಈ ರೀತಿ ವಿಮರ್ಶಿಸಿರುವರು:

"ಪಾಪದ ಕುರಿತು ದೇವರ ಹೃದಯದಲ್ಲಿ ಕೋಪವಿದ್ದಿತು. ಎಲ್ಲಾ ಪಾಪದ ಪರಿಹಾರಕ್ಕಾಗಿ ಕ್ರಿಸ್ತರು ಬಲಿಯಾದ ನಂತರ ಆತನ ಕೋಪವು ಹೋಗಿದ್ದು ಆತನು ನೀತಿವಂತನಾಗಿರುವನು.''

''ಆದಮನು ನಿಷಿದ್ಧ ಫಲವನ್ನು ತಿಂದು ಪಾಪ ಮಾಡಿದನೆಂದೂ ಆತನ ಪಾಪದಿಂದ ಆತನ ವಂಶಜರಾದ ಇಂದಿನ ಮಾನವರು ಸಹ ಪಾಪಿಗಳಾದರೆಂದೂ ಕ್ರೈಸ್ತರು ನಂಬುತ್ತಾರೆ ಈ ಪಾಪ ಪರಿಹಾರಕ್ಕಾಗಿ ದೇವರು ಕೃಪೆಯಿಂದ ತನ್ನ ಏಕಮಾತ್ರ ಪವಿತ್ರ, ಪಾಪರಹಿತ ಮತ್ತು ನಿಷ್ಕಳಂಕನಾದ ಮಗನನ್ನು ಕಳುಹಿಸಿದಾಗ ಆತನು ದೇವರೂ ಮಾನವನೂ ಆಗಿರುವ ಸ್ಥಿತಿಯಲ್ಲಿ ಕಷ್ಟವನ್ನನುಭವಿಸಿ ಮರಣಹೊಂದಿ, ಹೂಳಲ್ಪಟ್ಟು ತನ್ನ ತಂದೆಯು ನಮ್ಮೊಡನೆ ಸ್ನೇಹಬಂಧ ಸ್ಥಾಪಿಸುವಂತೆ ಬಲಿಯಾಗಿ ಮೂಲಪಾಪವನ್ನೂ ಅನಂತರದ ಪಾಪಗಳನ್ನೂ ಪರಿಹರಿಸಿದನೆಂದು ಕ್ರೈಸ್ತರು ನಂಬುತ್ತಾರೆ. (The Book of Common Prayer ನೋಡಿರಿ).

ಈ ಸಿದ್ಧಾಂತದ ಕುರಿತು ಅಭಿಪ್ರಾಯ ವ್ಯಕ್ತಗೊಳಿಸುವ ಮೊದಲು ಕ್ರೈಸ್ತ ಓದುಗರೊಡನೆ ನಾನೊಂದು ಮಾತು ಹೇಳಲು ಇಚ್ಛಿಸುತ್ತೇನೆ. ನನ್ನ ಸಹಬಾಂಧವರಾದ ನಿಮ್ಮ ಮನಸ್ಸನ್ನು ಯಾವುದೇ ರೀತಿ ನೋಯಿಸುವುದು ನನ್ನ ಉದ್ದೇಶ ಲಕ್ಷ್ಯವಲ್ಲ. ನಾನು ಈ ಪುಸ್ತಕ ರಚಿಸುವ ಮುಖ್ಯ ಉದ್ದೇಶ ಶಿಲುಬೆಯ ಸಂಭವ, ಪುನರುತ್ಥಾನ ಮತ್ತು ಪಾಪ ಪರಿಹಾರಗಳ ಕುರಿತು ಇಸ್ಲಾಮಿನ ವೀಕ್ಷಣದಿಂದ ಅಭಿಪ್ರಾಯ ವ್ಯಕ್ತಗೊಳಿಸಿ ನಮ್ಮ ಅಭಿಪ್ರಾಯಗಳ ವ್ಯತ್ಯಾಸದ ವಿಭಾಜಕ ಕೊಲ್ಲಿಯು ಸೇತುಬಂಧಕ್ಕೊಳಗಾಗಿ ನಾವು ಶಾರೀರಿಕವಾಗಿ ಒಂದಾಗಿರುವಂತೆಯೇ ಆತ್ಮಿಕವಾಗಿಯೂ ಒಂದಾಗುವಂತೆ ಮಾಡುವುದಾಗಿದೆ. ನಾನು ಪಾಪ ಪರಿಹಾರ ಸಿದ್ಧಾಂ

ತದ ಅಗ್ರಾಹ್ಯತೆಯನ್ನು ಸ್ಪರ್ಶಿಸಿ ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸುತ್ತೇನೆ.

1. ಪಾಪ ಪರಿಹಾರ ಸಿದ್ಧಾಂತವು ಮಾನವ ಜನಾಂಗ ಸುಮಾರು ಆರು ಸಾವಿರ ವರ್ಷ ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚು ಕಾಲ ಹಿಂದೆ ಜೀವಿಸಿದ್ದ ಆದಮ್ ಮತ್ತು ಹವ್ವಾರವರ ಸಂತತಿಯೆಂಬ ಊಹೆಯ ಮೇಲೆ ನಿರ್ಧಾರಗೊಂಡಿದೆ. ಆದರೆ ಮಾನವರು ಬೈಬಲಿನ ಆದಮ್ ಮತ್ತು ಹವ್ವಾರಿಗಿಂತ ಮೊದಲೇ ಭೂಮಿಯಲ್ಲಿದ್ದರೆಂದು ಆಧುನಿಕ ವಿಜ್ಞಾನಶಾಸ್ತ್ರ ವ್ಯಕ್ತಗೊಳಿಸಿದೆ. ಆದಿಕಾಂಡ (Genesis) 4ನೇ ಅಧ್ಯಾಯದ 14–17 ವಚನಗಳು ಆದಮನ ನಿವಾಸ ಸ್ಥಾನದಿಂದ ದೂರ ಸಹ ಜನರಿದ್ದರೆಂದೂ ಸೂಚಿಸುತ್ತವೆ. ನೋಡಿರಿ:– "ನೀನು ಈ ಹೊತ್ತು ನನ್ನನ್ನು ಸ್ವದೇಶದಿಂದ ಹೊರಡಿಸುತ್ತೀಯಲ್ಲಾ; ನಿನ್ನ ಸಾನ್ನಿಧ್ಯವು ತಪ್ಪಿತು; ನಾನು ಈ ಲೋಕದಲ್ಲಿ ಅಲೆಯುವವನೂ ದೇಶಭ್ರಷ್ಟನೂ ಆಗಬೇಕಾಯಿತು. ಇದಲ್ಲದೆ ನನ್ನನ್ನು ಕಂಡವರು ಕೊಲ್ಲುವರು ಎಂದು ಹೇಳಿದನು. ಅದಕ್ಕೆ ಯೆಹೋವನು–ಕಾಯಿನನ ಪ್ರಾಣವನ್ನು ತೆಗೆದವರಿಗೆ ಏಳರಷ್ಟು ಪ್ರತಿ ದಂಡನೆಯಾಗುವುದೆಂದು ಹೇಳಿ ಅವನನ್ನು ಕಂಡವರು ಕೊಲ್ಲ ಕೂಡದಂತೆ ಅವನ ಮೇಲೆ ಒಂದು ಗುರುತಿಟ್ಟನು. ಕಾಯಿನನು ಯೆಹೋವನ ಸನ್ನಿಧಾನದಿಂದ ಹೊರಟು ನೋದು ಎಂಬ ದೇಶದಲ್ಲಿ ವಾಸಿಸಿದನು; ಅದು ಏದೆನ್ ಸೀಮೆಗೆ ಮೂಡಲಲ್ಲಿರುವುದು. ಕಾಯಿನನು ತನ್ನ ಹೆಂಡತಿಯನ್ನು ಕೂಡಲು ಅವಳುಗರ್ಭಿಣಿಯಾಗಿ ಹನೋಕನನ್ನುಹೆತ್ತಳು. ಇದಲ್ಲದೆ ಕಾಯಿನನು ಒಂದು ಊರನ್ನು ಕಟ್ಟಿ ಅದಕ್ಕೆ ಹನೋಕ ಎಂದು ತನ್ನ ಮಗನ ಹೆಸರಿಟ್ಟನು." ಆ ಕಾಲದಲ್ಲಿ ಆದಮ ಮತ್ತು ಹವ್ವಾರಲ್ಲದೆ ಬೇರೆ ಮನುಷ್ಯರೂ ಜೀವಿಸಿರದಿದ್ದರೆ ಆದಮನ ಮಗನಾದ ಕಾಯಿನನು ಕೊಲ್ಲಲ್ಪಡದಂತೆ ದೇವರು ಆತನ ಮೇಲೆ ಚಿಹ್ನೆ ಇಡಲು ಕಾರಣವೇನು? ಆತನಿಗೆ ಪತ್ನಿ ಹೇಗೆ ದೊರೆತಳು? ಆತನಲ್ಲದೆ ಬೇರೆ ಜನರಿಲ್ಲದಿದ್ದರೆ ನಗರವನ್ನು ಹೇಗೆ ರಚಿಸಿದನು ?

ಆದಿಕಾಂಡ ಅಧ್ಯಾಯ 5ರಲ್ಲಿ ಮನುಷ್ಯರನ್ನು ದೇವರು ಗಂಡು–ಹೆಣ್ಣುಗಳಾಗಿ ಸೃಷ್ಟಿಸಿದನೆಂದೂ ಅವರನ್ನು ಆಶೀರ್ವದಿಸಿ ಆದಮರೆಂದು ಹೆಸರಿಟ್ಟನೆಂದೂ ಬರೆದಿದೆ.

ಇದರಿಂದ ಇತರ ಮನುಷ್ಯರಿಗೆ ಸಹ ಆದಮರೆಂಬ ಹೆಸರು ಕೊಡಲಾಯಿತೆಂದೂ ಅದು ಸೃಷ್ಟಿಸಲ್ಪಟ್ಟ ಎಲ್ಲಾ ಮನುಷ್ಯರಿಗೆ ಕೊಡಲಾದ ಒಂದು ಸಾಮಾನ್ಯ ನಾಮವಾಗಿದ್ದಿತೆಂದೂ ವ್ಯಕ್ತವಾಗುತ್ತದೆ. ಮನುಷ್ಯರೆಲ್ಲರೂ ಪಾಪ ಮಾಡಿದ ಆದಮನ ಮಕ್ಕಳಲ್ಲವೆಂದು ಸ್ಪಷ್ಟವಾದರೆ ಆದಮನ ಪಾಪದ ತಳಹದಿಯ ಮೇಲೆ ವಿರಚಿತವಾದ ಪಾಪ ಪರಿಹಾರ ಸಿದ್ಧಾಂತವು ಮುರಿದು ಬೀಳುವುದು.

2. ಒಬ್ಬ ಮನುಷ್ಯನು ತಿಳುವಳಿಕೆಯಿಂದ ಉದ್ದೇಶಪೂರ್ವಕವಾಗಿ ದೇವರ ಒಂದು ಆಜ್ಞೆಯನ್ನು ಉಲ್ಲಂಘಿಸಿದರೆ ಮಾತ್ರ ಪಾಪಿಯಾಗುತ್ತಾನಲ್ಲದೆ ಅಜ್ಞಾನದಿಂದ ವರ್ತಿಸಿದರೆ ಪಾಪಿಯಾಗಲಾರ. ಈ ದೃಷ್ಟಿಯಿಂದ ನೋಡಿದರೆ ಆದಮನೂ ಪಾಪಿಯಲ್ಲ. ಆದಿಕಾಂಡ (2:18)ರ ಪ್ರಕಾರ ದೇವರು ಆದಮನಿಗೆ ಸಂಗಾತಿಯನ್ನು ಕೊಡುವುದಾಗಿ ಹೇಳಿದನು. ದೇವರು ತಾನು ವಿರೋಧಿಸಿದ ಮರದ ಫಲವನ್ನು ಆದಮನು ತಿಂದುದರ ಕುರಿತು ಕೇಳಿದಾಗ ಆತನು:- "ನನ್ನ ಜೊತೆಯಲ್ಲಿರುವುದಕ್ಕೆ ನೀನು ಕೊಟ್ಟ ಸ್ತ್ರೀಯು ಆ ಮರದ ಹಣ್ಣನ್ನು ನನಗೆ ಕೊಟ್ಟಳು; ನಾನು ತಿಂದೆನು" ಎಂದು ಹೇಳಿದನು. ದೇವರು ಆ ಸ್ತ್ರೀಯನ್ನು ಕೇಳಿದಾಗ:– "ಸರ್ಪವು ನನ್ನನ್ನು ವಂಚಿಸಿತು. ನಾನು ತಿಂದೆನು" ಎಂದೆನ್ನುತ್ತಾಳೆ. ಸರ್ಪವು ಆಕೆಯನ್ನು ಮೋಸ ಗೊಳಿಸಿತೆಂದು ಆಕೆ ಹೇಳುವುದರಿಂದ ಆದಮನೊಡನೆ ಆಕೆ ಆ ಹಣ್ಣು ವಿರೋಧಿಸಲ್ಪಟ್ಟಮರದ್ದೆಂದುಹೇಳಲಿಲ್ಲವೆಂಬುದುಸ್ಪಷ್ಟ. ಆದುದರಿಂದ ಆದಮನು ಯಾವುದೇ ಪಾಪ ಮಾಡಲಿಲ್ಲ. ಸಂತ ಪೌಲನೂ ಸಹ ಇದೇ ಅಭಿಪ್ರಾಯ ಈ ರೀತಿ ವ್ಯಕ್ತಪಡಿಸಿರುವನು:–"ಆದಮನು ವಂಚನೆಗೆ ಒಳಬೀಳಲಿಲ್ಲ. ಸ್ತ್ರೀಯು ವಂಚನೆಗೆ ಒಳಬಿದ್ದು ಅಪರಾಧಿಯಾದಳು" (I ತಿಮೊಥೆಯನಿಗೆ 2:14). ಈಡನ್ ತೋಟದಿಂದ ಆದಮನನ್ನು ಹೊರಹಾಕಿದ ಕುರಿತು ಆದಿಕಾಂಡದಲ್ಲಿ ಕೊಟ್ಟ ಕಾರಣ ಹಾಸ್ಯಾಸ್ಪದವಾಗಿದೆ:– "ಮತ್ತು ಯೆಹೋವ ದೇವರು–ಈ ಮನುಷ್ಯನು ಒಳ್ಳೇದರ ಕೆಟ್ಟದರ ಭೇದವನ್ನರಿತು ನಮ್ಮಲ್ಲಿ ಒಬ್ಬನಂತನಾದನಲ್ಲಾ. ಇದರಿಂದ ಇವನು ಕೈಚಾಚಿ ಜೀವವೃಕ್ಷದ ಫಲವನ್ನು ಸಹ ತಿಂದು ಶಾಶ್ವತವಾಗಿ ಬದುಕುವವನಾಗಬಾರದು ಅಂದುಕೊಂಡು ಅವನು ಉತ್ಪತ್ತಿಯಾದ ಭೂಮಿಯನ್ನೇ ವ್ಯವಸಾಯ ಮಾಡುವುದಕ್ಕಾಗಿ

ಆವನನ್ನು ಏದೆನ್ ತೋಟದಿಂದ ಹೊರಡಿಸಿ ಬಿಟ್ಟನು.''
(ಆದಿಕಾಂಡ 3:22-23).

ದೇವರು ಮನುಷ್ಯರನ್ನು ''ಒಳ್ಳೆದರ ಮತ್ತು ಕೆಟ್ಟದ್ದರ'' ಕುರಿತು ಅಜ್ಞಾತನಾಗಲು ಸೃಷ್ಟಿಸಿದನೆ? ಆತನನ್ನು ದೇವರು ತನ್ನ ಸ್ವರೂಪದಲ್ಲಿ ಸೃಷ್ಟಿಸಲಿಲ್ಲವೇ? ಆದಿಕಾಂಡ (1:26). ಮೇಲಿನ ವಾಕ್ಯದಿಂದ ದೇವರು ಆದಮನನ್ನು ಈಡನ್ ತೋಟದಿಂದ ಹೊರಹಾಕಿದುದು ಜೀವವೃಕ್ಷದ ಫಲವನ್ನು ಆತನು ತಿನ್ನಬಹುದೆಂಬ ಹೆದರಿಕೆ ಯಿಂದಲ್ಲದೆ, ಪಾಪದ ಕಾರಣದಿಂದಲ್ಲವೆಂದು ಸ್ಪಷ್ಟ ವಾಗುತ್ತಿದೆ. ಆದುದರಿಂದ ಆದಮನ ಪಾಪದ ತಳ ಹದಿಯ ಮೇಲೆ ನಿರ್ಮಿತವಾದ ಪಾಪಪರಿಹಾರ ಸಿದ್ಧಾಂತವು ತಪ್ಪು.

ಪವಿತ್ರ ಖುರ್‌ಆನಿನಲ್ಲಿ ದೇವರು:– ''ನಾವು ಆದಮನಿಗೆ ಆಜ್ಞಾಪಿಸಿದುದನ್ನು ಆತನು ಮರೆತನು. ಆದರೆ ಆತನಲ್ಲಿ ಅವಿಧೇಯನಾಗುವ ಇಚ್ಛೆ ಇರಲಿಲ್ಲ'' (ಪವಿತ್ರ ಖುರ್‌ಆನ್ 20:115) ಎಂದು ಹೇಳಿರುವನು.

3. ಎಲ್ಲಾ ಮನುಷ್ಯರು ಪಾಪಿಗಳೆಂದೂ ನ್ಯಾಯ ಪ್ರಮಾಣದ ಅನುಸರಣೆಯಿಂದ ಯಾರೂ ಪುಣ್ಯ ವಂತರಾಗಲಾರರೆಂದೂ ಯೇಸುಕ್ರಿಸ್ತರು ಮೂಲಪಾಪ ಪರಿಹಾರಕ್ಕಾಗಿ ಮಾಡಿದ ಆತ್ಮಾರ್ಪಣೆಯ ಮೇಲೆ ವಿಶ್ವಾಸವಿಡುವುದರಿಂದ ಮಾತ್ರ ಪಾಪಪರಿಹಾರವಾಗುವು ದೆಂದೂ ಹೇಳುವುದು ಪೂರ್ಣವಾಗಿ ತಪ್ಪು. ಲೂಕ ಅಧ್ಯಾಯ 1:6ರಲ್ಲಿ ಜಕರೀಯಾ ಮತ್ತು ಅವರ ಪತ್ನಿಯೂ ''ಕರ್ತನ ಎಲ್ಲಾ ಆಜ್ಞೆಗಳನ್ನೂ ನೇಮನಿಷ್ಠೆ ಗಳನ್ನೂ ಕೈಗೊಂಡು ತಪ್ಪಿಲ್ಲದೆ ನಡಕೊಳ್ಳುತ್ತಾ ದೇವರ ದೃಷ್ಟಿಯಲ್ಲಿ ನೀತಿವಂತರಾಗಿದ್ದರು'' ಎಂದು ಬರೆಯ ಲಾಗಿದೆ. ಇದೇರೀತಿ ಯೇಸುಕ್ರಿಸ್ತರ ತಾಯಿ ರೋಮನ್ ಕೆಥೋಲಿಕರ ನಂಬಿಕೆಯಂತೆ ಪಾಪಿಯಾಗಿರಲಿಲ್ಲ.

4. "ಮೂಲ ಪಾಪ''ವೆಂಬುದು ಮತಾಂತರ ಗೊಂಡ ಯಹೂದ್ಯರಲ್ಲದವರ ಸಂಶೋಧನೆಯಾಗಿದ್ದಿತು. ಹಳೆಯ ಒಡಂಬಡಿಕೆಯಲ್ಲಿ ಇದು ಎಲ್ಲಿಯೂ ಉಲ್ಲೇಖಿಸ ಲ್ಪಟ್ಟಿಲ್ಲ. ಕ್ರೈಸ್ತ ಧರ್ಮ ಗುರುಗಳೂ ಈ ವಿಷಯದಲ್ಲಿ ಭಿನ್ನಾಭಿಪ್ರಾಯವನ್ನು ಹೊಂದಿರುವರು. "5ನೇ ಶತಮಾನದಲ್ಲಿ ಪೆಲಾಜಿಯುಸ್‌ನು (Pelagius) ಪ್ರತಿ ಯೊಬ್ಬ ಮನುಷ್ಯನು ತನ್ನ ಸ್ವಂತ ಪ್ರಯತ್ನದಿಂದ ಸುಶೀಲನಾಗಲು ಸಾಧ್ಯವೆಂದು ಹೇಳಿ ರೋಮಿನ ಚರ್ಚಿನ ಸದಸ್ಯರನ್ನು ಸನ್ಯಾಸ ಸ್ವೀಕರಿಸಲು ಆಮಂತ್ರಿಸಿದನು. ಆತನ ಸ್ನೇಹಿತನಾದ ಸಿಯೆಲಿಸ್ಟಿಯುಸನು(Caebestius) ಕ್ರಿ.ಶ. 412ರಲ್ಲಿ ತನ್ನ ವೇದವಿರುದ್ಧ ವಿಶ್ವಾಸಗಳಿಗಾಗಿ ಬಹಿಷ್ಕರಿಸಲ್ಪಟ್ಟನು. ಆತನು ಆದಮನನ್ನೂ ಆತನ ಸಂತ ತಿಯನ್ನೂ ಜನ್ಮತ:ಮಾನವ ಪ್ರಕೃತಿಹೊಂದಿರುವವರೆಂದು ಘೋಷಿಸಿ, ಆದಮನ ಪಾಪವು ವಂಶಪಾರಂಪರ್ಯವಾಗಿ ಮುಂದುವರಿಯುವುದೆಂಬುದನ್ನು ಅಲ್ಲಗಳೆದನು. ಹೊಸ ದಾಗಿ ಜನಿಸಿದವರೆಲ್ಲರೂ ನಿಷ್ಕಳಂಕರೆಂದು ಆತನು ಘೋಷಿಸಿದನು. ಯೇಸುಕ್ರಿಸ್ತರಿಗಿಂತ ಮೊದಲು ಸಹ ಎಷ್ಟೋ ಜನರು ಪಾಪವಿರಹಿತರಾಗಿದ್ದರೆಂದು ಸ್ಪಷ್ಟ ಪಡಿಸಿದನು. ಪೆಲಾಜಿಯುಸನು ಪಾಪವು ಒಂದು ಕರ್ಮ ವಾಗಿದೆಯೆಂದೂ ಅದು ಒಂದು ಸ್ಥಿತಿಯಲ್ಲವೆಂದೂ ತೀವ್ರವಾಗಿ ವಾದಿಸಿದ್ದನು. ಪಾಪವು ಮನುಷ್ಯನಿಗೆ ಕೊಡಲ್ಪಟ್ಟ ಸ್ವಾತಂತ್ರ್ಯದ ದುರುಪಯೋಗದಿಂದ ಜನಿಸುವುದೆಂದೂ, ಪ್ರತಿಯೊಬ್ಬ ಮನುಷ್ಯನು ಆತನ ಸ್ವಂತ ಕೃತ್ಯಗಳಿಗೆ ಮಾತ್ರ ಹೊಣೆಯಾಗಿ ಆ ಕೃತ್ಯಗಳಿ ಗಾಗಿ ಮಾತ್ರ ಶಿಕ್ಷಿಸಲ್ಪಡುವನೆಂದೂ ಆತನು ನಂಬಿದ್ದನು. (Encyclopaedia Brittanica Edn II)

ನಮ್ಮ ಮತವಾದ ಇಸ್ಲಾಮ್ ವಿವೇಕ ಮತ್ತು ಬುದ್ಧಿಯುಕ್ತವಾಗಿದೆ. ಅದು ಮೂಲಭೂತ ಪಾಪ ಸಿದ್ಧಾಂತವನ್ನು ಸ್ವೀಕರಿಸುವುದಿಲ್ಲ. ಪ್ರತಿಯೊಂದು ಮಗುವು ಪರಿಶುದ್ಧ ಪ್ರಕೃತಿ ಹೊಂದಿರುವುದೆಂದು ಅದು ಹೇಳುತ್ತದೆ. ಹಾಗೆ ಅಲ್ಲದೆ ಸಂತಪೌಲ ಹೇಳುವಂತೆ "ನಾವೆಲ್ಲರೂ... ಸ್ವಭಾವಸಿದ್ಧವಾಗಿ ದೇವರ ಕೋಪಕ್ಕೆ ಗುರಿಯಾದ'' * ಮಕ್ಕಳಲ್ಲ.

5. ನಿಷಿದ್ಧ ವೃಕ್ಷದ ಫಲವನ್ನು ತಿನ್ನುವುದರ ಮತ್ತು ಸ್ಪರ್ಶಿಸುವುದರ ಪ್ರತಿಫಲ ಮರಣವಾಗಿತ್ತು. ಆದಿಕಾಂಡದ 3:3 ವಚನ ಇದನ್ನು ಸ್ಪಷ್ಟಗೊಳಿಸುತ್ತಿದೆ. ಯೇಸುಕ್ರಿಸ್ತರು ಮೂಲ ಪಾಪದ ಪರಿಹಾರವಾಗಿ ಜೀವ ವನ್ನಿತ್ತಿದ್ದರೆ ಅನಂತರ ಯಾರೂ ಸಾಯಬಾರದಿತ್ತು. ಆದರೆ ಮರಣದಂಡನೆ ಈಗಲೂ ಜಾರಿಯಲ್ಲಿರುವುದು ಕಾಣುತ್ತೇವೆ. ಎಲ್ಲಾ ಜನರು ಸಾಯುತ್ತಿದ್ದಾರೆ. ಕ್ರೈಸ್ತ ಜನಾಂಗದವರು ಪ್ರಧಾನವಾಗಿ ಕ್ರೂರ ಮತ್ತು ಅತಿ ಶೀಘ್ರ ವಾಗಿ ಮರಣಗೊಳಿಸುವ ವಿಧಾನಗಳನ್ನು ಸೃಷ್ಟಿಸಿರುವರು.

---

* ಎಫೆಸದವರಿಗೆ (2:3)

6. ದೇವರು ತನ್ನ ನಿಷ್ಕಳಂಕ ಪುತ್ರನನ್ನು ಕೊಂದು ತನ್ನ ನ್ಯಾಯ ಮತ್ತು ಕರುಣೆಯನ್ನು ಸರಿ ಹೊಂದಿಸಿದನೆಂಬುದು ಖಂಡಿತವಾಗಿಯೂ ಸ್ವೀಕಾರ್ಯ ವಲ್ಲ. ''ಯಾವುದೇ ನೀತಿಶಾಸ್ತ್ರ ನಿರಪರಾಧಿಯನ್ನು ಅಪರಾಧಿಯನ್ನಾಗಿ ಸ್ವೀಕರಿಸಲಾರದು. ಆ ನಿರಪರಾಧಿ ತಾನೇ ಒಪ್ಪಿದರೂ ನೀತಿಶಾಸ್ತ್ರ ಸಮ್ಮತಿಸಲಾರದು. ನ್ಯಾಯವು ಇದನ್ನು ಅಂಗೀಕರಿಸುತ್ತದೆಯೆಂದು ಹೇಳು ವುದು ನ್ಯಾಯವನ್ನು ನಿಷೇಧಿಸಿದಂತಾಗುವುದು. ಆರೀತಿ ನಡೆದರೆ ಅದು ನ್ಯಾಯವಾಗಲಾರದು. ಅದು ವಿವೇಕ ಶೂನ್ಯವಾದ ಪ್ರತೀಕಾರ ಮಾತ್ರವಾಗುವುದು."

("The Age of Reason" By Thomas Paine.)

ಯೆಹೂದನು ಯೋಸೇಫನೊಡನೆ ತನ್ನನ್ನು ತನ್ನ ಕಿರಿಯ ಸಹೋದರನ ಬದಲಾಗಿ ಗುಲಾಮನನ್ನಾಗಿ ಮಾಡ ಬೇಕೆಂದು ಹೇಳಿದಾಗ ಯೋಸೇಫನು ಅದಕ್ಕೆ ಸಮ್ಮತಿಸದೆ ಈರೀತಿ ಹೇಳಿದನು "ಹಾಗೆ ಎಂದಿಗೂ ಆಗಬಾರದು. ಈ ಪಾತ್ರೆಯು ಯಾರ ಬಳಿಯಲ್ಲಿ ಸಿಕ್ಕಿತೋ ಅವನು ಮಾತ್ರವೇ ನನಗೆ ಗುಲಾಮನಾಗಬೇಕು. ನೀವಾದರೋ ಅಡ್ಡಿಯಿಲ್ಲದೆ ನಿಮ್ಮ ತಂದೆಯ ಬಳಿಗೆ ಹೋಗಬಹುದು'' (ಆದಿಕಾಂಡ 44:17). ಇದು ಶಿಕ್ಷೆ ಕೊಡಬೇಕಾದುದು ತಪ್ಪಿತಸ್ಥನಿಗೆ ಮಾತ್ರ ಎಂದು ಸೂಚಿಸುತ್ತದೆ.

ಪಾಪ ಪರಿಹಾರ ಸಿದ್ಧಾಂತ ಅಬದ್ಧವೆಂದೂ ಅದು ದೇವರ ನ್ಯಾಯಕ್ಕೆ ವಿರುದ್ಧವಾಗಿದೆಯೆಂದೂ ಹೇಳುವು ದಕ್ಕೆ ಇನ್ನೊಂದು ಆಧಾರವನ್ನು ಪರಿಶೀಲಿಸಿರಿ: ಇಸ್ರಾಯೇಲ್ಯರು ಬಂಗಾರದ ಒಂದು ಕರುವನ್ನು ದೇವರೆಂದು ಪೂಜಿಸಿದಾಗ ಮೋಶೆಯು ಅವರೊಡನೆ "ನೀವು ಮಹಾ ಪಾಪವನ್ನು ಮಾಡಿದಿರಿ. ಆದರೂ ನಾನು ಬೆಟ್ಟವನ್ನು ಹತ್ತಿ ಯೆಹೋವನ ಸನ್ನಿಧಿಗೆ ಹೋಗುವೆನು; ಒಂದು ವೇಳೆ ನೀವು ಮಾಡಿದ ಪಾಪಕೃತ್ಯಕ್ಕೆ ಕ್ಷಮಾಪಣೆಯು ನನ್ನ ಮೂಲಕ ದೊರಕೀತು'' ಎಂದು ಹೇಳಿ ಅನಂತರ ದೇವರೊಡನೆ "ನೀನು ಕರುಣವಿಟ್ಟು ಅವರ ಪಾಪವನ್ನು ಕ್ಷಮಿಸಬೇಕು. ಇಲ್ಲವಾದರೆ ನೀನು ಬರೆದಿರುವ [ಜೀವಿತದ] ಪಟ್ಟಿಯಿಂದ ನನ್ನ ಹೆಸರನ್ನು ಅಳಿಸಿಬಿಡ ಬೇಕೆಂದು ಕೇಳಿಕೊಳ್ಳುತ್ತೇನೆ'' ಎಂದು ನುಡಿದರು. ಇಲ್ಲಿ ಮೋಶೆ ತನ್ನನ್ನು ದೇವರಿಗೆ ಪಾಪ ಪರಿಹಾರವಾಗಿ ಸೂಚಿಸುತ್ತಾರೆ. ಯೇಸುಕ್ರಿಸ್ತರು ಈ ರೀತಿ ಯಾವಾ ಗಲಾದರೂ ಸೂಚಿಸಿಲ್ಲ. ಆದರೆ ದೇವರ ಉತ್ತರದಿಂದ ನಿರಪರಾಧಿಗಳನ್ನು ಶಿಕ್ಷಿಸುವುದು ನ್ಯಾಯ ವಿರುದ್ಧವೆಂದು ಸ್ಪಷ್ಟವಾಗುತ್ತದೆ: "ಯಾರಾರು ನನ್ನ ಮಾತನ್ನು ಮೀರಿ ಪಾಪ ಮಾಡಿದ್ದಾರೋ ಅವರ ಹೆಸರುಗಳನ್ನೇ ನನ್ನ ಬಳಿ ಯಿರುವ ಪಟ್ಟಿಯಿಂದ ನಾನು ಅಳಿಸಿಬಿಡುವೆನು'' ವಿಮೋಚನಾ ಕಾಂಡ(32:30–33). ನಿರಪರಾಧಿಯನ್ನು ಅಪರಾಧಿಯ ಬದಲಾಗಿ ಕೊಲ್ಲುವುದು ನ್ಯಾಯಕ್ಕೂ ದಯೆಗೂ ವಿರುದ್ಧವಾಗಿದೆ. ಈರೀತಿ ಮಾಡಿದರೆ ದೇವರು ತನ್ನ ದಯಾಗುಣ ಮತ್ತು ನ್ಯಾಯವನ್ನು ಸರಿ ಹೊಂದಿಸುವುದರ ಬದಲಾಗಿ ಎರಡನ್ನೂ ನಾಶಗೊಳಿಸಿ ದನು ಎಂದು ಹೇಳಬೇಕಾಗುತ್ತದೆ.

7. "ನೀತಿವಂತನಾದ ಯೇಸುಕ್ರಿಸ್ತನೆಂಬ ಸಹಾಯಕನು ನಮಗಿದ್ದಾನೆ. ಆತನು ನಮ್ಮ ಪಾಪಗ ಳನ್ನು ನಿವಾರಣ ಮಾಡುವ ಯಜ್ಞವಾಗಿದ್ದಾನೆ. ನಮ್ಮ ಪಾಪಗಳನ್ನು ಮಾತ್ರವಲ್ಲದೆ, ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣ ಮಾಡುತ್ತಾನೆ." (I ಯೊಹಾನನು 2:1-2) ಎಂಬ ವಾದವು ಗ್ರಾಹ್ಯವಲ್ಲ ಹಾಗೂ ಹಳೆ ಒಡಂಬಡಿಕೆಯ ಸಿದ್ಧಾಂತಕ್ಕೆ ವಿರುದ್ಧ ವಾಗಿದೆ. "ಶಿಷ್ಟನಿಗೆ ಪ್ರತಿಯಾಗಿ ದುಷ್ಟನೂ ಸತ್ಯವಂತ ರಿಗೆ ಬದಲಾಗಿ ದ್ರೋಹಿಯೂ ದಂಡನೆಗೆ ಈಡು'' (ಜ್ಞಾನೋಕ್ತಿಗಳು 21:18) ಎಂಬ ವಚನ ನೋಡಿರಿ.

8. ಯೇಸುಕ್ರಿಸ್ತರು ಶಿಲುಬೆಯಲ್ಲಿ ಮರಣ ಹೊಂದಿ ಮೂರು ದಿವಸ ನರಕದಲ್ಲಿ ಲೋಕದ ಪಾಪ ಪರಿಹಾರಕ್ಕಾಗಿ ಶಿಕ್ಷೆಯನ್ನು ಅನುಭವಿಸಿದರೆಂಬುದು ಅವರು ತನ್ನೊಂದಿಗೆ ಶಿಲುಬೆಯ ಶಿಕ್ಷೆಗೆ ಗುರಿಯಾದ ಇಬ್ಬರು ಕಳ್ಳರಲ್ಲೊಬ್ಬನಿಗೆ ಹೇಳಿದುದಕ್ಕೆ ವಿರುದ್ಧವಾಗಿದೆ: "ಈ ಹೊತ್ತೇ ನನ್ನ ಸಂಗಡ ಪರದೈಸಿನಲ್ಲಿರುವಿ ಎಂದು ನಿನಗೆ ಸತ್ಯವಾಗಿ ಹೇಳುತ್ತೇನೆ'' (ಲೂಕ 23:43) ಎಂಬ ವಚನ ಇದಕ್ಕೆ ಸಾಕ್ಷಿಯಾಗಿದೆ.

9. ಸಾತಾನನು ಹವ್ವಾಳನ್ನು ಸರ್ಪದ ರೂಪ ದಲ್ಲಿ ಮೋಸಗೊಳಿಸಿದುದರ ಪರಿಣಾಮವಾಗಿ ದೇವರು ತನ್ನನ್ನು ತನ್ನ ಪುತ್ರನಾದ ಯೇಸುವಿನ ರೂಪದಲ್ಲಿ ಶಿಲುಬೆಯಲ್ಲಿ ಪ್ರದರ್ಶಿಸಬೇಕಾಯಿತು. ಆದರೆ ಯಥಾರ್ಥವಾಗಿ ಸಾತಾನನು ಸರ್ಪದ ರೂಪದಲ್ಲಿ ಶಿಲುಬೆ ಯಲ್ಲಿ ಪ್ರದರ್ಶಿತನಾಗಬೇಕಾಗಿದ್ದಿತು. ಈರೀತಿಯಾಗಿ ಕ್ರೈಸ್ತರು ಸರ್ವಶಕ್ತನಾದ ದೇವರನ್ನು ಸೋತವನಾಗಿಯೂ ಸಾತಾನನನ್ನು ವಿಜಯಿಯನ್ನಾಗಿಯೂ ಚಿತ್ರಿಸುತ್ತಾರೆ.

10. ಯೇಸುಕ್ರಿಸ್ತರ ರಕ್ತಾರ್ಪಣೆಯಲ್ಲಿ ವಿಶ್ವಾಸ ಗೊಳ್ಳುವುದರಿಂದ ಮಾನವನು ಪಾಪದ ಶಿಕ್ಷೆಯಿಂದ ರಕ್ಷಿಸಲ್ಪಡುವನೆಂಬುದು ಈ ಕೆಳಗೆ ಕೊಟ್ಟಿರುವ ಯೇಸು ಕ್ರಿಸ್ತರ ಸ್ವಂತ ವಚನಗಳಿಗೆ ವಿರುದ್ಧವಾಗಿದೆ.

(a) "ಮನುಷ್ಯರು ಸುಮ್ಮನೆ ಆಡುವ ಪ್ರತಿಯೊಂದು ಮಾತಿನ ವಿಷಯವಾಗಿ ನ್ಯಾಯ ವಿಚಾರಣೆಯ ದಿನದಲ್ಲಿ ಉತ್ತರ ಕೊಡಬೇಕು. ನಿನ್ನ ಮಾತುಗಳಿಂದಲೇ ನೀತಿವಂತನೆಂದು ತೀರ್ಪು ಹೊಂದುವಿ. ನಿನ್ನ ಮಾತುಗಳಿಂದಲೇ ಅಪರಾಧಿಯೆಂದು ತೀರ್ಪು ಹೊಂದುವಿ" (ಮತ್ತಾಯ 12:36, 37).

(b) ಮತ್ತಾಯ 12:32ರಲ್ಲಿ ಯೇಸುಕ್ರಿಸ್ತರು ಈರೀತಿ ಹೇಳಿದರೆಂದು ಬರೆಯಲಾಗಿದೆ: "ಯಾವನಾದರೂ ಮನುಷ್ಯ ಕುಮಾರನಿಗೆ ವಿರೋಧವಾಗಿ ಮಾತಾಡಿದರೆ ಅದು ಅವನಿಗೆ ಕ್ಷಮಿಸಲ್ಪಡುವುದು. ಪವಿತ್ರಾತ್ಮನಿಗೆ ವಿರೋಧವಾಗಿ ಮಾತಾಡಿದರೆ ಅವನಿಗೆ ಇಹದಲ್ಲಾಗಲೀ ಪರದಲ್ಲಾಗಲೀ ಕ್ಷಮಿಸಲ್ಪಡುವುದಿಲ್ಲ".

(c) "ಹಾಗಾದರೆ ನಿನ್ನ ಕೈಯಾಗಲಿ ನಿನ್ನ ಕಾಲಾಗಲಿ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕಡಿದು ಬಿಸಾಟುಬಿಡು. ಎರಡು ಕೈ ಎರಡು ಕಾಲು ಉಳ್ಳವನಾಗಿದ್ದು ನಿತ್ಯವಾಗಿರುವ ಬೆಂಕಿಯಲ್ಲಿ ಹಾಕಿಸಿ ಕೊಳ್ಳುವುದಕ್ಕಿಂತ ನಿನ್ನ ಕೈಕಾಲು ಕಳಕೊಂಡವನಾಗಿ ಜೀವನದಲ್ಲಿ ಸೇರುವುದು ನಿನಗೆ ಉತ್ತಮ." (ಮತ್ತಾಯ 18:8, 9)

(d) "ಯುಗದ ಸಮಾಪ್ತಿಯಲ್ಲಿ.... ದೇವದೂತರು ಹೊರಟುಬಂದು ನೀತಿವಂತರೊಳಗಿಂದ ಕೆಟ್ಟವರನ್ನು ಬೇರೆ ಮಾಡಿ ಬೆಂಕೀಕೊಂಡದಲ್ಲಿ ಹಾಕುವರು. ಅಲ್ಲಿ ಗೋಳಾಟವೂ ಕಟಕಟನೆ ಹಲ್ಲು ಕಡಿಯೋಣವೂ ಇರುವವು" (ಮತ್ತಾಯ 13:49-50).

(e) ಯೇಸುಕ್ರಿಸ್ತರು ಹೇಳಿದರು: "ನೀವು ಜನರ ತಪ್ಪುಗಳನ್ನು ಕ್ಷಮಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ನಿಮ್ಮ ತಪ್ಪುಗಳನ್ನೂ ಕ್ಷಮಿಸುವನು. ಆದರೆ ನೀವು ಜನರ ತಪ್ಪುಗಳನ್ನು ಕ್ಷಮಿಸದೆ ಹೋದರೆ ನಿಮ್ಮ ತಂದೆ ಸಹ ನಿಮ್ಮ ತಪ್ಪುಗಳನ್ನು ಕ್ಷಮಿಸುವುದಿಲ್ಲ" (ಮತ್ತಾಯ 6:14, 15).

(f) ಮತ್ತಾಯ 25:31-46ರಲ್ಲಿ ಶಿಷ್ಟ ಜನರು ಈ ಲೋಕದಲ್ಲಿ ಮಾಡಿದ ಸುಕೃತ್ಯಗಳ ಫಲವಾಗಿ ಶಾಶ್ವತ ಜೀವನ ಹೊಂದುವರೆಂದೂ ದುಷ್ಟರು ತಮ್ಮ ದುಷ್ಕೃತ್ಯಗಳಿಂದಾಗಿ ಶಾಶ್ವತ ಶಿಕ್ಷೆಯನ್ನನುಭವಿಸುವರೆಂದೂ ಬರೆಯಲಾಗಿದೆ. ಈ ಇಬ್ಬಗೆಯ ಜನರೆಲ್ಲರೂ ಕ್ರೈಸ್ತರಷ್ಟೇ? ಈ ಮಾತುಗಳು ಸರಿಯಾದರೆ ಪಾಪಪರಿಹಾರ ಸಿದ್ಧಾಂತ ಹೇಗೆ ಸರಿಯೆಂದು ಸ್ವೀಕೃತವಾಗಬಲ್ಲದು?

11. ತೋಮಸ್ ಪೈನ್ ಬರೆಯುತ್ತಾನೆ:—

"ನಾನು ಏಳೆಂಟು ವರ್ಷ ಪ್ರಾಯದವನಾಗಿದ್ದಾಗ ನನ್ನ ಸಂಬಂಧಿಕನಾದ ಒಬ್ಬ ಕ್ರೈಸ್ತ ಪುರೋಹಿತನು, 'ದೇವ ಪುತ್ರನ ಮರಣದಿಂದ ಮಾನವರ ಪಾಪಪರಿಹಾರ' ಎಂಬ ವಿಷಯದ ಕುರಿತು ಓದಿದ ಪ್ರವಚನ ನನಗೆ ಈಗಲೂ ನೆನಪಿದೆ. ನಾನು ಈ ಪ್ರವಚನ ಕೇಳಿದ ನಂತರ ನಮ್ಮ ತೋಟಕ್ಕೆ ಹೋಗುತ್ತಿರುವಾಗ ನಾನು ಕೇಳಿದ ಪ್ರವಚನದ ವಿಷಯದ ಕುರಿತು ಆಲೋಚಿಸುತ್ತಾ ಹೋದೆ. ಇದು ದೇವರನ್ನು ಒಬ್ಬ ಅತ್ಯಂತ ಉದ್ರೇಕಿತ ವ್ಯಕ್ತಿಯನ್ನಾಗಿ ಚಿತ್ರಿಸುತ್ತದೆಯೆಂದೂ ಸೇಡುತೀರಿಸುವುದಕ್ಕೆ ಬೇರೆ ಯಾವ ದಾರಿಯೂ ಕಾಣದಿದ್ದಾಗ ತನ್ನ ಮಗನನ್ನೇ ಕೊಂದ ಉದ್ರೇಕಿತ ಮನುಷ್ಯನಂತೆ ದೇವರನ್ನು ಚಿತ್ರಿಸಲಾಗಿದೆಯೆಂದೂ ಇಂತಹ ಕಾರ್ಯ ಮಾಡಿದ ವ್ಯಕ್ತಿ ಮನುಷ್ಯನಾಗಿದ್ದರೆ ಗಲ್ಲುಗಂಭಕ್ಕೇರಿಸಲ್ಪಡಲು ಮಾತ್ರ ಯೋಗ್ಯನಾಗಿರುವಾಗ ಇಂತಹ ಮತ ಪ್ರವಚನಗಳನ್ನು ಏತಕ್ಕಾಗಿ ಮಾಡುತ್ತಾರೆಂದು ನಾನು ಆಲೋಚಿಸಿದೆ. ಇದು ಬಾಲಿಶವಾದ ಒಂದು ಚಿಂತೆಯಾಗಿರಲಿಲ್ಲ. ನನ್ನ ಅಭಿಪ್ರಾಯದಲ್ಲಿ ದೇವರು ಇಂತಹ ನಿಕೃಷ್ಟ ಕೆಲಸ ಮಾಡುವವನಾಗಿರಲಿಲ್ಲ. ದೇವರು ಇಂತಹ ಕೆಲಸ ಮಾಡುವುದಕ್ಕೆ ನಿರ್ಬಂಧಿತನಾಗುವುದಕ್ಕಿಂತ ಎಷ್ಟೋ ಮಹತ್ವಶಾಲಿಯೆಂದೂ ನನ್ನ ಅಭಿಪ್ರಾಯವಾಗಿತ್ತು. ನಾನು ಇದೇರೀತಿ ಇಂದಿನ ತನಕ ನಂಬುತ್ತೇನೆ. ಯಾವುದಾದರೂ ಮತದಲ್ಲಿ ಒಂದು ಮಗುವಿನ ಮನಸ್ಸನ್ನು ಗಾಬರಿಗೊಳಿಸುವ ಯಾವುದಾದರೂ ಸಂಗತಿ ಇದ್ದರೆ ಅದು ಸದ್ಧರ್ಮವಾಗಲಾರದು" (The Age of Reason ಪುಟ 41).

12. ಸಾಮಾನ್ಯವಾಗಿ ಎಲ್ಲಾ ಕ್ರೈಸ್ತರು ಹೇಳುವಂತೆ ಒಬ್ಬ ಕ್ರೈಸ್ತ ಈ ರೀತಿಯೂ ಹೇಳಬಹುದು:—

"ಒಬ್ಬನಿಗೆ ನಾನು ಹಣ ಕೊಡಬೇಕಾಗಿದ್ದು ಅದನ್ನು ಕೊಡಲು ನನಗೆ ಸಾಧ್ಯವಿರದೆ ಇರುವಾಗ ಆತನು ನನ್ನನ್ನು ಸೆರೆಮನೆಗೆ ಕಳುಹಿಸುವ ಎಚ್ಚರಿಕೆಯನ್ನು ಕೊಟ್ಟರೆ ಆ ಸಾಲವನ್ನು ಇನ್ನೊಬ್ಬನು ನನ್ನ ಪರವಾಗಿ ತೀರಿಸಬಲ್ಲನು. ಈ ರೀತಿ ದೇವಪುತ್ರರಾದ

ಯೇಸುಕ್ರಿಸ್ತರು ನಮ್ಮ ಪಾಪದ ಪರಿಹಾರವಾಗಿ ಮೂರು ದಿವಸ ಮತ್ತು ಮೂರು ರಾತ್ರೆ ನರಕದಲ್ಲಿ ವಾಸಿಸಿ ನಮ್ಮ ಪಾಪಕ್ಕೆ ಪರಿಹಾರವೊದಗಿಸಿದರು.'' ಪಾಪವು ಒಂದು ಸಾಲದಂತೆಯೆಂದೂ ಮತ್ತು ಸಾಲ ನೀಡಿದವನು ದೇವರ ಗುಣಗಳಿಗೆ ವಿರುದ್ಧವಾಗಿ ಶಕ್ತಿವಿಹೀನನೂ, ಬಡವನೂ, ನಿಕೃಷ್ಟನೂ, ಸೇಡು ತೀರಿಸಲು ಉತ್ಸುಕನೂ ತಾನು ಯಾರಿಗೆ ಸಾಲ ನೀಡಿರುವನೋ ಆತನ ಬಲಹೀನತೆಯನ್ನು ಮನಗಂಡು ಸಹ ಕ್ಷಮಿಸದವನೂ, ಅಥವಾ ಸಾಲ ತೀರಿಸಲು ಅವಧಿಯನ್ನು ಕೊಡಲು ಒಪ್ಪದವನೂ ಆದರೆ ಈ ವಾದ ಸರಿ. ಆದರೆ ಪಾಪವನ್ನು ಒಂದು ಅಕ್ರಮ ಕೃತ್ಯವೆಂದು ಭಾವಿಸುವುದಾದರೆ (ಎಂದರೆ ದೇವರ ಆಜ್ಞೆಗಳನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿದರೆ) ಯಾವುದೇ ನ್ಯಾಯಶಾಸ್ತ್ರವು ಅಪರಾಧಿಯನ್ನಲ್ಲದೆ ಇನ್ನ್ಯಾರನ್ನೂ ಶಿಕ್ಷಿಸಲಾರದು. ಪಾಪವನ್ನು ಒಂದು ಆತ್ಮಿಕ ರೋಗವೆಂದು ಗ್ರಹಿಸುವುದಾದರೆ ಆ ರೋಗವು ನಿವಾರಣೆ ಹೊಂದಬೇಕಾದರೆ ರೋಗಿಯಾದ ಪಾಪಿಯನ್ನೇ ಮದ್ದಿನಿಂದ ಶುಶ್ರೂಷಿಸಬೇಕಾಗಿದೆ. ಯೇಸುಕ್ರಿಸ್ತರು ಸಹ ತನ್ನನ್ನು ಪಾಪ ಪರಿಹಾರಕ್ಕಾಗಿ ದೇವರಿಗೊಪ್ಪಿಸಿರಲಿಲ್ಲ. ತನ್ನನ್ನು ಮರಣದಿಂದ ರಕ್ಷಿಸಬೇಕೆಂದು ಅವರು ವಿನೀತರಾಗಿ ಪ್ರಾರ್ಥಿಸುತ್ತಿದ್ದರು. ಕೊನೆಗೆ ಅವರು ಬಹಳ ಹೃದ್ರಾವಕವಾಗಿ "ನನ್ನ ತಂದೆಯೇ, ನಾನು ಕುಡಿದ ಹೊರತು ಈ ಪಾತ್ರೆ ಬಿಟ್ಟು ಹೋಗಕೂಡದಾಗಿದ್ದರೆ ನಿನ್ನ ಚಿತ್ತವೇ ಆಗಲಿ'' (ಮತ್ತಾಯ 26:42) ಎಂದರು.

ಅನಂತರ ಅವರು ಹೃದಯ ಭೇದಿಸುವಂತಹ ಮಹಾ ಧ್ವನಿಯಿಂದ ಈ ರೀತಿ ಸಹ ಹೇಳಿದರು: "ನನ್ನ ದೇವರೇ, ನನ್ನದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ?'' (ಮತ್ತಾಯ 27 : 46). ತನ್ನ ರಹಸ್ಯ ಸ್ಥಳವನ್ನು ಯಹೂದಿಗಳಿಗೆ ತೋರಿಸಿದ ಯೂದನ ಕುರಿತು "ಆ ಮನುಷ್ಯನು ಹುಟ್ಟದಿದ್ದರೆ ಅವನಿಗೆ ಒಳ್ಳೇದಾಗಿತ್ತು." (ಮತ್ತಾಯ 26:24) ಎಂದರು.

ಯೇಸು ಕ್ರಿಸ್ತರು ತನ್ನನ್ನು ಪಾಪಿಗಳ ಪರವಾಗಿ ಪರಿಹಾರವಾಗಿ ಅರ್ಪಿಸಿದರೆಂದು ಯಾರಿಗಾದರೂ ಹೇಳಲು ನೀತಿಪೂರ್ವಕವಾಗಿ ಸಾಧ್ಯವಿದೆಯೋ ?

ಈ ಕೃತ್ರಿಮ ಧರ್ಮಸಿದ್ಧಾಂತದ ಕಾರಣದಿಂದಾಗಿ ಕ್ರೈಸ್ತಧರ್ಮವನ್ನವಲಂಭಿಸುತ್ತಿರುವ ಯುರೋಪು ನಾಸ್ತಿಕವಾದದ ಕೇಂದ್ರವಾಗುತ್ತಿದ್ದು ಪಾಪದ ಭೀತಿಯು ಅಲ್ಲಿ ನಿರ್ನಾಮವಾಗುತ್ತಿದೆ.

ರೆವರೆಂಡ್ ಎಚ್. ಆರ್. ಗೌ (H.R.Gough) ಈ ರೀತಿ ಹೇಳುತ್ತಾರೆ: "ನಮ್ಮವರಲ್ಲಿ ಹೆಚ್ಚಿನವರಿಗೆ ಪಾಪದ ಪ್ರಜ್ಞೆಯೇ ಇಲ್ಲ. ಅವರು ದುಶ್ಶೀಲರೆಂದು ಹೇಳಬಾರದಾದರೂ ಅವರಿಗೆ ಶೀಲವೆಂದರೇನೆಂದು ತಿಳಿಯದು. ಮನಸ್ಸಾಕ್ಷಿಯು ದೀರ್ಘಕಾಲದ ಅವಿಧೇಯತೆಯ ಕಾರಣದಿಂದ ನಿಷ್ಕ್ರಿಯೆಗೊಂಡುದರಿಂದ ಯಾವುದು ಸರಿ ಯಾವುದು ತಪ್ಪು ಎಂಬ ಬೋಧವೇ ಅವರಿಗಿಲ್ಲ. ನಮಗೆ ನಮ್ಮ ಪಾಪದ ಕುರಿತು ಯಾವುದೇ ನಾಚಿಕೆಯಿಲ್ಲ, ಜನರು ಈ ಸ್ಥಿತಿಗೆ ಬರುವಾಗ ನಾಶವು ಸಮೀಪವಿದೆ'' (The Watchman, London, March 1941, Page 93).

ಜನರು ಪಾಪದ ಕುರಿತು ಏಕೆ ನಾಚಿಕೆಗೊಳ್ಳಬೇಕು? ದೇವರು ದಯಾಮಯನಾಗಿ ನಿರಪರಾಧಿಯಾದ ತನ್ನ ಮಗನ (ಅಥವಾ ತನ್ನ) ರಕ್ತವನ್ನೇ ಪಾಪಪರಿಹಾರಕ್ಕಾಗಿ ಸುರಿಸಿಲ್ಲವೇ? ಈ ಸಿದ್ಧಾಂತವು ಜನರಿಗೆ ಪಾಪ ಮಾಡಲು ಪೂರ್ಣ ಉಚಿತವಾದ ಲೈಸನ್ಸನ್ನು ನೀಡಿದೆ. ಯುರೋಪು ಮತ್ತು ಅಮೇರಿಕದ ಕ್ರೈಸ್ತರು ಇತರರಿಗಿಂತ ಹೆಚ್ಚಾಗಿ ಅನೀತಿಕರ ಪಾಪಕೃತ್ಯಗಳನ್ನು ಕೈಗೊಳ್ಳಲು ಈ ಸಿದ್ಧಾಂತ ಸಹಕರಿಸಿದೆ. ಸಾಮಾನ್ಯ ಕ್ರೈಸ್ತರ ಮಾತು ಬಿಡಿ; ಪ್ರಚಾರಕರೂ ಪುರೋಹಿತರೂ ಇದಕ್ಕೆ ಹೊರತಾಗಿಲ್ಲ.

ಈ ಕೆಳಗಿನ ಪುಸ್ತಕಗಳನ್ನು ಓದಿದರೆ ಚೆನ್ನಾಗಿ ಇದು ಮನದಟ್ಟಾದೀತು.

(1) Crimes of Preachers
-Published in Newyork.
"ಉಪದೇಶಕರ ಅಪರಾಧಗಳು''-ನ್ಯೂಯೋರ್ಕ್‌ನಲ್ಲಿ ಪ್ರಕಟಿತ.

(2) Crimes of Christianity -By
J. M. Wheeler (London 1887)
ಕ್ರೈಸ್ತಮತದ ಅಪರಾಧಗಳು –ಜೆ. ಎಂ. ವೀಲರ್ ಬರೆದುದು–ಲಂಡನ್.

(3) Life-By the nun of Kenmere,
(London)
ಜೀವನ- ಕೆನ್‌ಮೇರಿನ ಸನ್ಯಾಸಿನಿ ಬರೆದುದು.

(4) Inside the Church of Rome,
(London)
ರೋಮಿನ ಚರ್ಚಿನ ಅಂತರಂಗದಲ್ಲಿ.

(5) Life inside the Church of
England (London)
ಇಂಗ್ಲೆಂಡಿನ ಚರ್ಚಿನ ಒಳಗಿನ ಜೀವಿತ.

(6) Why is Christianity a Failure? By a Churchman, Published by Ideal Publishing Union Ltd; London.
ಕ್ರೈಸ್ತ ಮತವೇಕೆ ಪರಾಜಿತ?

ಈ ಪುಸ್ತಕಗಳಲ್ಲಿ ಇವೆಲ್ಲಾ ಪೂರ್ಣವಾಗಿ ವಿವರಿಸಲ್ಪಟ್ಟಿವೆ.

ಒಟ್ಟಾರೆ ಹೇಳುವುದಾದರೆ ಪಾಪವು ಈಗಲೂ ಉಳಿದುಕೊಂಡಿದೆ (ಮುಖ್ಯವಾಗಿ ಕ್ರೈಸ್ತ ಲೋಕದಲ್ಲಿ ಹೆಚ್ಚಾಗಿದೆ). ಆದರೆ ಪೌಲಿಯನ್ ಕ್ರೈಸ್ತ ಧರ್ಮವು ಈ ಕ್ರೈಸ್ತರಿಗೆಅವರ ಪಾಪದ ಪರಿಹಾರಕ್ಕೆ ಯಾವುದೇ ಮದ್ದನ್ನು ಸೂಚಿಸುವುದಿಲ್ಲ. ಸಂತ ಪೌಲ ಹೇಳುವುದನ್ನು ನೋಡಿರಿ: "ಸತ್ಯದ ಪರಿಜ್ಞಾನವನ್ನು ನಾವು ಹೊಂದಿದ ಮೇಲೆ ಬೇಕೆಂದು ಪಾಪ ಮಾಡಿದರೆ ಪಾಪ ಪರಿಹಾರಕ್ಕಾಗಿ ಇನ್ನಾವ ಯಜ್ಞವೂ ಇರುವುದಿಲ್ಲ" (ಇಬ್ರಿಯರಿಗೆ 10:26). ಶಿಲುಬೆಗೆ ಕೊಡಲ್ಪಟ್ಟ ಕ್ರೈಸ್ತರನ್ನು ನಂಬಿದ ನಂತರ ಪಾಪ ಮಾಡಿದ ಕ್ರೈಸ್ತರು ಮೇಲಿನ ವಚನದಂತೆ ಪಾಪಿಗಳಾಗಿಯೇ ಮರಣ ಹೊಂದುವರು. ಅವರಿಗೆ ಮೋಕ್ಷವು ಸಾಧ್ಯವಲ್ಲ.

## ಸರಿಯಾದ ಪಾಪ ಪರಿಹಾರ

1943ರಲ್ಲಿ, ಚೈನಾದಲ್ಲಿರುವ ಮುಸ್ಲಿಮ್ ಸ್ನೇಹಿತರ ಸಂಘ (Society of Friends of Muslims in China) ದ ಸೆಕ್ರೆಟರಿ ಒಂದು ಪತ್ರದಲ್ಲಿ ನನ್ನೊಡನೆ, "ದೇವರು ಕ್ರೈಸ್ತರ ರೂಪದಲ್ಲಿ ಬಂದು ಪಾಪವನ್ನು (ಶಿಕ್ಷೆಯನ್ನು ಮಾತ್ರವಲ್ಲ ಪಾಪವನ್ನೂ) ತನ್ನ ಮೇಲೆ ಹೊರಿಸಿಕೊಂಡರು. ಆದುದರಿಂದ ಯೇಸು ಕ್ರಿಸ್ತರು ಮರಣಹೊಂದದೆ ಪಾಪವು ನ್ಯಾಯಯುತವಾಗಿ ಕ್ಷಮಿಸಲ್ಪಡಲಾರದು" ಎಂದಾಗ ನಾನು ಉತ್ತರ ರೂಪವಾಗಿ ಈರೀತಿ ಬರೆದೆನು:

"ಇದರ ಅರ್ಥ ದೇವರು ಆತ್ಮಹತ್ಯೆಮಾಡಿ ನರಕಕ್ಕೆ ಹೋಗಿ ಮೂರು ದಿವಸ ರಾತ್ರೆ-ಹಗಲಿದ್ದನೆಂದೂ ತನ್ನ ಸೃಷ್ಟಿಯನ್ನು ಶಿಕ್ಷಿಸದೆ ಅವರ ಪಾಪವನ್ನು ಕ್ಷಮಿಸಲು ಆತನಿಗೆ ಹಕ್ಕಿಲ್ಲವೆಂದೂ ಆತನು ದಯಾಮಯನೂ ಕರುಣಾನಿಧಿಯೂ ಅಲ್ಲವೆಂದೂ, ತನಗಿಂತ ಮೇಲಧಿಕಾರದವರು ನಿಶ್ಚಯಿಸಿದ ಕಾನೂನಿನ ಪ್ರಕಾರ ನ್ಯಾಯ ತೀರ್ಮಾನ ಮಾಡುವ ಒಬ್ಬ ಸಾಮಾನ್ಯ ನ್ಯಾಯಾಧಿಪತಿಯಂತೆಯೆಂದೂ ವ್ಯಕ್ತವಾಗುತ್ತಿದೆ. ಒಬ್ಬ ನಿರಪರಾಧಿಯನ್ನು ಇತರರಿಗಾಗಿ ಕೊಲ್ಲುವುದು ದಯಾಗುಣವೇ? ಒಬ್ಬನೇ ಮಗನಿರುವ ಒಬ್ಬ ದಯಾರ್ದ್ರನಾದ ತಂದೆಯೊಡನೆ ಕೇಳಿರಿ, ಇದು ಎಂತಹ ದಯೆ ಮತ್ತು ನ್ಯಾಯವೆಂದು. ಯೇಸುಕ್ರಿಸ್ತರ ರಕ್ತದಿಂದ ಪಾಪವು ತೊಳೆಯಲ್ಪಡುವುದೆಂಬುದು ಅವಿವೇಕವಾಗಿದ್ದು ಎಲ್ಲಾ ವಿಧದ ದಯೆ ಮತ್ತು ನ್ಯಾಯ ಸಿದ್ಧಾಂತಗಳಿಗೆ ವಿರುದ್ಧವಾಗಿದೆ.

ಇಸ್ಲಾಮ್ ಲೋಕದ ಮುಂದಿರಿಸಿದ ದೇವರು ಅತಿ ದಯಾಮಯನೂ, ಕರುಣಾನಿಧಿಯೂ, ತನ್ನ ಸೇವಕರನ್ನು ಅತಿಯಾಗಿ ಕ್ಷಮಿಸುವವನೂ ಆಗಿದ್ದಾನೆ. ಪವಿತ್ರ ಖುರ್‌ಆನಿನಲ್ಲಿ ದೇವರು ಹೇಳುವುದನ್ನು ನೋಡಿರಿ:-

'ನನ್ನ ದೂತನೇ, ನೀನು ಹೇಳು: ತಮ್ಮ ಆತ್ಮಕ್ಕೆ ವಿರೋಧವಾಗಿ ವರ್ತಿಸಿದವರು ದೇವರ ಕರುಣೆಯ ಕುರಿತು ನಿರಾಶೆಗೊಳ್ಳದಿರಲಿ. ಖಂಡಿತವಾಗಿಯೂ ಆತನು ಅತ್ಯಂತ ಕ್ಷಮಿಸುವವನೂ, ದಯಾಮಯನೂ ಆಗಿದ್ದಾನೆ.' (ಪವಿತ್ರ ಖುರ್‌ಆನ್ 39:53).

ಆತನೇ ಸರ್ವಾಧಿಕಾರಿ. ಆತನೇ ಸರ್ವ ಸೃಷ್ಟಿಯನ್ನುಂಟುಮಾಡಿದವನು. ಆತನು ತಾನು ಇಚ್ಛಿಸಿದವನನ್ನು ಕ್ಷಮಿಸುತ್ತಾನೆ ಮತ್ತು ಶಿಕ್ಷೆಯು ಪಾಪಿಗೆ ಗುಣಕರವಾದರೆ ಶಿಕ್ಷಿಸುತ್ತಾನೆ. (ಜನರನ್ನು ಕೆಲಸಕ್ಕೆ ನೇಮಿಸಿದ ಗೃಹಸ್ಥನ ಉಪ ಕಥೆಯನ್ನು ಓದಿರಿ. ಆತನು ಕೊನೆಗೆ ಹೇಳಿದನು: 'ನಾನು ನನ್ನಿಚ್ಛೆಯಂತೆ ನನ್ನವರೊಂದಿಗೆ ವರ್ತಿಸುವಂತೆ ಇವರೊಡನೆ ವರ್ತಿಸುವುದು ನ್ಯಾಯಸಮ್ಮತವಾಗದೆ?' ಯಜಮಾನಿಗೆ ತನ್ನ ಸೇವಕರನ್ನು ಕ್ಷಮಿಸಲು ಅಧಿಕಾರವಿದೆ ಎಂದು ಇದರಿಂದ ವ್ಯಕ್ತವಾಗುತ್ತದೆ).

ಒಬ್ಬ ಪಾಪಿ ಅತ್ಯಂತ ಕ್ಷಮಾಶೀಲನಾದ ದೇವರ ಸನ್ನಿಧಿಯಲ್ಲಿ ತನ್ನ ಹಣೆಯನ್ನಿರಿಸಿ ಪಾಪದಿಂದ ಪಶ್ಚಾತ್ತಾಪಗೊಂಡವನಾಗಿ ಆರ್ದ್ರ ಹೃದಯನಾಗಿ, ಕಣ್ಣೀರಿಡುತ್ತಾ ತಾನೆಂದಿಗೂ ಪಾಪಮಾಡಲಾರೆನೆಂಬ ದೃಢನಿಶ್ಚಯದಿಂದ ಪ್ರಾರ್ಥಿಸಿದರೆ ತಂದೆತಾಯಿಗಳಿಗಿಂತಲೂ ಕರುಣಾಮಯನಾದ ದೇವರು ದಯಾಮಯನಾಗಿ ಆತನ ಸಹಾಯಕ್ಕೆ ಬಂದು ಆತನ ಪಾಪಗಳನ್ನು ಪರಿಹರಿಸುವನು. ಪಾಪವು ಈ ರೀತಿ ಮಾತ್ರ ನ್ಯಾಯವಾಗಿ ಪರಿಹರಿಸಲ್ಪಡುತ್ತದೆ. ಒಬ್ಬ ರಾಜನು ತನಗೆ ಹತ್ತು ಸಾವಿರ ಹೊನ್ನಿನ ನಾಣ್ಯಕೊಡಲು ಬಾಕಿಯಾಗಿದ್ದ ಸೇವಕನ ಲೆಕ್ಕ ವಿಚಾರಿಸಿದ ಕಥೆ ಗೊತ್ತಿಲ್ಲವೇ? ಆಗ ಸೇವಕನು

ರಾಜನಿಗೆ ಅಡ್ಡಬಿದ್ದು ಆತನೊಡನೆ ಬೇಡಿದನು: "ಒಡೆಯನೇ ಸ್ವಲ್ಪ ತಾಳಿಕೋ, ನಿನ್ನದೆಲ್ಲಾ ನಾನು ಕೊಟ್ಟು ತೀರಿಸುತ್ತೇನೆ." (ಮತ್ತಾಯ 18:26, 27). ಆಗ ಆ ಸೇವಕನ ಯಜಮಾನನು ಕೃಪಾಮಯನಾಗಿ ಆತನಿಗೆ ಸಾಲ ಬಿಟ್ಟುಕೊಟ್ಟು ಆತನನ್ನು ಬಿಡುಗಡೆಗೊಳಿಸಿದನು*

ಅಪೋಸ್ತಲನಾದ ಪೇತ್ರನು ಯೇಸುಕ್ರಿಸ್ತರೊಡನೆ ನನ್ನ ಸಹೋದರನು ಎಷ್ಟು ಸಲ ಪಾಪ ಮಾಡಿದರೆ ನಾನು ಕ್ಷಮಿಸಬಹುದು ? ಏಳು ಸಾರಿಯೋ? ಎಂದಾಗ "ಏಳೆಪ್ಪತ್ತು ಸಾರಿ" ಎಂದು ಯೇಸುಕ್ರಿಸ್ತರು ಉತ್ತರಿಸಿದರು (ಮತ್ತಾಯ 18:21, 22). ಮನುಷ್ಯರು ದಯಾಮಯರಾಗಿ ತಮ್ಮ ವಿರುದ್ಧ ವರ್ತಿಸಿದವರನ್ನು ಶಿಕ್ಷಿಸದೆ ಕ್ಷಮಿಸಬಲ್ಲರಾದರೆ ಎಲ್ಲರಿಗಿಂತಲೂ ದಯಾಮಯನಾದ ದೇವರು ತನ್ನ ಕೃಪೆಯಿಂದ ಅನುಗ್ರಹರೂಪವಾಗಿ ಆತನ ವಿರುದ್ಧ ಪಾಪ ಮಾಡಿದವರನ್ನು ಶಿಕ್ಷಿಸುವುದು ಅನ್ಯಾಯವಾಗುವುದು ಹೇಗೆ? ಪಾಪಪರಿಹಾರಕ್ಕೆ ಸರಿಯಾದ ಮಾರ್ಗ ಪಶ್ಚಾತ್ತಾಪ ಮತ್ತು ಪಾಪಪರಿಹಾರ ಯಾಚನೆಯಾಗಿದೆ. ಇದನ್ನೇ ಪವಿತ್ರ ಖುರ್-ಆನ್ ಮತ್ತು ಎಲ್ಲಾ ಪ್ರವಾದಿಗಳು ಉಪದೇಶಿಸಿರುವರು. ದೇವರು ಪಾಪಿಗಳ ಕುರಿತು ಪವಿತ್ರ ಖುರ್-ಆನಿನಲ್ಲಿ ಈರೀತಿ ಹೇಳಿರುವನು: "ಪಾಪದ ಕುರಿತು ಪಶ್ಚಾತ್ತಾಪಗೊಂಡು ಉತ್ತಮವಾದ ವಿಶ್ವಾಸಹೊಂದಿ ಯಾರಾದರೂ ಉತ್ತಮವಾಗಿ ವರ್ತಿಸಿದರೆ ದೇವರು ಇವರ ಕೆಟ್ಟಕೆಲಸಗಳನ್ನು ಉತ್ತಮ ಕೆಲಸಗಳಿಂದ ಪರಿವರ್ತಿಸುವನು ಮತ್ತು ದೇವರು ಬಹಳ ಕ್ಷಮಿಸುವವನೂ ದಯಾಮಯನೂ ಆಗಿದ್ದಾನೆ" (ಪವಿತ್ರ ಖುರ್‌ಆನ್ 25:70).

ಯೆಹೆಜ್ಕೇಲನೆಂಬ ಪ್ರವಾದಿಯೊಡನೆ ದೇವರು ಈರೀತಿ ಹೇಳಿದುದಾಗಿ ಬೈಬಲಿನಲ್ಲಿದೆ:—

"ಪಾಪಮಾಡುವವನೇ ಸಾಯುವನು; ಮಗನು ತಂದೆಯ ದೋಷಫಲವನ್ನು ಅನುಭವಿಸನು, ತಂದೆಯು ಮಗನ ದೋಷಫಲವನ್ನು ಅನುಭವಿಸನು; ಶಿಷ್ಟನ ಶಿಷ್ಟತನದ ಫಲವು ಶಿಷ್ಟನದೇ, ದುಷ್ಟನ ದುಷ್ಟತನದ ಫಲವು ದುಷ್ಟನದೇ. ಆದರೆ ದುಷ್ಟನು ತಾನು ಮಾಡುತ್ತಿದ್ದ ಪಾಪಗಳನ್ನೆಲ್ಲಾ ಬಿಟ್ಟುಬಿಟ್ಟು ನನ್ನ ಸಕಲ ವಿಧಿಗಳನ್ನು ಕೈಗೊಂಡು ನೀತಿ ನ್ಯಾಯಗಳನ್ನು ನಡೆಸಿದರೆ ಸಾಯನು, ಬಾಳೇಬಾಳುವನು. ಅವನು ಮಾಡಿದ ಯಾವ ಅಪರಾಧವೂ ಅವನ ಲೆಕ್ಕಕ್ಕೆ ಸೇರಿಸಲ್ಪಡದು. ಅವನು ಮಾಡುತ್ತಿರುವ ಸದ್ಧರ್ಮದಿಂದಲೇ ಅವನು ಬಾಳುವನು. (ಯೆಹೆಜ್ಕೇಲನು 18:20-22). ಇದೇರೀತಿ (II ಪೂರ್ವಕಾಲ ವೃತ್ತಾಂತ 7:12-14) ಮತ್ತು ಯೆಶಾಯ 55:7ರಲ್ಲಿ ವಿನಯ, ಪ್ರಾರ್ಥನೆ, ದೇವರ ಅನುಗ್ರಹ ಯಾಚನೆ, ದುಷ್ಕೃತ್ಯ ಮತ್ತು ದುರ್ನೀತಿಗಳ ತ್ಯಾಗ ಇವುಗಳಿಂದಲೇ ಪಾಪಪರಿಹಾರಗೊಳ್ಳುವುದೆಂದು ವ್ಯಕ್ತವಾಗುತ್ತದೆ.

ಕ್ರೈಸ್ತರು ನಂಬುವಂತೆ ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾಗುವುದರಿಂದ ಪಾಪವು ಪರಿಹಾರಗೊಳ್ಳಲಾರದು. ಒಬ್ಬ ನಿರಪರಾಧಿಯ ರಕ್ತವನ್ನು ದೇವರು ಸುರಿಸಿ ಆತನನ್ನು ಶಿಕ್ಷಿಸಿ ಇತರರ ಪಾಪ ಪರಿಹರಿಸಿದನೆಂದು ಹೇಳುವುದು ದೊಡ್ಡ ಪಾಪವಾಗಿದೆ. ನಿಮ್ಮೊಡನೆ ಒಂದು ಸಂಗತಿ ನನಗೆ ಅತ್ಯಂತ ವಿಶ್ವಾಸದಿಂದ ಹೇಳಬೇಕಾಗಿದೆ. ಯೇಸುಕ್ರಿಸ್ತರು ಒಮ್ಮೆಯಲ್ಲ ಒಂದು ಸಾವಿರ ಸರ್ತಿ ಶಿಲುಬೆಗೆ ಕೊಡಲ್ಪಟ್ಟರೂ ತಮ್ಮ ಮರಣದಿಂದ ಮಾನವರ ಪಾಪಪರಿಹಾರ ಮಾಡಲಾರರು. ದೇವರು ತನ್ನ ಪ್ರೀತಿ ಪಾತ್ರನಾದ ಪ್ರವಾದಿ ಯೇಸುಕ್ರಿಸ್ತರನ್ನು ಶಿಲುಬೆಯ ಮರಣಕ್ಕೆ ತುತ್ತಾಗಿಸಿ ಅವರನ್ನು ಪಾಪಿಯನ್ನಾಗಿ ಮಾಡಿ ಅವರು ದೇವರನ್ನು ತ್ಯಜಿಸಿ ಆಜ್ಞಾಲಂಘಕರಾಗುವಂತೆ ನಮ್ಮ ಪಾಪಪರಿಹಾರಕ್ಕಾಗಿ ಮಾಡಿದನೆಂದು ಭಾವಿಸುವುದು ಬಹಳ ಅನುಚಿತವಾಗಿದೆ. ವಾಗ್ದಾನ ಮಾಡಲ್ಪಟ್ಟ ಮೆಸ್ಸಾಯರನ್ನು ದೇವರು ಈ ಕಾಲದಲ್ಲಿ ಕಳುಹಿಸಿದ ಒಂದು ಉದ್ದೇಶ ಯೇಸುಕ್ರಿಸ್ತರನ್ನು ಶಿಲುಬೆಯ ಮರಣದ ಶಾಪದಿಂದ ಮುಕ್ತರೆಂದು ಘೋಷಿಸಲಿಕ್ಕಾಗಿದೆ. ಇದು ದೇವರ ಇಚ್ಛೆಯಾಗಿದೆ.

---

* ನಾನು ಈ ರೀತಿ ಬರೆದಾಗ ಮೇಲೆ ಬರೆದ ಕಾರ್ಯದರ್ಶಿ ಮಹಿಳೆಯು ಈ ರೀತಿ ಉತ್ತರಿಸಿದಳು: "ನಾನು ಅದನ್ನು ಓದಿರುವೆನು. ಆದರೆ ಆ ರೀತಿ ಕ್ಷಮಿಸಿದುದು, ಅಷ್ಟು ದೊಡ್ಡ ಸಂಖ್ಯೆಯ ಹಣ ಬಿಟ್ಟುಕೊಟ್ಟುದು ನಿಜವಾಗಿಯೂ ಮಹಾತ್ಯಾಗವಾಗಿದೆ." ನಾನು ಈ ರೀತಿ ಉತ್ತರ ಬರೆದೆ: "ಒಬ್ಬ ಮನುಷ್ಯನು ದೊಡ್ಡ ಸಾಲವನ್ನು ನಷ್ಟವನ್ನನುಭವಿಸಿ ಬಿಟ್ಟುಕೊಡಲು ಸಮರ್ಥನಾದರೆ, ಸರ್ವಶಕ್ತನಾದ ದೇವರು ಯಾವುದೇ ನಷ್ಟಕ್ಕೆ ಗುರಿಯಾಗದೆ ಕ್ಷಮಿಸಲು ಎಷ್ಟು ಶಕ್ತನಾಗಿರುವನು ? ಈ ಬೈಬಲ್ ಕಥೆ ಸಹ ಪಶ್ಚಾತ್ತಾಪ ಮತ್ತು ಕ್ಷಮಾಯಾಚನೆ ಕ್ಷಮಿಸಲ್ಪಡಲು ಸರಿಯಾದ ದಾರಿಯಾಗಿದೆಯೆಂದು ತೋರಿಸುತ್ತದೆ. ಆದರೆ ಒಬ್ಬ ನಿರಪರಾಧಿಯ ರಕ್ತ ಸುರಿಸದೆ ಅಥವಾ ಆತ್ಮಹತ್ಯೆ ಮಾಡದೆ ದೇವರು ಪಾಪವನ್ನು ಕ್ಷಮಿಸುವುದರಲ್ಲಿ ನ್ಯಾಯವಿಲ್ಲವೆಂದು ನಿಮ್ಮ ಅಭಿಪ್ರಾಯವಾಗಿದೆ."

ಆತನ ಇಷ್ಟ ನಿಶ್ಚಯವಾಗಿ ಪೂರ್ತಿಯಾಗುವುದು. ವಿವೇಕಿಗಳೂ ಬುದ್ಧಿವಂತರೂ ಆದ ಕ್ರೈಸ್ತರು ಬಹು ದೈವಾರಾಧಕರಿಂದ ಎರವಲು ಪಡೆದ ಎಲ್ಲಾ ಅವಿವೇಕ ತನದ ತತ್ವಗಳನ್ನು ಕೈಬಿಡುವ ಕಾಲ ಸಮೀಪಿಸುತ್ತಿದೆ.



ಯೇಸುಕ್ರಿಸ್ತರು ಒಬ್ಬ ಪ್ರವಾದಿಯಾಗಿದ್ದರು. ಅವರನ್ನು ದೇವರು ಶಿಲುಬೆಯ ಶಾಪಗ್ರಸ್ತ ಮರಣದಿಂದ ರಕ್ಷಿಸಿ ಇತರ ಪವಿತ್ರ ಪ್ರವಾದಿಗಳಂತೆ ಸ್ವಾಭಾವಿಕ ಮರಣ ಹೊಂದುವಂತೆ ಮಾಡಿರುವನು.

( ಮುಂದುವರಿಯುವುದು )

## Statemeent about the ownership and other particulars about newspaper

# YUGARASHMI

Form IV (See Rule 8)

1. Place of Publication : Mangalore.
2. Periodicity of Publica·ion : Quarterly.
3. Printer's Name: A. B. Sunder Ram Shetty
   Nationality: Indian
   Address : Ku shekar, Mangalore-575005.
4. Publisher's Name: Muhammad Yusuf
   Nationality: Indian
   Address: 23/1008, Ansari Road,
   Bunder, Mangalore-575001.
5. Editor's Name : Muhammad Yusuf
   Nationality : Indian
   Address : 23/1008, Ansari Road,
   Bunder, Mangalore-575001.
6. Name and address of individuals who own the news paper and partners or share-olders holding more than one per cent of the total capital — Jamath Ahmadiyya, 23/1008, Ansari Road, Bunder, Mangalore-575001.

I, Muhammad Yusuf, hereby declare that the particulars given above are true to the best of my knowledge and belief.

Date: 1-3-1977

(Sd.) **Muhammad Yusuf.**

Regd. with the Registrar of Newspapers for India, Regd. No. R. N. 27354/75
**YUGARASHMI Kannada Quarterly,**
**January – March 1977 / Sulh – Aman 1356**


# BOOKS ON ISLAM AND CONTEMPORARY RLIGIONS

1. **Holy Quran with Arabic Text and English Translation** 12-00
2. **Ahmadiyyat or The True Islam** 8-00
   By Hazrat Mirza Bashiruddin Mahmud Ahmad
3. **New World Order** 2-25
   By Hazrat Mirza Bashiruddin Mahmud Ahmad
4. **The Teachings of Islam** 6-00
   By Hazrat Mirza Ghulam Ahmad
5. **Characteristics of the Quramic Teach gs** 1-00
   By Hazrat Mirza Bashiruddin Mahmmd Ahmad.
6. **Where did Jesus Die?** 2-25
   By J. D. Shams
7. **The Tomb of Jesus** 0-75
   By Sufi M. R. Bengali
8. **Jesus in India** 2-25
   By Hazrat Mirza Ghulam Ahmad
9. **The Christian Doctrine of Atonement** 1-50
   By Dr. Mufti Muhammad Sadiq.
10. **An Interpretation of Islam** 1 50
    By Prof. Dr. Laura Veccia Vaglieri

Write to

**NAZIR DAWAT-O-TABLIGH**

**P. O. QADIAN – 143516. (Punjab)**


Printed by: A.B. Sunder Ram Shetty, at Aruna Printing Press, Dongerkery Mangalore and Edited and Published by Muha mad Yusuf on behalf of Jamath Ahamadiyya Mangalore, at 23/1008 Ansari Road. Bunder, Mangalore-575001.